ಗೌ

ಲಂಕೇಶ್

ಮೇ 6, 2009 ರೂ. 12/-




ಆತಂಕದಲ್ಲಿ ಅನಂತ್

ವಿಚಿತ್ರ ಜಾತಿಗಳು

ಬ್ರಾಹ್ಮಣ-ಬಣಜಿಗ
ಲಿಂಗಾಯತರ ವಿರುದ್ಧ
ಪಂಚಮಸಾಲಿ
ಕುರುಬ, ಒಕ್ಕಲಿಗ
ದಲಿತ, ಈಡಿಗ, ಗೊಲ್ಲ
ಬಂಟ, ಮೊಗವೀರ
ಸಾದರು, ಗಾಣಿಗರ

ಒಂದಾಯ



ದೇವೇಗೌಡ ಗೆಲ್ಲಲಿ

ಸಂಸತ್ತಿಗೆ ಕುನ್ನೂರ ಕೇಶವಕೃಪಾಗೆ ಜೋಶಿ





ಯಡ್ಡಿ ಸಂಪತ್ತಿಗೆ ಬಂಗಾರಿ ಸವಾಲ್

ಮಂಡ್ಯ: ಅಂಬಿಗೆ ಚಲುವ ಅಡ್ಡಗಾಲು



ಚುನಾವಣಾ ಪ್ರಣಾಳಿಕೆಗಳು



ಗೊತ್ತೂ ಇಲ್ಲ ಗುರಿಯೂ ಇಲ್ಲ

ಚುನಾವಣೆಯಲ್ಲಿ ಸ್ಪರ್ಧಿಸಿರುವ ಪಕ್ಷಗಳು ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿ ಎರಡು ಕ್ರಿಯಾಕರ್ಮಗಳನ್ನು ಮಾಡಲೇಬೇಕಿರುತ್ತದೆ. ಮೊದಲನೆಯದು 2002ರ ಸುಪ್ರೀಂಕೋರ್ಟಿನ ಆದೇಶದಿಂದಾಗಿ ಪ್ರತಿಯೊಬ್ಬ ಅಭ್ಯರ್ಥಿಯೂ ತಾನು ಹೊಂದಿರುವ ಆಸ್ತಿಪಾಸ್ತಿಗಳನ್ನು ಬಹಿರಂಗಗೊಳಿಸಬೇಕು. ಎರಡನೆಯದು ತಾವು ಗೆದ್ದು ಬಂದರೆ ಏನೆಲ್ಲಾ ಮಾಡುತ್ತೇವೆಂಬ ಯೋಜನೆಯನ್ನು ಜನರ ಮುಂದಿಡುವ ಚುನಾವಣಾ ಪ್ರಣಾಳಿಕೆಗಳನ್ನು ಬಿಡುಗಡೆಗೊಳಿಸಬೇಕು. ಎರಡನೆಯದು ಕಡ್ಡಾಯವಲ್ಲವಾದರೂ ಎಲ್ಲಾ ಪಕ್ಷಗಳು ಚುನಾವಣಾ ಸಮಯದಲ್ಲಿ ತಮ್ಮ ಪ್ರಣಾಳಿಕೆಯನ್ನು ಬಿಡುಗಡೆ ಮಾಡುವ ಶಾಸ್ತ್ರ ಮಾಡುತ್ತವೆ. ಎರಡೂ ವಿಷಯಗಳಲ್ಲಿ ಯಾವುದೇ ಪಕ್ಷಕ್ಕೆ ಪ್ರಾಮಾಣಿಕತೆ ಇರುವುದಿಲ್ಲ. ಅಭ್ಯರ್ಥಿಯ ಆಸ್ತಿ ಘೋಷಣೆಯಲ್ಲಿ ಎಷ್ಟು ಸುಳ್ಳಿರುತ್ತದೋ ಅದಕ್ಕಿಂತ ಹತ್ತು ಪಟ್ಟು ಸುಳ್ಳುಗಳು ಪ್ರಣಾಳಿಕೆಗಳಲ್ಲಿರುತ್ತವೆ. ಚುನಾವಣಾ ನೀತಿ ಸಂಹಿತೆಗಳನ್ನು ಕಡ್ಡಾಯವಾಗಿ ಜಾರಿ ಮಾಡಿ ಪಾರದರ್ಶಕ ಮತ್ತು ನ್ಯಾಯೋಚಿತ ಚುನಾವಣೆ ನಡೆಸುತ್ತಿದ್ದೇವೆ ಎಂದು ಹೇಳಿಕೊಳ್ಳುವ ಚುನಾವಣಾ ಆಯೋಗ ಹೆಂಡ-ಹಣ ಹಂಚುವುದನ್ನು ನಿಯಂತ್ರಿಸುತ್ತದೆಯೇ ವಿನಃ ಪುಕ್ಕಟೆ ಮತ್ತು ಸುಳ್ಳು ಭರವಸೆಗಳನ್ನು ಹಂಚುವುದನ್ನು ತಡೆಯುವ ಬಗ್ಗೆ ಯಾವುದೇ ನೀತಿಗಳನ್ನು ಈವರೆಗೆ ರೂಪಿಸಿಲ್ಲ. ಹಣ ಹೆಂಡ ಮತದಾರರನ್ನು ಭ್ರಷ್ಟಗೊಳಿಸಿದರೆ ಪೊಳ್ಳು ಪ್ರಣಾಳಿಕೆಗಳ ಮೂಲಕ ಬಹಿರಂಗವಾಗಿ ಜನರಿಗೆ ದ್ರೋಹ ಬಗೆಯುವುದು ಪ್ರಜಾತಂತ್ರವನ್ನೇ ಭ್ರಷ್ಟಗೊಳಿಸುತ್ತದೆ. ಆದರೆ ನ್ಯಾಯಾಂಗ, ಚುನಾವಣಾ ಆಯೋಗ, ಪಕ್ಷಗಳು ಎಲ್ಲವೂ ಇರುವ ಭ್ರಷ್ಟ ವ್ಯವಸ್ಥೆಯನ್ನೇ ಪ್ರಜಾತಂತ್ರವೆಂದು ನಂಬಿಸಲು ಹೊರಟಿದೆಯೇ ವಿನಃ ನಿಜವಾದ ಪ್ರಜಾತಂತ್ರವನ್ನು ಜಾರಿಗೆ ತರುವೆಡೆ ಯಾವ ಪ್ರಯತ್ನಗಳನ್ನೂ ಹಾಕುವುದಿಲ್ಲ.

ಇವೆಲ್ಲಾ ಗೊತ್ತಿರುವ ಸತ್ಯಗಳೇ! ಈಗ ಪ್ರಣಾಳಿಕೆಗಳ ಬಗ್ಗೆ ಹೊಸದೇನೆಂದರೆ ಯಾವ ರೀತಿ ಅವು ಜನರಿಗೆ ಮೋಸ ಮಾಡಿವೆ ಎಂಬುದಷ್ಟೆ. ಹೆಚ್ಚು ಕಡಿಮೆ ಎಲ್ಲಾ ಪ್ರಮುಖ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳನ್ನು ಹೊರತಂದಿರುವುದರಿಂದ ಈ ದೇಶದ ಭವಿಷ್ಯದ ಬಗ್ಗೆ ಯಾವ ಹೊಸ ಸುಳ್ಳುಗಳನ್ನು ಹೇಳಿವೆ ಎಂಬುದನ್ನು ಈಗ ಗಮನಿಸಬಹುದು. ಈ ಚುನಾವಣೆಯಲ್ಲಿ 4000ಕ್ಕೂ ಹೆಚ್ಚು ಅಭ್ಯರ್ಥಿಗಳು ಮತ್ತು 40ಕ್ಕೂ ಹೆಚ್ಚು ಪಕ್ಷಗಳು ಸ್ಪರ್ಧಿಸುತ್ತಿವೆ. ಆದರೂ ಅಂತಿಮವಾಗಿ ಆಳ್ವಿಕೆಯ ಚುಕ್ಕಾಣಿ ಹಿಡಿಯುವವರು ಅಥವಾ ಪ್ರಮುಖ ವಿರೋಧ ಪಕ್ಷಗಳಾಗುವವರು ಕಾಂಗ್ರೆಸ್, ಬಿಜೆಪಿ ಮತ್ತು ತೃತೀಯ ರಂಗದ ಪಕ್ಷಗಳೇ ಆಗಿರುವುದರಿಂದ, ಈ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಜನರ ಬದುಕನ್ನು ಪ್ರಭಾವಿಸುವ ಪ್ರಮುಖ ವಿಷಯಗಳ ಬಗ್ಗೆ ಏನು ಯೋಜನೆ ಹೊಂದಿವೆ ಎಂಬುದನ್ನು ಪರಿಶೀಲಿಸೋಣ!

ಕೃಷಿ ಮತ್ತು ರೈತಾಪಿ: ಈ ಚುನಾವಣೆಯಲ್ಲಿ ಓಟು ಚಲಾಯಿಸಲಿರುವ 74 ಕೋಟಿ ಮತದಾರರಲ್ಲಿ 50 ಕೋಟಿ ಮತದಾರರು ರೈತಾಪಿ ವರ್ಗದವರೇ. ಕಳೆದ ಹತ್ತು ವರ್ಷಗಳಲ್ಲಿ 2 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೆ ಅದಕ್ಕೆ ಕಾರಣ ಅವರು ಬೆಳೆದ ಬೆಲೆಗೆ ಸರಿಯಾದ ಬೆಲೆ ಸಿಗದಿರುವುದು. WTO ಒಪ್ಪಂದದಿಂದಾಗಿ ಸರ್ಕಾರ ನೀಡುತ್ತಿದ್ದ ಬೆಂಬಲ ಕಡಿಮೆಯಾಗಿ ಗೊಬ್ಬರ, ಬೀಜ, ಸಾಲದ ದರ, ವಿದ್ಯುತ್ತಿನ ಬೆಲೆ ಎಲ್ಲವೂ ಹೆಚ್ಚಾಗಿವೆ. ರೈತರ ಬವಣೆ ತೀರಬೇಕೆಂದರೆ ನಮ್ಮ ದೇಶ ಈ ಒಪ್ಪಂದದಿಂದ ಹೊರಬರಬೇಕು ಮತ್ತು ಕೃಷಿಯ ಮೇಲೆ ಹೆಚ್ಚಿನ ಸಾರ್ವಜನಿಕ ಹೂಡಿಕೆಯಾಗಬೇಕು. ಆದರೆ ಯುಪಿಎ ಮತ್ತು ಎನ್‌ಡಿಎ ಮತ್ತು ತೃತೀಯ ರಂಗದ ಪಕ್ಷಗಳೆಲ್ಲವೂ ಕೇಂದ್ರದಲ್ಲಿ ಮತ್ತು ತಾವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ WTO ಶರತ್ತಿಗೆ ಮಣಿದೇ ಕೃಷಿಯನ್ನು ಖಾಸಗೀಕರಿಸುವ, ಎಸ್‌ಇಜೆಡ್‌ಗಳ ಹೆಸರಲ್ಲಿ ರೈತರನ್ನು ಒಕ್ಕಲೆಬ್ಬಿಸುವ ನೀತಿಗಳನ್ನೇ ಅನುಸರಿಸುತ್ತಾ ಬಂದಿವೆ. ಹೀಗಾಗಿ ಈ ಬಾರಿ ಈ ಪಕ್ಷಗಳು ನಿಜಕ್ಕೂ ರೈತಪರ ಎಂದು ಒಪ್ಪಿಕೊಳ್ಳಬೇಕೆಂದರೆ ಈ ಒಪ್ಪಂದದಿಂದ ಹೊರಬರುವ, ಸಾರ್ವಜನಿಕ ಹೂಡಿಕೆ ಹೆಚ್ಚಿಸುವ, ಬೆಂಬಲ ಬೆಲೆ ನೀಡುವ ನೀತಿಗಳನ್ನು ಘೋಷಿಸಬೇಕಿತ್ತು.

ಆದರೆ ಯಾವ ಪಕ್ಷಗಳೂ ತಮ್ಮ ಪ್ರಣಾಳಿಕೆಗಳಲ್ಲಿ ಇದರ ಬಗ್ಗೆ ಸೊಲ್ಲೆತ್ತಿಲ್ಲ. ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಆಹಾರದ ಹಕ್ಕನ್ನು ಕಾತರಿಗೊಳಿಸುವ ಮಸೂದೆ ತರುವ, ಹೊಸ ಭೂ ಆಕ್ರಮಣ ಕಾಯಿದೆ ತರುವ ಭರವಸೆ ನೀಡಿದೆ. ಬಿಜೆಪಿ ಪಕ್ಷ ಎಲ್ಲಾ ರೈತರ ಸಾಲವನ್ನು ಮನ್ನಾ ಮಾಡುವ ಮತ್ತು ರೈತರಿಗೆ ಪಿಂಚಣಿ ನೀಡುವ, ಬೆಳೆ ವ್ಯತ್ಯಯಕ್ಕೆ ವಿಮೆ ಮಾಡಿಸುವ ಭರವಸೆಯನ್ನು ನೀಡಿದೆ. ತೃತೀಯ ರಂಗದ ಪ್ರಮುಖ ಪಕ್ಷವಾದ ಸಿಪಿಎಂ ಭೂ ಸುಧಾರಣೆಗಳನ್ನು ಜಾರಿಗೊಳಿಸುವ, ಕೃಷಿ ಸರಕುಗಳ ಮಾರುಕಟ್ಟೆಯಲ್ಲಿ ವಿದೇಶಿ ಹೂಡಿಕೆಯನ್ನು ತಡೆಗಟ್ಟುವ ಮತ್ತು ಹೊಸ ಭೂವಶ ಕಾಯಿದೆಯನ್ನು ಜಾರಿಗೆ ತರುವ ಭರವಸೆಗಳನ್ನು ನೀಡಿದೆ.

ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣುವಂತೆ ಯಾವ ಪಕ್ಷಗಳು WTO ಶರತ್ತುಗಳಿಂದ ಹೊರಬರುವ ಪ್ರಸ್ತಾಪವನ್ನೇ ಮಾಡಿಲ್ಲ. ಆದರಿಂದ ಹೊರಬರದೆ ಮೇಲಿನ ಯಾವ ಭರವಸೆಗಳನ್ನೂ ಈಡೇರಿಸಲು ಸಾಧ್ಯವಿಲ್ಲ. ಅಲ್ಲದೆ ಸಾಲ ಮನ್ನಾ, ವಿಮೆ ಇತ್ಯಾದಿಗಳಿಗೆ ಹಣವನ್ನು ಎಲ್ಲಿಂದ ಕ್ರೋಢೀಕರಿಸಿಕೊಳ್ಳುತ್ತಾರೆ ಎಂಬ ಯೋಜನೆಯನ್ನೂ ಹೇಳಿಲ್ಲ. ಹೀಗಾಗಿ ಎಲ್ಲಾ ಬುರುಡೆ, ಇಲ್ಲಿ ಎಲ್ಲಾ ಬುರುಡೆ!



ಚಾರ್ವಾಕ
▶ ಶಿವಸುಂದರ್

ಪಡಿತರ ಅಕ್ಕಿ: ಬಡವರಿಗೆ ರಿಯಾಯತಿ ದರದಲ್ಲಿ ಕೊಡುತ್ತಿದ್ದ ದವಸ ಧಾನ್ಯಗಳ ಪ್ರಮಾಣವನ್ನು ಶೇ.70ರಷ್ಟು ಕಡಿತಗೊಳಿಸಬೇಕೆಂದು ವಿಶ್ವ ಬ್ಯಾಂಕಿನಿಂದ ಸಾಲ ತೆಗೆದುಕೊಂಡ ಮೇಲೆ ಸಂಸತ್ತಿನಲ್ಲಿ ಜಾರಿಯಾದ 2003ರ FRBM ಕಾಯಿದೆ ಕಡ್ಡಾಯಗೊಳಿಸುತ್ತದೆ. ಆದ್ದರಿಂದಲೇ ಕರ್ನಾಟಕದಲ್ಲೂ 70 ಲಕ್ಷದಷ್ಟಿದ್ದ ಬಿಪಿಎಲ್ ಕಾರ್ಡುಗಳ ಸಂಖ್ಯೆಯನ್ನು 30 ಲಕ್ಷಕ್ಕಿಳಿಸುವ ಕೆಲಸ ಭರದಿಂದ ಸಾಗಿದೆ. ಪ್ರತಿ ಬಜೆಟ್ಟಿನಲ್ಲೂ ಇದಕ್ಕಾಗಿ ಎತ್ತಿಡುತ್ತಿದ್ದ ಹಣದ ಪ್ರಮಾಣ ಕಡಿಮೆಯಾಗುತ್ತಿದೆ. ಆದ್ದರಿಂದಲೇ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಬಡವರಿಗೆ 2 ರೂ. ಅಕ್ಕಿ ಕೊಡುತ್ತೇನೆ ಎಂದು ಭರವಸೆ ನೀಡಿದ್ದ ಬಿಜೆಪಿ ಸರ್ಕಾರ ಎರಡು ಬಜೆಟ್ಟುಗಳಿಂದ ಅದರ ಬಗ್ಗೆ ಮಾತೆತ್ತುತ್ತಿಲ್ಲ. ಈ ಸಾಲಿನಲ್ಲಿ ಪುಕ್ಕಟೆಯಾಗಿ ಕಾರ್ಡುಗಳನ್ನು ಹಂಚುತ್ತಿದೆಯಾದರೂ ಆ ಕಾರ್ಡುಗಳಿಗೆ ಅಕ್ಕಿ ಒದಗಿಸಲು ಬೇಕಾದ ಹಣದ ಅರ್ಧದಷ್ಟನ್ನೂ ಬಜೆಟ್ಟಿನಲ್ಲಿ ಎತ್ತಿಟ್ಟಿಲ್ಲ. FRBM ಕಾಯಿದೆಯನ್ನು ರದ್ದುಗೊಳಿಸುವ ಯಾವ ಪ್ರಸ್ತಾಪವನ್ನು ಮಾಡದೆ ಕಾಂಗ್ರೆಸ್ ಪಕ್ಷ ಪ್ರತಿ ಬಿಪಿಎಲ್ ಕುಟುಂಬಕ್ಕೆ 3 ರೂ. ದರದಲ್ಲಿ ಪ್ರತಿ ತಿಂಗಳು 25 ಕೆಜಿ ಅಕ್ಕಿ ಕೊಡುವ ಭರವಸೆ ನೀಡಿದರೆ, ಬಿಜೆಪಿ ಪಕ್ಷ ಕೆಜಿಗೆ 2 ರೂ. ದರದಲ್ಲಿ 35 ಕೆಜಿ ಅಕ್ಕಿ ಕೊಡುವ ಭರವಸೆ ನೀಡಿದೆ. ಸಿಪಿಎಂ ಪಕ್ಷ ಈ ಕಾಯ್ದೆಯನ್ನು ರದ್ದುಪಡಿಸುವ ಯಾವ ಭರವಸೆಯನ್ನೂ ನೀಡದೆ ಪಡಿತರ ವ್ಯವಸ್ಥೆಯನ್ನು ಇನ್ನಷ್ಟು ವಿಸ್ತರಿಸುವ ಭರವಸೆಯನ್ನು ನೀಡಿದೆ.

ಹೀಗೆ ಎಲ್ಲಾ ಪಕ್ಷಗಳು ಕೋಲು ಮುರಿಯದೆ ಹಾವನ್ನು ಸಾಯಿಸುವ ಭರವಸೆ ನೀಡುತ್ತಿವೆ. ಏಕಕಾಲದಲ್ಲಿ ಅಕ್ಕಿಯ ಮೇಲೆ ಆಸೆಯನ್ನೂ ನೆಂಟರ ಮೇಲೆ ಪ್ರೀತಿಯನ್ನೂ ತೋರಿಸುವ ನಾಟಕವಾಡುತ್ತಿವೆ.

ಜನತೆಯ ಬದುಕನ್ನು ಪ್ರಭಾವಿಸುವ ವಿಷಯಗಳ ಬಗ್ಗೆ ಈ ಎಲ್ಲಾ ಪಕ್ಷಗಳ ನೀತಿ ಒಂದೇ ಇದ್ದರೂ ಬಿಜೆಪಿ ಪಕ್ಷ ಮಾತ್ರ ತನ್ನ ಪ್ರಣಾಳಿಕೆಯಲ್ಲಿ ಈ ದೇಶವನ್ನು ಇನ್ನಷ್ಟು ಅಮೆರಿಕದ ದಾಸ್ಯಕ್ಕೆ ನೂಕುವ ಮತ್ತು ಸರ್ಕಾರದ ವಿರುದ್ಧ ಹೋರಾಡುವ ದಲಿತ, ಆದಿವಾಸಿ ಜನತೆಯ ಮೇಲಿನ ದಮನವನ್ನು ಹೆಚ್ಚಿಸುವ ಎಚ್ಚರಿಕೆಯನ್ನೂ ನೀಡಿದೆ. ತನ್ನ ವಿದೇಶಾಂಗ ನೀತಿಯಲ್ಲಿ ಅಮೆರಿಕದೊಡನೆ ವ್ಯೂಹಾತ್ಮಕ ಮೈತ್ರಿಯನ್ನು ಹೆಚ್ಚಿಸಿಕೊಳ್ಳುವ ಮಾರ್ಗವನ್ನು ಅನುಸರಿಸುವುದಾಗಿ ಅದು ಘೋಷಿಸಿದೆ. ಅದೇರೀತಿ ಪುಂಡುಪೋಕರಿಗಳಿಗೆ ಬಂದೂಕು ಕೊಟ್ಟು ಹೋರಾಟಗಾರರನ್ನು ಸಾಯಿಸುವ ಬರ್ಬರ ಮತ್ತು ಅನಾಗರಿಕ 'ಸಾಲ್ವಾ ಜುಡುಂ' ನೀತಿಯನ್ನು ದೇಶಾದ್ಯಂತ ಅನುಸರಿಸುವುದಾಗಿ ಘೋಷಿಸಿದೆ.

ಎಲ್ಲಾ ಪಕ್ಷಗಳು ಕಳ್ಳರೇ ಆದರೂ ಯಾವ ಕಾರಣಕ್ಕೂ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರಬಾರದೆಂಬುದಕ್ಕೆ ಇಷ್ಟು ಕಾರಣ ಸಾಕಲ್ಲವೇ! ■

No Comments

"ನಗರದ ಮಗುವಿನ ಆಸೆ ಒಂದು ಒಳ್ಳೆ ಪಿಜ್ಜಾ ತಿನ್ನುವುದಿರಬಹುದು, ಅಥವಾ ಏರ್ ಕಂಡೀಷನ್ಡ್ ಥಿಯೇಟರ್‌ನಲ್ಲಿ ಸಿನಿಮಾ ನೋಡುವುದಿರಬಹುದು, ಅಥವಾ ಮತ್ತೊಂದು ಒಳ್ಳೆ ಕಂಪ್ಯೂಟರ್ ಕೊಳ್ಳುವುದಿರಬಹುದು. ಅದೇ ರೀತಿ ಹಳ್ಳಿಯ ಮಗುವಿನ ಆಸೆ ಇನ್ನೊಂದು ಹೊತ್ತಾದರೂ ಹೊಟ್ಟೆ ತುಂಬಾ ಊಟ ಮಾಡುವುದರಬಹುದು. ಎರಡೂ ಕೂಡಾ ಮುಖ್ಯವಾದದ್ದೇ. ರಾಜಕಾರಣಿಗಳು ಎರಡನ್ನೂ ಈಡೇರಿಸಬೇಕು."

-ನಾರಾಯಣಮೂರ್ತಿ




"ವರುಣ್ ಗಾಂಧಿ ತಾವು ಟಿವಿಗಳಲ್ಲಿ ನೋಡಿದ್ದಕ್ಕಿಂತ ಕೆಟ್ಟದಾಗಿ ಮಾತನಾಡಿದ್ದಾರೆಂಬುದು ನಮಗೆ ಮನವರಿಕೆಯಾಗಿದೆ. ಅವರ ಬಗ್ಗೆ ನಾವು ತೆಗೆದುಕೊಂಡ ಕ್ರಮ ಚುನಾವಣಾ ಆಯೋಗದ ಸರ್ವಸಮ್ಮತಿಯಿಂದಲೇ ತೆಗೆದುಕೊಂಡಿದ್ದು ಮತ್ತು ಅದರ ಬಗ್ಗೆ ನಮಗೆ ಯಾವುದೇ ವಿಷಾದವಿಲ್ಲ."

-ಗೋಪಾಲಸ್ವಾಮಿ




"ಭಾರತದ ಕನಿಷ್ಠ ಎರಡು ದಿನಪತ್ರಿಕೆಗಳು ತಮ್ಮ ವರದಿಗಾರರಿಗೆ ಇನ್ನು ಮುಂದೆ ರಿಸೆಷನ್ (ಆರ್ಥಿಕ ಹಿಂಜರಿತ) ಎಂಬ ಪದವನ್ನು ಭಾರತಕ್ಕೆ ಸಂಬಂಧಿಸಿದಂತೆ ಬಳಸಬಾರದೆಂದು ಸೂಚಿಸಿದ್ದಾರೆ. ಏಕೆಂದರೆ ರಿಸೆಷನ್ ಎಂಬುದು ಕೇವಲ ಅಮೆರಿಕದ ಆರ್ಥಿಕತೆಗೆ ಸಂಬಂಧಪಟ್ಟ ವಿಚಾರವಂತೆ!"

-ಪಿ. ಸಾಯಿನಾಥ್



"ನಟರು ಜನರನ್ನು ಸೇರಿಸುವಲ್ಲಿ ಯಶಸ್ವಿಯಾಗುತ್ತಾರೆಯೇ ವಿನಃ ಮತಗಳನ್ನು ಸೆಳೆಯುವಲ್ಲಿ ಅಲ್ಲ."

-ಶತ್ರುಘ್ನ ಸಿನ್ಹಾ




"ಜನತೆಯ ಪ್ರತಿನಿಧಿಗಳು ಜನತೆಯ ಆಶಯದಂತೆ ನಡೆದುಕೊಳ್ಳಬೇಕೇ ವಿನಃ ಜನ ಕಂಟಕರಾಗಬಾರದು."

-ದೊರೆಸ್ವಾಮಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಎಲ್‌ಟಿಟಿಇಯು 'ತಮಿಳ್ ಈಳಂ' ಸ್ಥಾಪಿಸಬೇಕೆಂಬ ಆದರ್ಶವಾದ ಗುರಿಯನ್ನು ಹೊಂದಿದೆ. ಆದರೆ ಅವರ ನಡುವೆ ಉಗ್ರಗಾಮಿಗಳು ಎಲ್ಲಿಂದಲೋ ಬಂದು ನುಸುಳಿ ಬಿಟ್ಟಿದ್ದಾರೆ."

-ಕರುಣಾನಿಧಿ




"ನಾನು ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದು ಜನರ ಸಮಸ್ಯೆಗಳನ್ನು ಬಗೆಹರಿಸಲೆಂದೇ."

-ಜಾಫರ್ ಶರೀಫ್

"ಎಲ್.ಕೆ.ಅಡ್ವಾಣಿ ಮುಖ ನೋಡಿದರೆ ಮುಸ್ಲಿಂ ಮತದಾರರು ಓಟು ಹಾಕಲು ಹಿಂಜರಿಯುತ್ತಾರೆ."

-ನಿತೀಶ್ ಕುಮಾರ್




"ಜಾತಿ ವಿಂಗಡಣೆಯನ್ನು ಮಾಡಿದ್ದು ಮನು ಅಲ್ಲ."

-ಎಸ್. ಎಲ್. ಭೈರಪ್ಪ

"ಈ ಸಾರಿ ನಾವು ಪ್ರಬಲ ಪ್ರತಿಸ್ಪರ್ಧೆ ನೀಡುತ್ತಿದ್ದೇವೆ. ಈ ಬಾರಿ ಪುಟ್ಟಣ್ಣಯ್ಯನವರ ಗೆಲುವು ಖಚಿತ."

-ದೇವನೂರು ಮಹಾದೇವ



ಗಾಂಧಿ ಕೂಡಾ ಹೀಗೆ ಹೇಳಲಿಲ್ಲ!

"ರಂಗ್ ದೇ ಬಸಂತಿಯಲ್ಲಿ ತೋರಿಸಿರುವುದು ಸರಿಯಾದ ಮಾರ್ಗವಲ್ಲ. ನೀವು ವ್ಯವಸ್ಥೆಯೊಳಗಿದ್ದು ಅದರ ಭಾಗವಾಗಿದ್ದಾಗ ಮಾತ್ರ ಅದನ್ನು ಬದಲಿಸಲು ಸಾಧ್ಯ."

-ನವೀನ್ ಜಿಂದಾಲ್

ಇನ್ಫೋಸಿಸ್ ಶೈನಿಂಗ್=ಇಂಡಿಯಾ ಶೈನಿಂಗ್

"ನಮ್ಮ ಜಿಡಿಪಿಯ ಅಭಿವೃದ್ಧಿ ದರ ಉತ್ತಮವಾಗಿದೆ. ವಿದೇಶಿ ವಿನಿಮಯ ಸಾಕಷ್ಟಿದೆ. ನಮ್ಮ ಕ್ರಿಕೆಟಿಗರು ಆಟ ಗೆಲ್ಲುತ್ತಿದ್ದಾರೆ. ಭಿಂದ್ರಾಗೆ ವ್ಯಕ್ತಿಗತ ಒಲಂಪಿಕ್ಸ್ ಪದಕ ಸಿಕ್ಕಿದೆ. ಭಾರತೀಯರ ಬದುಕು ಉತ್ತಮಗೊಳ್ಳುತ್ತಿದೆ ಎಂದು ಹೇಳಲು ಇದಕ್ಕಿಂತ ಬೇರಿನ್ನೇನು ಬೇಕು?"

-ನಾರಾಯಣಮೂರ್ತಿ

ಆದರೆ ಪಾರ್ಲಿಮೆಂಟ್ ಇರುವುದು ಉತ್ತರ ದಿಕ್ಕಿನಲ್ಲಿ, ಸ್ವಾಮಿ!

"800 ವರ್ಷಗಳ ಹಿಂದೆ ಸ್ಥಾಪಿಸಲಾದ ಆಂಜನೇಯನಿಗೆ ಪೂಜೆ ಸಲ್ಲಿಸಿದರೆ ಪಶ್ಚಿಮ ದಿಕ್ಕಿನಿಂದ ಯಾವುದೇ ಅಪಾಯವಿರುವುದಿಲ್ಲ."

-ಶ್ರೀನಿವಾಸ ರಾಮಾನುಜ ಎಂಬ ಚುನಾವಣಾ ಜ್ಯೋತಿಷಿ


ಬಳ್ಳಾರಿ ಕುರುಡು ಹರಿಯಿತೇ, ನ್ಯಾಯಮೂರ್ತಿಗಳೇ?

"ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ನನ್ನನ್ನು ಬಳಸಿಕೊಳ್ಳುವುದಾಗಿ ಹೇಳಿ ಡಿ.ವಿ. ಸದಾನಂದಗೌಡರು ನನ್ನನ್ನು ಪಕ್ಷಕ್ಕೆ ಕರೆತಂದರು. ಅವರಿಗೆ ನಾನು ಸರಿಹೋಗಲಿಲ್ಲ ಅನಿಸುತ್ತೆ, ಈಗ ನನ್ನನ್ನು ಮರೆತೇ ಬಿಟ್ಟಿದ್ದಾರೆ."

- ನ್ಯಾಯಮೂರ್ತಿ ವೆಂಕಟಾಚಲ, ಮಾಜಿ ಲೋಕಾಯುಕ್ತ

ಚಿಂತಕರ ಚಾವಡಿ

ಬೂಟು ಪ್ರತಿಭಟನೆ ಮುರಿದ ಮೂರು ಮಿಥ್ಯೆಗಳು



"1984ರ ಸಿಖ್ ಹತ್ಯಾಕಾಂಡದ ಆರೋಪಿ ಜಗದೀಶ್ ಟೈಟ್ಲರ್‌ಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದ್ದರಿಂದ ಹತಾಶನಾಗಿದ್ದ ಪತ್ರಕರ್ತನೊಬ್ಬ ಗೃಹಮಂತ್ರಿಯ ಪತ್ರಿಕಾಗೋಷ್ಠಿಯಲ್ಲಿ ಎಸೆದ ಬೂಟು ಭಾರತೀಯ ಸಮಾಜದ ಬಗ್ಗೆ ನಾವಿಟ್ಟುಕೊಂಡಿದ್ದ ಮೂರು ಮಿಥ್ಯೆಗಳನ್ನು ಮುರಿದಿದೆ. ಮೊದಲನೆಯದು ಹಿಂದೂಗಳು ಸಹನಾಶೀಲರು ಮತ್ತು ಅಹಿಂಸಾವಾದಿಗಳು ಎಂಬ ಮಿಥ್ಯೆ. 1984ರಲ್ಲಿ ತಾವು ಮಾಡಿರದ ತಪ್ಪಿಗೆ 3500ಕ್ಕೂ ಹೆಚ್ಚು ನಿರಾಯುಧ ಮತ್ತು ಅಮಾಯಕ ಸಿಖ್ಖರನ್ನು ಕೊಂದು ಹಾಕಲಾಯಿತು. ಅವರ ಮೇಲೆ ಬಗೆಬಗೆಯಾದ, ವರ್ಣಿಸಲು ಸಾಧ್ಯವಿಲ್ಲದಂಥ ದೌರ್ಜನ್ಯಗಳನ್ನು ನಡೆಸಿದ್ದು ಈ ಸಹನಾಶೀಲ ಮತ್ತು ಅಹಿಂಸಾವಾದಿ ಸಮಾಜವೇ! ಎರಡನೆಯ ಮಿಥ್ಯೆ ನಮ್ಮದು ನ್ಯಾಯಪರ ಸಮಾಜ ಎಂಬುದು. 1984ರ ಸಿಖ್ ಹತ್ಯಾಕಾಂಡ ನಡೆದು 25 ವರ್ಷಗಳಾಗಿವೆ. ಈವರೆಗೆ ಈ ಪ್ರಕರಣದ ಬಗ್ಗೆ 10 ಆಯೋಗಗಳು ವರದಿ ಕೊಟ್ಟಿವೆ. ಶಿಕ್ಷೆಯಾಗಿರುವುದು 13 ಜನರಿಗೆ ಮಾತ್ರ. ನಿಜವಾದ ಅಪರಾಧಿಗಳು ಈಗಲೂ ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ. ಮೂರನೆಯದಾಗಿ ಸಾಂಕೇತಿಕ ಪ್ರತಿಭಟನೆಗಳಿಗೆ ಈ ಕಾಲದಲ್ಲಿ ಮಹತ್ವವಿಲ್ಲ ಎನ್ನುವ ಮಿಥ್ಯೆ. ವಾಸ್ತವವಾಗಿ ಬೂಟು ಎಸೆತದಂತಹ ಸಾಂಕೇತಿಕ ಪ್ರತಿಭಟನೆಯಿಂದಾಗಿ ಇಬ್ಬರು ಬಲಿಷ್ಠ ಕೊಲೆಪಾತಕಿಗಳಿಗೆ ಟಿಕೆಟ್ ನಿರಾಕರಿಸಲಾಯಿತು. ಸತ್ಯವಾದದ್ದನ್ನು ಹೇಳುತ್ತಾ ಸರಿಯಾದದ್ದಕ್ಕೆ ಬದ್ಧವಾಗಿ ನಡೆದುಕೊಂಡರೆ ಜಗತ್ತು ಬದಲಾಗಬಲ್ಲದು ಎಂಬುದನ್ನು ಇದು ಮತ್ತೆ ನೆನಪಿಸುತ್ತದೆ."

-ತರುಣ್ ತೇಜ್‌ಪಾಲ್

ಪ್ರಮಾಣ ಮತ್ತು ಗುಣಮಟ್ಟದ ನಡುವೆ




ಕಂಡಹಾಗೆ

ಗೌರಿ ಲಂಕೇಶ್

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವವಾದ, ಗೆಯೇ ಜಗತ್ತಿನ ಶೇ. 30 ರಷ್ಟು ಬಡವರನ್ನು ಂದಿರುವ ಭಾರತದಲ್ಲಿ ಕೋಟ್ಯಂತರ ರೂಪಾಯಿಗಳ ವಲ್ಲಿ ಚುನಾವಣೆಗಳು ನಡೆಯುತ್ತಿವೆ. ಐದು ತಗಳಲ್ಲಿ ಒಂದು ತಿಂಗಳ ಕಾಲಕ್ಕಿಂತಲೂ ಹೆಚ್ಚು ಧಿಯಲ್ಲಿ ನಡೆಯುತ್ತಿರುವ ಈ ಜನಾಭಿಪ್ರಾಯ ಹಣೆಯ ಅಗಾಧತೆಯನ್ನು ಕಂಡು ಬೇರೆ ದೇಶದ ಬೆಚ್ಚಿ ಬೀಳುತ್ತಿದ್ದಾರೆ. 700 ಮಿಲಿಯನ್‌ಗಿಂತಲೂ ಚ್ಚು ಮತದಾರರು, ಎಂಟು ಲಕ್ಷಕ್ಕಿಂತಲೂ ಹೆಚ್ಚು ತ್‌ಗಳು, ಮತ ಚಲಾಯಿಸಲು 13 ಲಕ್ಷ ತ್ರಗಳು, ಇಡೀ ಪ್ರಕ್ರಿಯೆಯನ್ನು ನಡೆಸಲೆಂದೇ ಯೋಜಿಸಲಾಗಿರುವ ಆರು ಮಿಲಿಯನ್ ಅಧಿಕಾರಿಗಳು ತ್ತು ಪೊಲೀಸರು.... ಇದೆಲ್ಲ, ನಡೆಯುತ್ತಿರುವುದು ಲ 543 ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲು.

ಇಂಗ್ಲೆಂಡಿನ 'ಟೈಮ್ಸ್' ಪತ್ರಿಕೆಯ ಸಂಪಾದಕೀಯದಲ್ಲಿ ಸಿರುವಂತೆ "ನೆರೆಯ ದೇಶಗಳಾದ ಪಾಕಿಸ್ತಾನ, ಗ್ಲಾ ದೇಶ ಮತ್ತು ಶ್ರೀಲಂಕಾದಂತೆ ಭಾರತ ಎಂದೂ ಧಿಕಾರಕ್ಕಾಗಲಿ ಮೂಲಭೂತವಾದಕ್ಕಾಗಲಿ ತುತ್ತಾ ಆದರೆ ಭಾರತದಲ್ಲಿ ನಿಜಕ್ಕೂ ಪ್ರಜಾಪ್ರಭುತ್ವ ಷ್ಟಿ ಅಸ್ತಿತ್ವದಲ್ಲಿದೆಯೇ? ಅಲ್ಲಿನ ಜನರೆದುರಿಗೆ ಉತ್ತಮ ಕ್ಕಗಳಿವೆಯೇ?"

ಇದು ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತು ನಾವೆಲ್ಲರೂ ಕೇಳಿಕೊಳ್ಳಬೇಕಿರುವ ಮೂಲಭೂತ ಯಾಗಿದೆ. ನಮಗೆಲ್ಲ ಗೊತ್ತಿರುವಂತೆ ಇತ್ತೀಚೆಗೆ ಟಕದಲ್ಲೇ ಅಕ್ರಮವಾಗಿ ಸಾಗಿಸಲ್ಪಡುತ್ತಿದ್ದ 21 ಟಿ ರೂಪಾಯಿಗಳನ್ನು, ಕೋಟ್ಯಂತರ ರೂಪಾಯಿ ಲ್ಯದ ಹೆಂಡ, ಸೀರೆ, ಚಿನ್ನಾಭರಣ ಇತ್ಯಾದಿಗಳನ್ನು ಕಾರಿಗಳು ವಶಪಡಿಸಿಕೊಂಡಿದ್ದಾರೆ. ಖಂಡಿತ ಯೂ ಅಧಿಕಾರಿಗಳ ಕಣ್ಣು ತಪ್ಪಿಸಿ ಅಕ್ರಮವಾಗಿ ಕಲ್ಪಟ್ಟಿರುವ ಹಣ, ಹೆಂಡ, ಆಭರಣಗಳು ಇದಕ್ಕಿಂತ ಡು ಪಟ್ಟು ಹೆಚ್ಚಿನದ್ದಾಗಿರುತ್ತದೆ. ಹೀಗೆ ಹಣಬಲ



ಮತ್ತು ತೋಳ್ಬಲದಿಂದ ಗೆಲ್ಲುವ ಜನ ಅದೆಷ್ಟರಮಟ್ಟಿಗೆ ಜನಪ್ರತಿನಿಧಿಗಳಾಗಿರುತ್ತಾರೆ?

ಇನ್ನು ಚುನಾವಣಾ ಆಯೋಗ ಮತ್ತು ಇತರೆ ಸರ್ಕಾರೇತರ ಸಂಘಟನೆಗಳು ಪ್ರಕಟಿಸಿರುವಂತೆ ಚುನಾವಣಾ ಕಣದಲ್ಲಿ ಕ್ರಿಮಿನಲ್ ಕೇಸುಗಳನ್ನು ಮೈಮೇಲೆ ಎಳೆದುಕೊಂಡಿರುವ ಸಾಕಷ್ಟು ಅಭ್ಯರ್ಥಿಗಳಿದ್ದಾರೆ. ಅಷ್ಟೇ ಅಲ್ಲದೆ ಸಾಕಷ್ಟು ಭ್ರಷ್ಟರೂ, ಜಾತಿವಾದಿಗಳೂ, ಕೋಮುವಾದಿಗಳೂ ಬಡಜನರ ಮತಗಳನ್ನು ಖರೀದಿಸಿಯೇ ಗೆಲುವು ಸಾಧಿಸಲು ಹೊರಟಿದ್ದಾರೆ. ಇದಕ್ಕೆ ಉತ್ತಮ ಉದಾಹರಣೆ ಬಳ್ಳಾರಿ. ಅಲ್ಲಿ ಗಣಿ ರೆಡ್ಡಿಗಳ ಮತ್ತು ಅವರ ಗೂಂಡಾ ಮಿತ್ರ ಶ್ರೀರಾಮುಲುವಿನ ಉದ್ಧಟತನ ಯಾವ ಮಟ್ಟಕ್ಕೆ ಹೋಗಿದೆ ಎಂದರೆ, ಯಾವ ಜನಪರ ಹಿನ್ನೆಲೆಯೂ ಇಲ್ಲದ, ಪ್ರಾಯಶಃ ಸರಿಯಾಗಿ ಮಾತನಾಡುವುದಿರಲಿ, ಓದಲೂ ಬಾರದ ಓರ್ವ ಗೃಹಿಣಿಯನ್ನು ಚುನಾವಣೆಗೆ ನಿಲ್ಲಿಸಿದ್ದಾರಲ್ಲದೆ, ಆಕೆಯನ್ನು ತಮ್ಮ ಹಣದ ಬಲದಿಂದಲೇ ಗೆಲ್ಲಿಸಲಿದ್ದಾರೆ. ಈ ಮಹಿಳೆ ಸಂಸದೆಯಾಗಿ ಎಷ್ಟು ಸಮರ್ಥಳಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಬಲ್ಲಳು? ಎಷ್ಟು ಸಮರ್ಪಕವಾಗಿ ಬಳ್ಳಾರಿ ಜನರ ಸಮಸ್ಯೆಗಳಿಗೆ ಸ್ಪಂದಿಸಬಲ್ಲಳು? ಈಕೆ ಅದೆಷ್ಟರಮಟ್ಟಿಗೆ 'ಜನಪ್ರತಿನಿಧಿ'ಯಾಗಬಲ್ಲಳು?

ಅಂದಮಾತ್ರಕ್ಕೆ ಅನಕ್ಷಸ್ಥರು ಅಥವಾ ಕಡಿಮೆ ಓದಿದವರು ಉತ್ತಮ ಜನನಾಯಕರಾಗಲಾರರು ಎಂದಲ್ಲ. ಆದರೆ ಈ ಶಾಂತಾ ಎಂಬ ಮಹಿಳೆ ಬಗ್ಗೆ ಕನಿಕರ ಹುಟ್ಟುತ್ತದೆ. ಪ್ರಾಯಶಃ ಆಕೆಗೆ ರಾಜಕೀಯ ಬೇಕಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ದುರುಪಯೋಗಪಡಿಸಿಕೊಂಡು ತಮ್ಮ ಪಾಳೆಗಾರಿಕೆಯ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳಲು ಹೊರಟಿರುವ ರೆಡ್ಡಿಗಳ ರಾಜಕೀಯ ದಾಟದ ದಾಳ ಮಾತ್ರ ಆಕೆ. ಶಾಂತಾ ತರಹದ ದಾಳಗಳ ಗೆಲುವು ನಮ್ಮ ಪ್ರಜಾಪ್ರಭುತ್ವದ ಸೋಲು ಎಂದೇ ಪರಿಗಣಿಸಬೇಕಲ್ಲವೇ?

ಇಲ್ಲಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಇನ್ನೊಂದು ದೌರ್ಬಲ್ಯದ ಬಗ್ಗೆಯೂ ಹೇಳಬೇಕಿದೆ. ಒಂದೆರಡು ವಾರಗಳ ಹಿಂದೆ ನಮ್ಮ ಶಿವಸುಂದರ್ ತಮ್ಮ ಚಾರ್ವಾಕ ಕಾಲಂನಲ್ಲಿ ಇದರ ಬಗ್ಗೆ ಬರೆದಿದ್ದರು. ಅದೇನೆಂದರೆ ಓರ್ವ ಅಭ್ಯರ್ಥಿ ಬಹಳಷ್ಟು ಮತದಾರರಿಂದ ತಿರಸ್ಕರಿಸಲ್ಪಟ್ಟಿದ್ದರೂ ಆತ ಇತರೆ ಅಭ್ಯರ್ಥಿಗಳಿಗಿಂತ ಹೆಚ್ಚು ಮತಗಳನ್ನು ಪಡೆದ ಎಂಬ ಕಾರಣಕ್ಕೆ 'ಗೆಲುವು' ಸಾಧಿಸುವುದು. ಉದಾಹರಣೆಗೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಳ್ಳಾರಿಯಿಂದ ಗೆದ್ದ ಕರುಣಾಕರರೆಡ್ಡಿಯನ್ನೇ ತೆಗೆದುಕೊಳ್ಳಿ. ಆ ಕ್ಷೇತ್ರದಲ್ಲಿನ ಮತದಾರರ ಪೈಕಿ ಶೇ. 66.78 ಜನ ಮಾತ್ರ ತಮ್ಮ ಮತ ಚಲಾಯಿಸಿದ್ದರು. ಹಾಗೆ ಚಲಾಯಿಸಿದವರಲ್ಲಿ ಶೇ. 30.23 ಜನ ಕಾಂಗ್ರೆಸ್‌ನ ಕೆ.ಸಿ. ಕೊಂಡಯ್ಯನವರಿಗೂ, ಶೇ. 26.08 ಜನ ಜೆಡಿಎಸ್‌ನ ಬಿ. ನಾಗರಾಜ್ ಅವರಿಗೂ ತಮ್ಮ ಮತಗಳನ್ನು ಹಾಕಿದ್ದರು. ಹಾಗೆಯೇ ಶೇ. 10.13 ಮತದಾರರು ಇತರೆ ಅಭ್ಯರ್ಥಿಗಳನ್ನು ಬೆಂಬಲಿಸಿದ್ದರು. ಒಟ್ಟಾರೆ ಶೇ. 66.44 ಜನ ಕರುಣಾರರೆಡ್ಡಿಯ ವಿರುದ್ಧ ತಮ್ಮ ಮತ ಚಲಾಯಿಸಿದ್ದರು.

ಇದನ್ನು ಇನ್ನೊಂದು ದಿಕ್ಕಿನಿಂದ ನೋಡಿ: ಶೇ. 33.22 ಜನ ಮತ ಚಲಾಯಿಸಿರಲಿಲ್ಲ, ಚಲಾಯಿಸಿದ್ದ ಮತಗಳಲ್ಲಿ ಶೇ. 66.44 ಜನ ಕರುಣಾಕರ ರೆಡ್ಡಿಯನ್ನು ತಿರಸ್ಕರಿಸಿದ್ದರು. ಅಂದರೆ ಕರುಣಾಕರ ರೆಡ್ಡಿ ಕೇವಲ 22% ಜನರ ಬೆಂಬಲ ಪಡೆದಿದ್ದರು. ಆದರೂ ಆತ ಬಳ್ಳಾರಿಯ 'ಜನಪ್ರತಿನಿಧಿ' ಯಾದರು. ಇದು ಪ್ರಜಾಪ್ರಭುತ್ವದ ವ್ಯಂಗ್ಯವಲ್ಲವೇ?

ಇತ್ತೀಚೆಗೆ ಪತ್ರಿಕೆಯೊಂದು ಹೇಳಿರುವಂತೆ ಭಾರತದಲ್ಲಿ ಎಷ್ಟು ಮತದಾರರು, ಬೂತ್‌ಗಳು ಮತಪೆಟ್ಟಿಗೆಗಳು ಇದ್ದವೆ ಎಂಬುದಕ್ಕಿಂತ ಜನರ ಮುಂದೆ ಎಂತಹ ಆಯ್ಕೆಗಳು ಇವೆ ಎಂದು ವಿಶ್ಲೇಷಿಸುವುದು ಮುಖ್ಯ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವವಾದ ಭಾರತದಲ್ಲಿ ಪ್ರಮಾಣಕ್ಕೆ (Quantity) ಯಾವ ಕೊರತೆಯೂ ಇಲ್ಲ, ಕೊರತೆ ಇರುವುದು ಗುಣಮಟ್ಟ (Quality)ದಲ್ಲಿ.... ■

ಯಡ್ಡಿ-ಸೋಮಣ್ಣ ಪಿತೂರಿ ಆತಂಕದಲ್ಲಿ ಅನಂತ್‌ಕುಮಾರ್!



ಬಿಜೆಪಿ ಹಿರಿಯ ನಾಯಕ ಅನಂತ್‌ಕುಮಾರ್‌ಗೆ ಸಣ್ಣ ಮಟ್ಟದಲ್ಲಿ ಗಾಬರಿಯಾಗಿದೆ.

ಸೋಲಿನ ಭಯ ಅದು!

ಈ ದಿನ ಗುರುವಾರ ರಾತ್ರಿ ಲಂಕೇಶ್ ಪ್ರಿಂಟಿಗೆ ಹೊರಡುತ್ತಿದ್ದ ಕೊನೇ ಕ್ಷಣದಲ್ಲಿ ಬಿಜೆಪಿ ಕ್ಯಾಂಪಿನೊಳಗಿಂದಲೇ ಬಂದ ಮಾಹಿತಿಯು ಕೆಲವು ಹೊಸ ವಿಚಾರಗಳನ್ನು ಹೇಳಿದೆ.

ಅದರಲ್ಲಿ ಮುಖ್ಯವಾದ ವಿಚಾರ ಬೆಂಗಳೂರು ದಕ್ಷಿಣ ಸಂಸತ್ ಕ್ಷೇತ್ರದಲ್ಲಿ ಆದ ಮತದಾನದ ಪ್ರಮಾಣ ಕೇವಲ ಶೇ 50 ಎಂಬುದು. ಇದರ ಬಗ್ಗೆ ಅನಂತ್‌ಕುಮಾರ್‌ಗೆ ಗಾಬರಿ. ಏಕೆಂದರೆ ಬಿಜೆಪಿಯ ಸಾಂಪ್ರದಾಯಿಕ ಬೆಂಬಲಿಗರಾದ ಮೇಲ್ವರ್ಗ ಹಾಗೂ ಮೇಲ್ಜಾತಿಯ ಮತದಾರರು ದೊಡ್ಡ ಸಂಖ್ಯೆಯಲ್ಲಿ ಬಂದು ಓಟ್ ಹಾಕಿಲ್ಲ ಎಂಬುದೇ ಆಗಿದೆ.




ಇದರೊಂದಿಗೆ ಕಾಮಾಕ್ಷಿಪಾಳ್ಯ, ವಿಜಯನಗರ, ಗೋವಿಂದರಾಜನಗರ, ಲಕ್ಕಸಂದ್ರ, ಬನಶಂಕರಿ, ಪದ್ಮನಾಭನಗರ ಏರಿಯಾಗಳಲ್ಲಿ ಕುರುಬರು ಹಾಗೂ ಒಕ್ಕಲಿಗರು ಯುದ್ಧಕ್ಕೆ ಹೋಗುವಂತೆ ಹೊರಟು ಕಾಂಗ್ರೆಸ್‌ನ ಕೃಷ್ಣಬೈರೇಗೌಡರಿಗೆ ಓಟ್ ಹಾಕಿ ಬಂದಿದ್ದಾರೆ. ಉಳಿದಂತೆ ಬಿಜೆಪಿ ವಿರೋಧಿಗಳಾದ ಮುಸ್ಲಿಮರು ಹಾಗೂ ದಲಿತ ಇನ್ನಿತರ ಕೆಳಜಾತಿಯವರೂ ಎಂದಿನಂತೆ ನಿಷ್ಠೆಯಿಂದ ಹೋಗಿ ಕಾಂಗ್ರೆಸ್‌ಗೇ ಮತ ನೀಡಿ ಬಂದಿದ್ದಾರೆ.

ಈಗ ಚಲಾವಣೆಯಾಗಿರುವ ಶೇ. 50 ಓಟ್‌ಗಳಲ್ಲಿ ಕಾಂಗ್ರೆಸ್ ಪರವಿರುವವರ ಸಂಖ್ಯೆ ಹೆಚ್ಚಿರುವಂತಿದೆ.

ಯಡ್ಡಿ ಸೋಮಣ್ಣ ಜಂಟಿ ಪಿತೂರಿ

"ಸೋಮಣ್ಣ ಬಿಜೆಪಿಗೆ ಬಂದರೂ ನಮಗೇನೂ ಪ್ರಯೋಜನ ಆಗಲಿಲ್ಲ"

–ಇದು ಬಿಜೆಪಿಯ ಪ್ರಮುಖ ಯುವ ನಾಯಕರೊಬ್ಬರ ಅನಿಸಿಕೆ. ಸೋಮಣ್ಣ ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಬಂದರಾದರೂ ಜನ ಅದೇರೀತಿ ಬಿಜೆಪಿಯತ್ತ ವಲಸೆ ಬರಲಿಲ್ಲ ಮತ್ತು ಹಾಗೆ ಸಾವಿರಾರು ಜನರನ್ನು ಕರೆತರಲು ಸೋಮಣ್ಣನೇನು ಲೋಕನಾಯಕನಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ.



ಆದರೆ ಇಲ್ಲಿ ಲಿಂಗಾಯತರೂ ಸಹ ಅನಂತ್‌ಕುಮಾರ್‌ಗೆ ಓಟ್ ಹಾಕಿಲ್ಲ ಎಂಬ ಅನುಮಾನಗಳಿವೆ. ಯಡ್ಡಿ ಹಾಗೂ ಸೋಮಣ್ಣ ನಡೆಸಿದ ಆಪರೇಷನ್ ಅನಂತ್ ಸಂಚಿನ ಪ್ರತಿಫಲ ಇದು.

ಮತದಾನಕ್ಕೆ ಕೇವಲ ನಾಲ್ಕು ದಿನ ಮೊದಲು ವಿಜಯನಗರದ ಜಯದೇವ ಹಾಸ್ಟೆಲ್‌ನಲ್ಲಿ ಪ್ರಮುಖ ಲಿಂಗಾಯತ ಮುಖಂಡರ ಒಂದು ಸೀಕ್ರೆಟ್ ಮೀಟಿಂಗ್ ಆಯಿತು. ಅಲ್ಲಿ 'ಅನಂತ್‌ಕುಮಾರ್ ಪರ ಕೆಲಸ ಮಾಡುವ ಅಗತ್ಯವಿಲ್ಲ' ಎಂಬ ಒಂದು ಮೆಸೇಜ್ ತಲುಪಿದ ಬಗ್ಗೆ ಈಗ ಗುಟ್ಟು ಹೊರಬಿದ್ದಿದೆ. ತನ್ನ ವಿರೋಧಿ ಅನಂತ್‌ಕುಮಾರ್‌ರನ್ನು ಸೋಲಿಸಿ ಮೂಲೆಗೆ ತಳ್ಳಲು ಇದಕ್ಕಿಂತ ಬೇರೆ ಅವಕಾಶವೇ ಸಿಗಲ್ಲ ಎಂದು ನಿರ್ಧರಿಸಿಕೊಂಡ ಯಡ್ಡಿ ಅವರೆಲ್ಲಾ ಅನಂತ್ ವಿರುದ್ಧ ನಿಲ್ಲುವಂತೆ ನೋಡಿಕೊಂಡಿದ್ದಾರೆ ಎನ್ನಲಾಗುತ್ತಿದೆ.

ಯಡ್ಡಿ ಕೊನೆ ಗಳಿಗೆಯಲ್ಲಿ ಸೋಮಣ್ಣನನ್ನು ಬಿಜೆಪಿಗೆ ಸೇರಿಸಿಕೊಂಡಿದ್ದೇ ಅನಂತ್ ವಿರುದ್ಧದ ಪಿತೂರಿ ನಡೆಸಲು ಎನ್ನಲಾಗುತ್ತಿದೆ.


ಕೈಕೊಟ್ಟ ಅಶೋಕ್-ನಂದೀಶ್ ರೆಡ್ಡಿ

ಈ ಬಾರಿ ಅನಂತ್ ಕುಮಾರ್‌ಗೆ ಅನಿರೀಕ್ಷಿತ ಪೆಟ್ಟು ಬಿದ್ದಿರುವುದು ಅವರದ್ದೇ ಬಿಜೆಪಿಯ ಅಶೋಕ್ ಹಾಗೂ ನಂದೀಶ್ ರೆಡ್ಡಿಯಿಂದ.

ಬೊಮ್ಮನಹಳ್ಳಿ ಬಿಜೆಪಿ ಶಾಸಕ ಸತೀಶ್ ರೆಡ್ಡಿಗೆ ಅದೇನಾಯಿತೋ ಏನೋ ಏಪ್ರಿಲ್ 17 ನೇ ತಾರೀಖಿನ ರಾತ್ರಿ ಸಕ್ರಿಯ ಪ್ರಚಾರದಿಂದ ಹಿಂದೆ ಸರಿದವರನು 23 ನೇ ತಾರೀಖು ಓಟಿಂಗ್ ನಡೆದ ದಿನದವರೆಗೂ ಮತ್ತೆ ಕಾಣಿಸಿಕೊಳ್ಳಲಿಲ್ಲ. ಪದ್ಮನಾಭನಗರದ ಶಾಸಕ ಹಾಗೂ ಸಾರಿಗೆ ಸಚಿವ ಅಶೋಕ್ ಕೂಡ ಅನಂತ್ ಪರ ಹೃದಯಪೂರ್ವಕವಾಗಿ ಕೆಲಸ ಮಾಡಲಿಲ್ಲ. ಅವರ ಬದಲಾಗಿ 'ನಾನು ಅನಂತ್‌ರ ಜಯಕ್ಕಾಗಿ ವ್ರತ ಪೂಜೆ ಮಾಡುತ್ತಿದ್ದೇನೆ' ಅಂತ ರೈಲು ಬಿಟ್ಟರು ಅಶೋಕ್. ಇದೂ ಕೂಡ ಯಡ್ಡಿಯ ಕೈವಾಡ ಎನ್ನಲಾಗುತ್ತಿದೆ.

ಇದೆಲ್ಲಾ ಏನೇ ಆಗಲಿ, ನಾಳೆ ಅನಂತಕುಮಾರ್ ಏನಾದರೂ ಸೋತರೆಂಬ ಸುದ್ದಿ ಬಂದರೆ ಅದಕ್ಕೆ ಕೃಷ್ಣಬೈರೇಗೌಡರ ತಾಕತ್ತು ಮಾತ್ರವಲ್ಲ, ಯಡ್ಡಿ-ಸೋಮಣ್ಣನ ಪಿತೂರಿಯ ಕೊಡುಗೆಯೂ ಇರುತ್ತದೆ. ಅಕಸ್ಮಾತ್ ಗೆದ್ದರೆ ಯಡ್ಡಿ-ಸೋಮಣ್ಣನ ಪ್ಲ್ಯಾನ್ ಫೇಲ್ ಆಯಿತು ಎಂಬರ್ಥ ■

ಅಧ್ವಾನಿ ಪ್ರಧಾನಿಯಾದರೆ...!



ಮೊಟ್ಟ ಮೊದಲನೆಯದಾಗಿ ಇಂತಹದ್ದೊಂದು ಅವಘಡ ಸಂಭವಿಸದಿರಲಿ ಎಂದು ಆಶಿಸೋಣ.


ಅಧ್ವಾನಿಯವರಿಗೆ ಪ್ರಾಯಶಃ ಇದು ಕೊನೆಯ ಎಲೆಕ್ಷನ್ನು. ಅವರಿಗೀಗ 82 ವರ್ಷ. ಮುಂದಿನ ಲೋಕಸಭಾ ಎಲೆಕ್ಷನ್ ಬರೋವರೆಗೂ ಬದುಕಿರುತ್ತಾರೆ ಅನ್ನೋದು ಗ್ಯಾರಂಟಿಯಿಲ್ಲ. ಆದ್ದರಿಂದ ಏನೇ ಮಾಡಿಯಾದರೂ ಪ್ರಧಾನಿ ಕುರ್ಚಿಯ ಮೇಲೆ ಒಮ್ಮೆ ಕುಳಿತುಕೊಳ್ಳಬೇಕು ಎಂಬುದು ಅವರ ಕೊನೆಯ ಆಸೆ. ಅದಕ್ಕಾಗಿ ಈ ಮಹಾಶಯರು ಮಾಡುತ್ತಿರುವ ಪ್ರಯತ್ನ ಒಂದೇ ಎರಡೆ? ತರಾತುರಿಯಲ್ಲಿ ತಮ್ಮ ಜೀವನ ಚರಿತ್ರೆ ಬರೆದು ತಾವೊಬ್ಬ ಮಹಾನ್ ನಾಯಕನಂತೆ ಚಿತ್ರಿಸಿಕೊಂಡರು. ಸ್ವಿಸ್ ಬ್ಯಾಂಕಿನಲ್ಲಿ ಭಾರತದ 70 ಲಕ್ಷ ಕೋಟಿ ಅಕ್ರಮ ದುಡ್ಡಿದೆ, ನನ್ನನ್ನು ಪ್ರಧಾನಿ ಮಾಡಿದರೆ ಅದನ್ನೆಲ್ಲಾ ವಾಪಸ್ಸು ತಂದು ದೇಶ ಉದ್ಧಾರ ಮಾಡುತ್ತೇನೆ ಎಂದರು. ಅತ್ತ ಕಟ್ಟಾ ಹಿಂದೂತ್ವವಾದಿಯೂ ಅಲ್ಲದೇ, ಇತ್ತ ಕಟ್ಟಾ ಜಾತ್ಯತೀತವಾದಿಯೂ ಅಲ್ಲದೆ ಮಧ್ಯಮ ಮಾರ್ಗಿಯಂತೆ ಬಿಂಬಿಸಿಕೊಳ್ಳಲು ಯತ್ನಿಸಿದರು. ಆದರೆ, ಅದ್ಯಾವುದೂ **workout** ಆಗುತ್ತಿಲ್ಲ.

ಇಲ್ಲಿಯವರೆಗೆ ಬಂದಿರುವ ಎಲ್ಲಾ ಮಾಧ್ಯಮಗಳ ಸಮೀಕ್ಷೆ ಪ್ರಕಾರ ಕೇಂದ್ರದಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರೋದು ಕಷ್ಟ. ಅರ್ಥಾತ್ ಅಧ್ವಾನಿ ಪ್ರಧಾನಿಯಾಗೋದು ಕನಸಿನ ಮಾತು. ಈ ಸಮೀಕ್ಷೆಗಳು ಅಧ್ವಾನಿಯವರನ್ನು ಮತ್ತೆ ನಿದ್ದೆಗೆಡಿಸಿವೆ. ಅದಕ್ಕಾಗಿ ಅವರೀಗ ಹತಾಶೆಯಿಂದ ಮತ್ತೊಂದು ಪ್ರಯತ್ನಕ್ಕೆ ಕೈಹಾಕಿದ್ದಾರೆ. ಇಡೀ ದೇಶದ ಉದ್ದಗಲಕ್ಕೂ ಇರುವ ಸುಮಾರು ಒಂದು ಸಾವಿರ ಸಾಧು ಸಂತರಿಗೆ, ಧಾರ್ಮಿಕ ಮುಖಂಡರಿಗೆ, ಮಠಮಾನ್ಯಗಳ ಸ್ವಾಮಿಗಳಿಗೆ ಒಂದು ಪತ್ರ ಬರೆದಿದ್ದಾರೆ. ತಮ್ಮನ್ನು ಪ್ರಧಾನಿ ಮಾಡಿದರೆ ದೇಶ ಕಟ್ಟುವ ಕೆಲಸದಲ್ಲಿ ಈ ಧಾರ್ಮಿಕ ಗುರುಗಳನ್ನೆಲ್ಲಾ ಹೇಗೆ ತೊಡಗಿಸಿಕೊಳ್ಳುತ್ತೇನೆಂಬುದನ್ನು ಆ ಪತ್ರದಲ್ಲಿ ವಿವರಿಸಿದ್ದಾರೆ. ಕೊನೆಗಳಿಗೆಯಲ್ಲಿ ಅವರಾದರೂ ತಮ್ಮನ್ನು ಪ್ರಧಾನಿ ಮಾಡಬಹುದೇನೋ ಎಂಬ ತಿರುಕನ ಕನಸು ಅಧ್ವಾನಿಯವರದ್ದು. ಅವರು ಬರೆದ ಪತ್ರದ ಒಂದೆರಡು ಸಾಲುಗಳನ್ನು ನೋಡಿ:


"ನಾನು ದೇಶದ ಪ್ರಧಾನಿಯಾದರೆ ದೇಶ ಎದುರಿಸುತ್ತಿರುವ ಎಲ್ಲಾ ಜ್ವಲಂತ ಸಮಸ್ಯೆಗಳನ್ನು ಹೇಗೆ ಪರಿಹರಿಸಬೇಕು ಎಂಬುದರ ಬಗ್ಗೆ ಧಾರ್ಮಿಕ, ಆಧ್ಯಾತ್ಮಿಕ ಗುರುಗಳ ಸಲಹೆಗಳನ್ನು ನಿರಂತರವಾಗಿ ಪಡೆಯುತ್ತೇನೆ. ಇದಕ್ಕಾಗಿ ನಾವು ಒಂದು **consultative mechanism** ಅನ್ನು ಬೆಳೆಸಿಕೊಳ್ಳೋಣ"

ಇಲ್ಲಿ **consultative mechanism** ಎಂದರೆ ಸುಮ್ಮನೇ ಆಗಾಗ್ಗೆ ಅನೌಪಚಾರಿಕವಾಗಿ ಸಲಹೆ ಕೇಳುವುದು ಎಂದರ್ಥವಲ್ಲ, ದೇಶ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ನಿವಾರಿಸುವುದಕ್ಕಾಗಿ, ಕಠಿಣ ಸವಾಲುಗಳನ್ನು ಸಮರ್ಥವಾಗಿ ಎದುರಿಸುವುದಕ್ಕಾಗಿ ಸರ್ಕಾರಕ್ಕೆ ಸಲಹೆ ನೀಡುವ ಒಂದು ಸಾಪೇಕ್ಷ ಶಾಶ್ವತ ಸಂರಚನೆಯನ್ನು ಸ್ಥಾಪಿಸುವುದು ಎಂದರ್ಥ. ಸರ್ಕಾರ ಇಂಥ ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳುವುದು ತಪ್ಪೂ ಅಲ್ಲ, ಅದು ಹೊಸತೂ ಅಲ್ಲ. ಉದಾಹರಣೆಗಾಗಿ, ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ **National Advisory Council** ಎಂಬ ಒಂದು ರಚನೆಯನ್ನು ಸ್ಥಾಪಿಸಿದೆ. ಇದರಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅಪಾರ ಪರಿಣತಿ ಹೊಂದಿದ ತಜ್ಞರು ಸದಸ್ಯರಾಗಿದ್ದಾರೆ. ದೇಶ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ, ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಟ್ಟದಲ್ಲಿ ಎದುರಾಗುವ ಸಂಕೀರ್ಣ ಸವಾಲುಗಳನ್ನು ಸಮರ್ಥವಾಗಿ ಎದುರಿಸುವುದಕ್ಕಾಗಿ ಅವರು ಆಗಾಗ್ಗೆ ಸರ್ಕಾರಕ್ಕೆ ಸಲಹೆ, ಸೂಚನೆಗಳನ್ನು ಕೊಡುತ್ತಿರುತ್ತಾರೆ. ನೆನಪಿರಲಿ, ಈ ಸಂರಚನೆಯಲ್ಲಿರುವವರೆಲ್ಲಾ ಒಂದೊಂದು ನಿರ್ದಿಷ್ಟ ಕ್ಷೇತ್ರದಲ್ಲಿ ಹತ್ತಾರು ವರ್ಷಗಳಿಂದ ಕೆಲಸ ಮಾಡಿ ಅಪಾರ ಜ್ಞಾನ, ಪರಿಣತಿಗಳನ್ನು ಹೊಂದಿರುವ ತಜ್ಞರಾಗಿರುತ್ತಾರೆ.


ಆದರೆ, ನಮ್ಮ ಅಧ್ವಾನಿಯವರೇನಾದರೂ ಪ್ರಧಾನಿಯಾದರೆ ಅವರ **Advisory Council**ನಲ್ಲಿ ಇಂಥ ತಜ್ಞರಾರೂ ಇರುವುದಿಲ್ಲ, ಅಲ್ಲಿ ನಮ್ಮ ಪೇಜಾವರ ವಿಶ್ವೇಶತೀರ್ಥ, ಸಿರಿಗೆರೆಯ ಶಿವಮೂರ್ತಿ ಸ್ವಾಮೀಜಿ, ಯೋಗಗುರು ರಾಮ್‌ದೇವ್, ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್‌ರಂಥವರೇ ತುಂಬಿಕೊಂಡಿರುತ್ತಾರೆ. ಸುಮ್ಮನೆ ಯೋಚನೆ ಮಾಡಿ. ಈ ದೇಶ ಶತಶತಮಾನಗಳಿಂದ ಎದುರಿಸುತ್ತಿರುವ ದಲಿತ ದೌರ್ಜನ್ಯ, ಅಸ್ಪೃಶ್ಯತೆಗಳ ನಿವಾರಣೆಗೆ ಪೇಜಾವರ ವಿಶ್ವೇಶತೀರ್ಥ ಅಧ್ವಾನಿಗೆ ಏನು ಸಲಹೆ ಕೊಡಬಹುದು? ದೇಶ ಆರ್ಥಿಕ ಹಿಂಜರಿತದಿಂದ ತತ್ತರಿಸುತ್ತಿರುವಾಗ, ಒಂದೊಂದೇ ಕಂಪೆನಿಗಳು ಮುಚ್ಚಿಕೊಳ್ಳುತ್ತಿರುವಾಗ, ಸಾಲುಸಾಲು ನಿರುದ್ಯೋಗಿಗಳು ಸೃಷ್ಟಿಯಾಗುತ್ತಿರುವಾಗ ಅಧ್ವಾನಿ ಆರ್ಥಿಕತಜ್ಞರ ಬಳಿ ಹೋಗದೆ ರಾಮ್‌ದೇವ್ ಬಳಿ ಹೋದರೆ ಆತ ಏನು ಪರಿಹಾರ ಒದಗಿಸಬಹುದು? ಅತಿವೃಷ್ಟಿಯಿಂದ ಪ್ರವಾಹಗಳುಂಟಾದಾಗ, ಅನಾವೃಷ್ಟಿಯಿಂದ ಕ್ಷಾಮ ತಲೆದೋರಿದಾಗ ಅದಕ್ಕೆ ಸಿರಿಗೆರೆ ಸ್ವಾಮಿಗಳು ಏನು ಪರಿಹಾರ ಹೇಳಬಹುದು? ದಿನಬೆಳಗಾದರೆ ಒಂದಲ್ಲ ಒಂದು ಕಡೆ ಬಾಂಬ್ ಸ್ಫೋಟಗೊಂಡು ನೂರಾರು ಅಮಾಯಕರು ಹತರಾಗುತ್ತಿರುವ ಸಮಸ್ಯೆಗೆ ರವಿಶಂಕರ್ ಏನು ಪರಿಹಾರ ಒದಗಿಸಬಹುದು?



ಇದನ್ನು ಊಹಿಸುವುದು ಕಷ್ಟವೇನಲ್ಲ. ಅಸ್ಪೃಶ್ಯತೆಯ ನಿವಾರಣೆಗೆ, ದಲಿತರ ಮೇಲಿನ ದೌರ್ಜನ್ಯ ತಡೆಗೆ ಪೇಜಾವರ ಹೆಚ್ಚೆಂದರೆ ಭಗವದ್ಗೀತೆ ಪಠಿಸುವಂತೆ ಸಲಹೆ ಕೊಡಬಹುದು. ಆರ್ಥಿಕ ಹಿಂಜರಿತದಿಂದ ದೇಶ ದಿವಾಳಿಯಾಗುವುದನ್ನು ತಪ್ಪಿಸುವುದಕ್ಕೆ ಯೋಗ ಗುರು ರಾಮ್‌ದೇವ್ ಬಹಳ ಎಂದರೆ ಕಾಲು ಮೇಲೆ ಮಾಡಿ ತಲೆ ಮೇಲೆ ನಿಂತುಕೊಳ್ಳುವ ಶಿರ್ಷಾಸನವೇ ಪರಿಹಾರ ಎನ್ನಬಹುದು. ಪ್ರವಾಹ, ಕ್ಷಾಮಗಳ ಪರಿಹಾರಕ್ಕೆ ಲಿಂಗಾರ್ಚನೆ ಮಾಡಿಕೊಳ್ಳಿ ಎಂದು ಸಿರಿಗೆರೆ ಶ್ರೀಗಳು ಪರಿಹಾರ ಒದಗಿಸಬಹುದು. ಕಂಡಕಂಡಲ್ಲಿ ಬಾಂಬ್ ಸ್ಫೋಟಿಸುವ ಭಯೋತ್ಪಾದನೆಯ ಪರಿಹಾರಕ್ಕೆ ಧ್ಯಾನವೇ ಮಾರ್ಗ ಎಂದು ರವಿಶಂಕರ್ ಹೇಳಬಹುದು.



ನಮ್ಮ ದೇಶದ ರೈತರು ಯಾವಾಗ ಉತ್ತಬೇಕು, ಯಾವ ಮಣ್ಣಿಗೆ ಯಾವ ಬೆಳೆ ಬೆಳೆಯಬೇಕು, ಯಾವ್ಯಾವ ಋತುಗಳಲ್ಲಿ ಏನೇನು ಕೆಲಸ ಮಾಡಬೇಕು ಎಂಬಿತ್ಯಾದಿ ಸಣ್ಣ ವಿಚಾರಗಳ ಬಗ್ಗೆ ಸಲಹೆ ಕೇಳಲು ಪೂಜಾರಿಗಳ ಬಳಿ, ಸ್ವಾಮಿಗಳ ಬಳಿ ಹೋಗುವುದಿಲ್ಲ. ಮಠಕ್ಕೋ, ಗುಡಿಗೋ ಹೋದಾಗ ಅವರ ಕಾಲಿಗೆ ಬಿದ್ದು ಮರಳಿ ಮನೆಗೆ ಬಂದು ತಮ್ಮ ಪಾಡಿಗೆ ತಾವು ಕೆಲಸ ಮಾಡಿಕೊಂಡಿರುತ್ತಾರೆ. ಒಬ್ಬ ಕೈಗಾರಿಕೋದ್ಯಮಿ ಹೊಸ ಪ್ರಾಜೆಕ್ಟ್ ಪ್ರಾರಂಭಿಸುವಾಗ ಹೆಚ್ಚೆಂದರೆ ಒಳ್ಳೆ ಮಹೂರ್ತ ಯಾವುದೆಂದು ಯಾವುದೋ ಜ್ಯೋತಿಷಿಯ ಬಳಿ ಕೇಳಿಕೊಳ್ಳಬಹುದೇ ಹೊರತು ತನ್ನ ಇಡೀ ಬಿಸಿನೆಸ್‌ನಲ್ಲಿ ಎದುರಾಗುವ ಸವಾಲು, ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಜೋತಿಷಿಗಳ, ಸ್ವಾಮಿಗಳ ಸಲಹೆ ಕೇಳುವುದಿಲ್ಲ. ಈ ಸಾಮಾನ್ಯ ಜನರಿಗಿರುವಷ್ಟೂ ಬುದ್ಧಿ ದೇಶದ ಪ್ರಧಾನಿಯಾಗುವ ಕನಸು ಕಾಣುತ್ತಿರುವ ಅಧ್ವಾನಿಗಿಲ್ಲವಲ್ಲ? ಅದಕ್ಕೆ ಮೊದಲೇ ಹೇಳಿದ್ದು ಅಧ್ವಾನಿ ಪ್ರಧಾನಿಯಾಗುವ ಅವಘಡವೊಂದು ಸಂಭವಿಸದಿರಲಿ ಎಂದು.




ಒಬಾಮಾ ಇದನ್ನು ಹೇಗೆ ಸಮರ್ಥಿಸುತ್ತಾರೆ?

ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಜನಾಂಗವಾದದ ವಿರುದ್ಧ ವಿಶ್ವ ಸಮ್ಮೇಳನ (**World Conference Against Racism - WCAR**) ನಡೆಯುತ್ತಿದೆ. ಏಪ್ರಿಲ್ 20ರಿಂದ ಪ್ರಾರಂಭವಾಗಿರುವ ಈ ಸಮಾವೇಶ ಮುಂದಿನ ಐದು ದಿನಗಳ ಕಾಲ ಜರುಗಲಿದೆ. ನಮ್ಮಲ್ಲಿ ದಲಿತರನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುವ ಜಾತಿ ಪದ್ಧತಿ, ಅಸ್ಪೃಶ್ಯತೆಯಂತೆಯೇ ಕರಿಯರನ್ನು ಕೀಳಾಗಿ ಕಾಣುವ ಜನಾಂಗೀಯವಾದ (**Racism**) ವಿಶ್ವದಾದ್ಯಂತ ಹರಡಿಕೊಂಡಿದೆ. ಯೂರೋಪ್ ಮತ್ತು ಅಮೆರಿಕಗಳ ಬಿಳಿ ಚರ್ಮದ ಜನ ಸುಸಂಸ್ಕೃತರು, ನಾಗರಿಕರು, ಉಚ್ಚರು ಎಂದೂ, ಆಫ್ರಿಕ, ಏಶಿಯಾ, ಲ್ಯಾಟಿನ್ ಅಮೆರಿಕಗಳ ಕಪ್ಪು ವರ್ಣದ ಮೂಲ ನಿವಾಸಿಗಳು ಅಸಂಸ್ಕೃತರು, ಅನಾಗರಿಕರು, ಕೀಳು ಎಂದೆಲ್ಲಾ ಪರಿಗಣಿಸಲಾಗುತ್ತದೆ. ಅಷ್ಟೇ ಅಲ್ಲದೇ ಕರಿಯರ ಮೇಲೆ ನಿರಂತರವಾಗಿ ದೈಹಿಕ, ಮಾನಸಿಕ ಹಲ್ಲೆಗಳನ್ನು ನಡೆಸುತ್ತಾ ಅವರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣಲಾಗುತ್ತದೆ. ಮಾನವ ವಿರೋಧಿಯಾಗಿರುವ ಈ ಅನಿಷ್ಟವನ್ನು ತೊಡೆದುಹಾಕುವುದಕ್ಕಾಗಿ ದಶಕಗಳಿಂದ ಅನೇಕ ವಿರೋಚಿತ ಹೋರಾಟಗಳು ಜರುಗಿವೆಯಾದರೂ ಸಮಸ್ಯೆ ಮಾತ್ರ ಮೂಲಭೂತವಾಗಿ ಬದಲಾಗಿಲ್ಲ.



ಜನಾಂಗೀಯವಾದವನ್ನು ನಿರ್ಮೂಲನೆ ಮಾಡಿ ಮಾನವೀಯ ಸಮಾಜವೊಂದನ್ನು ನಿರ್ಮಿಸುವ ಉದ್ದೇಶದಿಂದ ವಿಶ್ವಸಂಸ್ಥೆ ಕೆಲವಾರು ವರ್ಷಗಳಿಂದ 'ಜನಾಂಗವಾದದ ವಿರುದ್ಧ ವಿಶ್ವ ಸಮ್ಮೇಳನ' ಎಂಬ ಹೆಸರಿನಲ್ಲಿ ಅಧಿವೇಶನ ನಡೆಸುತ್ತಿದೆ. ಇದರಲ್ಲಿ ವಿಶ್ವದಾದ್ಯಂತ ಹಲವಾರು ದೇಶಗಳ ಸರ್ಕಾರಗಳು ನೇರವಾಗಿ ಭಾಗವಹಿಸಿ ತಮ್ಮ ತಮ್ಮ ದೇಶದಲ್ಲಿ ಜನಾಂಗೀಯವಾದವನ್ನು ನಿರ್ಮೂಲನೆ ಮಾಡುವುದಕ್ಕೆ ಏನೆಲ್ಲಾ ಶಾಸನಾತ್ಮಕ ಕ್ರಮಗಳನ್ನು ಕೈಗೊಳ್ಳಬಹುದೆಂದು ಚರ್ಚಿಸುತ್ತವೆ. 2001ರಲ್ಲಿ ದಕ್ಷಿಣ ಆಫ್ರಿಕದ ಡರ್ಬನ್‌ನಲ್ಲಿ ಈ ಸಮ್ಮೇಳನ ಆಯೋಜಿತಗೊಂಡಾಗ ಭಾರತದ ಅನೇಕ ದಲಿತ ಸಂಘಟನೆಗಳು ಅದರಲ್ಲಿ ಭಾಗವಹಿಸಿದ್ದವು. ನಮ್ಮಲ್ಲಿರುವ ಜಾತಿಯತೆ, ದಲಿತರ ಮೇಲಿನ ದೌರ್ಜನ್ಯಗಳು ಯಾವ ಜನಾಂಗೀಯ ಕ್ರೌರ್ಯಕ್ಕಿಂತ ಕಡಿಮೆಯೇನಿಲ್ಲ ಎಂದು ಜಗತ್ತಿಗೆ ತೋರುವುದು ಅವರ ಉದ್ದೇಶವಾಗಿತ್ತು. ಆದರೆ ಭಾರತ ಸರ್ಕಾರ ಮಾತ್ರ ನಮ್ಮ ದೇಶದ ಜಾತಿಪದ್ಧತಿ, ಅಸ್ಪೃಶ್ಯತೆಯ ಹುಳುಕು ಇಡೀ ಜಗತ್ತಿಗೆ ಗೊತ್ತಾಗುವುದು ಬೇಡ ಎಂದೂ, ಅದು ಜನಾಂಗೀಯವಾದದಷ್ಟು ಕ್ರೂರವಾದುದಲ್ಲವೆಂದೂ ವಿರೋಧಿಸಿತ್ತು.




ಈ ಬಾರಿಯ ಸಮ್ಮೇಳನದಲ್ಲಿ ಡರ್ಬನ್‌ನಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಯಾವ್ಯಾವ ದೇಶಗಳು ಎಷ್ಟರಮಟ್ಟಿಗೆ ಪಾಲಿಸಿವೆ ಎಂಬುದನ್ನು ಪರಾಮರ್ಶಿಸುವುದೇ ಪ್ರಧಾನ ಅಜೆಂಡಾವಾಗಿತ್ತು. ಆದ್ದರಿಂದಲೇ ಈ ಸಮ್ಮೇಳನಕ್ಕೆ **Durban Review Conference** ಎಂದು ಅಧಿಕೃತವಾಗಿ ಹೆಸರಿಡಲಾಗಿತ್ತು. ಜನಾಂಗೀಯವಾದವೆಂಬ ಅನಿಷ್ಟವನ್ನು ತೊಡೆದುಹಾಕುವುದಕ್ಕೆ ವಿವಿಧ ದೇಶಗಳ ಸರ್ಕಾರಗಳು ಎಷ್ಟು ಉದಾಸೀನ ಪ್ರದರ್ಶಿಸಿವೆ ಎಂದರೆ ಇರಾನಿನ ಅಧ್ಯಕ್ಷ ಮೊಹ್ಮದ್ ಅಹ್ಮದ್‌ನಿಜಾದ್ ಒಬ್ಬರನ್ನು ಬಿಟ್ಟರೆ ಬೇರಾವ ದೇಶಗಳಿಂದಲೂ ಸರ್ಕಾರದ ಮುಖ್ಯಸ್ಥರಾಗಲಿ, ದೇಶದ ಪ್ರಭುತ್ವದ ಮುಖ್ಯಸ್ಥರಾಗಲಿ ಹಾಜರಾಗಿರಲಿಲ್ಲ. ಕೆಳಮಟ್ಟದ ಯಾವುದೋ ಕೆಲವು ಪ್ರತಿನಿಧಿಗಳನ್ನು ಕಳಿಸಿಕೊಟ್ಟಿದ್ದರು.

ಮೊನ್ನೆ ಏಪ್ರಿಲ್ 20ರಂದು ಸಭೆ ಪ್ರಾರಂಭವಾದಾಗ ಇರಾನಿನ ಅಧ್ಯಕ್ಷರು ಭಾಷಣ ಮಾಡಿ ಅರಬ್ಬರ ವಿರುದ್ಧ ಜನಾಂಗೀಯ ಸಮರ ಸಾರಿರುವ ಇಸ್ರೇಲ್‌ನ ಜನಾಂಗವಾದಿ ನಿಲುವನ್ನು, ಅರಬ್ಬರ ವಿರುದ್ಧ ಮಧ್ಯಪ್ರಾಚ್ಯದಲ್ಲಿ ಅದು ನಡೆಸುತ್ತಿರುವ ದೌರ್ಜನ್ಯಗಳನ್ನು ಖಂಡತುಂಡವಾಗಿ ಖಂಡಿಸಿದರು. ಇಂಥ ನೆಪವನ್ನು ಕಾಯುತ್ತಿದ್ದವೋ ಏನೋ, ಅಮೆರಿಕ, ಆಸ್ಟ್ರೇಲಿಯ, ಕೆನಡ, ಜರ್ಮನಿ, ಇಸ್ರೇಲ್, ಇಟಲಿ, ನೆದರ್‌ಲ್ಯಾಂಡ್ಸ್, ನ್ಯೂಜಿಲ್ಯಾಂಡ್, ಪೋಲ್ಯಾಂಡ್ ಮುಂತಾದ ಹತ್ತಾರು ದೇಶಗಳು ಇಡೀ ಸಮ್ಮೇಳನವನ್ನೇ ಬಹಿಷ್ಕರಿಸಿ ಹೊರ ನಡೆದರು. ಇದಾದ ಮೇಲೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಾನ್ ಕಿ-ಮೂನ್ ಇರಾನ್ ಅಧ್ಯಕ್ಷರ ಭಾಷಣವನ್ನೂ ಮತ್ತು ಸಮ್ಮೇಳನ ಬಹಿಷ್ಕರಿಸಿದ ದೇಶಗಳ ಕ್ರಮವನ್ನೂ ಖಂಡಿಸಿ ಅಡ್ಡಗೋಡೆಯ ಮೇಲೆ ದೀಪ ಇಟ್ಟಿದ್ದಾರೆ.


ಈ ಬೆಳವಣಿಗೆಗಳು ಜನಾಂಗೀಯವಾದವನ್ನು ತೊಡೆದುಹಾಕುವಲ್ಲಿ ನಮ್ಮ ಸರ್ಕಾರಗಳು ಎಷ್ಟು ಗಂಭೀರವಾಗಿವೆ ಎಂಬುದನ್ನು ಸೂಚಿಸುತ್ತವೆ. ಅಮೆರಿಕದ ಅಧ್ಯಕ್ಷರಾಗಿರುವ ಬರಾಕ್ ಒಬಾಮಾ ಕೂಡ ಒಬ್ಬ ಆಫ್ರಿಕನ್ ಮೂಲದ ಕರಿಯರು. ಅವರೂ ತಮ್ಮ ಜೀವನದ ಹಲವಾರು ಹಂತಗಳಲ್ಲಿ ಜನಾಂಗೀಯ ನಿಂದನೆಯ ಕ್ರೌರ್ಯದ ರುಚಿಯನ್ನು ಕಂಡಿರುವವರು. ಅಂಥವರೂ ಈ ಭೀಕರ ಸಮಸ್ಯೆಯ ಬಗ್ಗೆ ಇಷ್ಟೊಂದು ಉದಾಸೀನ ಮಾಡುತ್ತಾರೆಂದರೆ ಇನ್ನು ಸಮಸ್ಯೆ ಬಗೆಹರಿಯುವುದಾದರೂ ಯಾವಾಗ?

ಈ ಸಭೆ, ಸಮಾರಂಭ, ವಿಚಾರ ಸಂಕಿರಣ, ಸಮ್ಮೇಳನ, ಚರ್ಚೆ, ವಾಗ್ವಾದಗಳು ಜನಾಂಗೀಯವಾದಂಥ ಗಂಭೀರ ಸಮಸ್ಯೆಯ ಪರಿಹಾರಕ್ಕೆ ತಮ್ಮದೇ ಕೊಡುಗೆ ಕೊಡುತ್ತವಾದರೂ ಅವುಗಳಿಂದಲೇ ಎಲ್ಲಾ ಪರಿಹಾರವಾಗಲಾರದು. ಶೋಷಣೆ, ದೌರ್ಜನ್ಯಗಳ ವಿರುದ್ಧ ಮಿಲಿಟೆಂಟ್ ಸಂಘರ್ಷಗಳು, ದೊಡ್ಡ ಮಟ್ಟದ ಸಾಮಾಜಿಕ ಆಂದೋಲನಗಳು ನಡೆಯಬೇಕು. ನಿಜ ಹೇಳಬೇಕೆಂದರೆ, ಈ ಹೊತ್ತು ಜನಾಂಗೀಯ ದೌರ್ಜನ್ಯದ ತೀವ್ರತೆ ಒಂದಿಷ್ಟು ಕಡಿಮೆಯಾಗಿದೆಯೆಂದರೆ, ತಮ್ಮ ಹಕ್ಕುಗಳ ಬಗ್ಗೆ ಕರಿಯರು ಒಂದಿಷ್ಟು ಜಾಗೃತರಾಗಿದ್ದಾರೆಂದರೆ ಅದಕ್ಕೆ ಇಂಥ ಜೀವನ್ಮರಣದ ಹೋರಾಟಗಳೇ ಪ್ರಧಾನ ಕಾರಣ. ಮುಂದೆಯೂ ಸಮಸ್ಯೆ ಶಾಶ್ವತವಾಗಿ ಕಣ್ಮರೆಯಾಗಬೇಕೆಂದರೆ ಅವೇ ಪರಿಹಾರ.



ಮಂಗಳೂರು: ಬಿಲ್ಲವ ಮತ್ತು ಬಂಟರ ಸ್ಪರ್ಧೆ

ಕರಾವಳಿಯ ಮಂಗಳೂರು ಲೋಕಸಭಾ ಕ್ಷೇತ್ರ ಒಂದು ರೀತಿಯಲ್ಲಿ ವಿಚಿತ್ರ ಪ್ರದೇಶ. ಇತರ ಕಡೆಗಳಂತೆ ಇಲ್ಲಿ ಒಕ್ಕಲಿಗರ ಆರ್ಭಟವಿಲ್ಲ, ಲಿಂಗಾಯತರು ಅಟ್ಟಹಾಸವಿಲ್ಲ, ಕುರುಬರಂತೂ ಇಲ್ಲವೇ ಇಲ್ಲ. ರಾಜಕೀಯವಾಗಿ ಅತ್ಯಂತ ಪ್ರಬಲವಾದ ಈ ಮೂರು ಜನಾಂಗದವರ ಗೈರುಹಾಜರಿಯಿಂದಾಗಿ ಇಲ್ಲಿ ಜಾತಿ ರಾಜಕೀಯ ಅಷ್ಟು ಸುಲಭವಾಗಿ ನಡೆಯುವುದಿಲ್ಲ.



ಈ ಕ್ಷೇತ್ರದಿಂದ ಇತ್ತೀಚೆಗೆ ಬಿಜೆಪಿಯ ರಾಜ್ಯಾಧ್ಯಕ್ಷ ಸದಾನಂದ ಗೌಡರು ಪಲಾಯನಗೈದರು. ಕ್ಷೇತ್ರದ ಮರುವಿಂಗಡಣೆಗೆ ಹೆದರಿ ಅವರು ಜಾಗ ಖಾಲಿ ಮಾಡಿದರು ಎಂದು ಕಾಂಗ್ರೆಸ್ ಪಕ್ಷದವರು ಕೇಕೆ ಹಾಕುತ್ತಿದ್ದಾರೆ. ತಾವು ಹೆದರಿ ಓಡಿ ಹೋದದ್ದಲ್ಲ ಎಂಬುದನ್ನು ತೋರಿಸಿಕೊಡಬೇಕಾದರೆ ಬಿಜೆಪಿಯ ಹೊಸ ಅಭ್ಯರ್ಥಿ ನಳಿನ್ ಕಟೀಲ್‌ನನ್ನು ಸದಾನಂದಗೌಡರು ಗೆಲ್ಲಿಸಲೇಬೇಕಾಗಿದೆ.

ವಾಸ್ತವವಾಗಿ ಈ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ನಳಿನ್ ಕಟೀಲ್ ಜಯಕ್ಕಿಂತಲೂ ಆರೆಸ್ಸೆಸ್‌ನ ಪ್ರಮುಖ ನಾಯಕ ಕಲ್ಲಡ್ಕ ಪ್ರಭಾಕರ್ ಭಟ್‌ರ ಪ್ರತಿಷ್ಠೆಯೇ ಮುಖ್ಯ ವಿಷಯವಾಗಿದೆ. ಹೀಗಾಗಿ ಕಟೀಲ್‌ರನ್ನು ಜಯಗಳಿಸುವ ಮುಖಾಂತರ ಕಲ್ಲಡ್ಕ ಪ್ರಭಾಕರ್ ಭಟ್ ತಾನಿನ್ನು ಈ ಕ್ಷೇತ್ರದಲ್ಲಿ ಪವರ್‌ಫುಲ್ ಎಂಬುದನ್ನು ತೋರಿಸಲು ಶ್ರಮಿಸುತ್ತಿದ್ದಾರೆ. ಅಷ್ಟೇ ಅಲ್ಲ; ಅವರ ಬಂಧು ಪುತ್ತೂರಿನ ರಾಮ ಭಟ್ 'ಸ್ವಾಭಿಮಾನ ವೇದಿಕೆ'ಯಿಂದ ಬಿಜೆಪಿಯ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದು ಪ್ರಭಾಕರ್ ಭಟ್ಟರಿಗೆ ನುಂಗಲಾರದ ತುತ್ತಾಗಿದೆ. ಹಾಗಾಗಿ ಕಾಂಗ್ರೆಸ್‌ನ ಜನಾರ್ದನ ಪೂಜಾರಿ ಗೆದ್ದರೆ ಅದು ಪ್ರಭಾಕರ್ ಭಟ್ ಸೋತಂತೆ ಮಾತ್ರವಲ್ಲ ರಾಮ ಭಟ್ ಗೆದ್ದಂತೆ ಕೂಡ ಹೌದು!


ಮಂಗಳೂರು ಲೋಕಸಭಾ ಕ್ಷೇತ್ರ ಬಿಜೆಪಿಯ ಭದ್ರಕೋಟೆಗಳಲ್ಲೊಂದು. ಸುಮಾರು 13,63,000 ಮತದಾರರು ಈ ಕ್ಷೇತ್ರದಲ್ಲಿದ್ದಾರೆ. ಆದರೆ ರಾಜ್ಯದ ಇತರೆಡೆಯಂತೆ ಇಲ್ಲಿ ಜಾತಿ ಆಧಾರದ ಮೇಲೆ ಮತದಾನ ನಡೆಯುವುದಿಲ್ಲ. ಹಾಗಿದ್ದಲ್ಲಿ ಜೈನ್ ಸಮುದಾಯಕ್ಕೆ ಸೇರಿದ್ದ ಧನಂಜಯ್ ಕುಮಾರ್ ಈ ಕ್ಷೇತ್ರದಿಂದ ಮೂರು ಬಾರಿ ಲೋಕಸಭೆಗೆ ಆಯ್ಕೆಯಾಗುತ್ತಿರಲಿಲ್ಲ. ಏಕೆಂದರೆ ಈ ಕ್ಷೇತ್ರದಲ್ಲಿ ಜೈನರು 30-40 ಸಾವಿರದಷ್ಟು ಕೂಡಾ ಇಲ್ಲ.

ಆದರೆ ಹಳೇ ಮೈಸೂರಿನಲ್ಲಿ ಒಕ್ಕಲಿಗ ಮತ್ತು ಲಿಂಗಾಯತರ ನಡುವೆ ಹೇಗೆ ಶತಶತಮಾನಗಳಿಂದ ರಾಜಕೀಯ ವೈರತ್ವ ಇದೆಯೋ ಅದೇ ರೀತಿ ಕರಾವಳಿ ಪ್ರದೇಶದಲ್ಲಿ ಬಿಲ್ಲವರು ಮತ್ತು ಬಂಟರು ಹಾವು ಮುಂಗುಸಿ ತರಹ ಪ್ರತಿ ಚುನಾವಣೆಯಲ್ಲೂ ಕಾದಾಡುತ್ತಿರುತ್ತಾರೆ. ಕಳೆದ ನಾಲ್ಕು ದಶಕಗಳಲ್ಲಿ ಇದೇ ಮೊದಲ ಬಾರಿಗೆ ಬಂಟ ಸಮುದಾಯದ ಅಭ್ಯರ್ಥಿಗೆ ಬಿಜೆಪಿಯವರು ಟಿಕೆಟ್ ನೀಡಿರುವುದರಿಂದ ಅವರಲ್ಲಿ ಹೊಸ ಹುಮ್ಮಸ್ಸು ಕಾಣಿಸುತ್ತಿದೆ.

ಮತ್ತೊಂದೆಡೆ ಕಳೆದ ಮೂರು ಚುನಾವಣೆಗಳಲ್ಲಿ ಸೋತಿರುವ ಜನಾರ್ದನ ಪೂಜಾರಿಯನ್ನು ಈ ಬಾರಿ ಗೆಲ್ಲಿಸಲೇಬೇಕೆಂದು ಬಿಲ್ಲವರೆಲ್ಲರೂ ಒಗ್ಗಟ್ಟಿನಿಂದ ಹೋರಾಡುತ್ತಿದ್ದಾರೆ.

ಸುಮಾರು ಮೂರೂವರೆ ಲಕ್ಷದಷ್ಟಿರುವ ಬಿಲ್ಲವರ ಬೆಂಬಲದಿಂದ ಪೂಜಾರಿ ಸೋಲಿನ ಸರಪಳಿಯಿಂದ ಹೊರಬರುತ್ತಾರೋ ಅಥವಾ ಎರಡೂ ಮುಕ್ಕಾಲು ಲಕ್ಷ ಬಂಟ ಸಮುದಾಯದ ಪ್ರತಿನಿಧಿಯಾಗಿ ನಳೀನ್ ಕಟೀಲ್ ಗೆಲ್ಲುತ್ತಾರೋ?

ಆದರೆ ಬಿಲ್ಲವರು ಮತ್ತು ಬಂಟರು ಈ ಕ್ಷೇತ್ರದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿದ್ದರೂ ಇಲ್ಲಿನ ಅಭ್ಯರ್ಥಿಗಳ ಗೆಲುವು ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಗಳ ಬೆಂಬಲವನ್ನು ಅವಲಂಬಿಸಿರುತ್ತದೆ. ಮಂಗಳೂರು ಕ್ಷೇತ್ರದಲ್ಲಿ 2.10 ಲಕ್ಷ ಮುಸ್ಲಿಂ ಮತ್ತು 1.50 ಲಕ್ಷ ಕ್ರಿಶ್ಚಿಯನ್ ಮತದಾರರಿದ್ದಾರೆ. ಕರಾವಳಿ ಪ್ರದೇಶದಲ್ಲಿ ಇತ್ತೀಚೆಗೆ ಭಜರಂಗದಳ ಮತ್ತು ಶ್ರೀರಾಮ ಸೇನೆಗಳು ಚರ್ಚ್‌ಗಳ ಮೇಲಿನ ದಾಳಿ ಮತ್ತಿತರ ಅಬ್ಬರಗಳಿಂದಾಗಿ ಅಲ್ಪಸಂಖ್ಯಾತ ಮತಗಳು ಕ್ರೋಢೀಕರಣಗೊಂಡು ಅವರ 3.60 ಲಕ್ಷ ಮತಗಳು ಕಾಂಗ್ರೆಗೆ ಸಾಲಿಡ್ಡಾಗಿ ಬೀಳುವುದರ ಬಗ್ಗೆ ಸಂಶಯವಿಲ್ಲ. ಇದುವೇ ಜನಾರ್ದನ ಪೂಜಾರಿಗೆ ವರವಾಗಿ ಪರಿಣಮಿಸಿದೆ.



ಹಾಗೆಂತ ಬಿಲ್ಲವರೆಲ್ಲರೂ ಪೂಜಾರಿಗೆ ಮತ ಹಾಕುತ್ತಾರೆ ಎಂದು ಭಾವಿಸಿದರೆ ತಪ್ಪು. ರುಕ್ಮಯ ಪೂಜಾರಿಯಂತಹ ಮಾಜಿ ಶಾಸಕ, ಬಿಜೆಪಿ ಅಭ್ಯರ್ಥಿ ನಳಿನ್ ಕಟೀಲ್ ಅವರ ಪ್ರಚಾರ ಸಮಿತಿಯ ಅಧ್ಯಕ್ಷರಾಗಿ ಸಿಕ್ಕಾಪಟ್ಟೆ ಕೆಲಸ ಮಾಡುತ್ತಿದ್ದಾರೆ. ಬಿಲ್ಲವರ ಒಂದು ತುಕಡಿ ರುಕ್ಮಯ ಪೂಜಾರಿ ಜೊತೆ ಓಡಾಡುತ್ತಿದ್ದೆ. ಹಾಗೆಯೇ ಬಂಟರ ಒಂದು ತುಕಡಿಯನ್ನು ತನ್ನ ಪರ ಸೆಳೆದುಕೊಳ್ಳುವುದರಲ್ಲಿ ಜನಾರ್ದನ ಪೂಜಾರಿ ಯಶಸ್ವಿಯಾಗಿದ್ದಾರೆ.

ದ.ಕ. ಜಿಲ್ಲೆ ಕೇಸರಿಮಯವಾಗಿ ಹಲವು ವರ್ಷಗಳೇ ಸಂದುಹೋಗಿವೆ. ಹೇಳಿಕೇಳಿ ಇದು ದೇವಾಲಯಗಳ ಜಿಲ್ಲೆ. ಉಡುಪಿಯ ಶ್ರೀಕೃಷ್ಣ, ಧರ್ಮಸ್ಥಳದ ಶ್ರೀಮಂಜುನಾಥೇಶ್ವರ, ಕುಕ್ಕೆಶ್ರೀ ಸುಬ್ರಮಣ್ಯ, ಕಟೀಲು ದುರ್ಗಾಪರಮೇಶ್ವರಿ, ಮಂಗಳೂರಿನ ಶರವು ಮಹಾಗಣಪತಿ... ಹೀಗೆ ಅನೇಕ ಪ್ರಸಿದ್ಧ ದೇವಸ್ಥಾನಗಳು ಈ ಜಿಲ್ಲೆಯಲ್ಲಿವೆ. ಈ ಹಿಂದೆ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಜೊತೆ ಭಿನ್ನಾಭಿಪ್ರಾಯ ಹೊಂದಿದ್ದ ಜನಾರ್ದನ ಪೂಜಾರಿ ಈ ಬಾರಿ ನಾಮಪತ್ರ ಸಲ್ಲಿಸಿದ ಕೂಡಲೇ ಹೆಗಡೆಯವರನ್ನು ಭೇಟಿಯಾಗಿ ರಾಜಿ ಮಾಡಿಕೊಂಡಿದ್ದಾರೆ. ಅಷ್ಟೇ ಅಲ್ಲ; ಈ ದೇವಸ್ಥಾನ, ರಥೋತ್ಸವ, ಜಾತ್ರೆಗಳು, ಬಿಜೆಪಿಯವರ ಹಕ್ಕು ಮಾತ್ರವಲ್ಲ ಎಂದು ಸಾರಲು ಹೊರಟ ಪೂಜಾರಿ ಮಂಗಳೂರಿನಲ್ಲಿ ಶ್ರೀ ಗೋಕರ್ಣನಾಥೇಶ್ವರ ಎಂಬ ಭವ್ಯವಾದ ದೇವಾಲಯವನ್ನು ಸ್ಥಾಪಿಸಿ ಆಸ್ತಿಕರ ಬೆಂಬಲ ಪಡೆದಿದ್ದಾರೆ. ಜೊತೆಗೆ ಪೂಜಾರಿ ನೇತೃತ್ವದಲ್ಲಿ ನಡೆಯುವ ಮಂಗಳೂರು ದಸರಾ ಕಾರ್ಯಕ್ರಮ ಅವರಿಗೆ ಅಪಾರ ಅಭಿಮಾನಿಗಳನ್ನು ತಂದುಕೊಟ್ಟಿದೆ. ಹೀಗೆ ದೇವರ ಹೆಸರಿನಲ್ಲಿ ಮತಪಡೆಯುವ ಬಿಜೆಪಿಯ ತಂತ್ರಗಾರಿಕೆಯನ್ನು ಪೂಜಾರಿ ಕೂಡಾ ತುಂಬಾ ಜಾಣತನದಿಂದ ಅನುಷ್ಠಾನಕ್ಕೆ ತಂದಿದ್ದಾರೆ. ಇವೆಲ್ಲವೂ ಬಿಜೆಪಿಯವರು ನಿದ್ದೆಗೆಡಲು ಮುಖ್ಯ ಕಾರಣ.

ಈ ಬಾರಿಯ ಚುನಾವಣೆಯ ಜೋಕ್ ಒಂದನ್ನು ಹೇಳಬೇಕಿದೆ. ಈ ಮಂಗಳೂರಿನಲ್ಲಿ ಕಾಂಗ್ರೆಸಿಗರು ಕೂಡಾ ಬಿಜೆಪಿ(BJP)ಗೆ ಮತ ಹಾಕಿ ಎಂದು ಹೇಳುತ್ತಿದ್ದಾರೆ. ಅವರ ಪ್ರಕಾರ BJP ಎಂದರೆ (B)ಬಿ(J)ಜನಾರ್ದನ (P)ಪೂಜಾರಿ!


ವಿದ್ಯಾವಂತ ಮತ್ತು ಪ್ರಜ್ಞಾವಂತರ ಕ್ಷೇತ್ರ ಎಂಬ ಹೆಗ್ಗಳಿಕೆಗೆ ಒಳಗಾಗಿರುವ ಮಂಗಳೂರು ಲೋಕಸಭಾದ ಮತದಾರರು 'ಬಿಜೆಪಿ' ಎಂಬ ವ್ಯಕ್ತಿಯನ್ನು ಆಯ್ಕೆ ಮಾಡುತ್ತಾರೋ ಅಥವಾ ಬಿಜೆಪಿ ಎಂಬ ದುಷ್ಟ ಪಕ್ಷವನ್ನು ಆರಿಸುತ್ತಾರೋ ನೋಡೋಣ.


ಸದ್ಯಕ್ಕಂತೂ ಬಿಲ್ಲವರ, ಕ್ರಿಶ್ಚಿಯನ್ನರ, ಮುಸಲ್ಮಾನರ ಮತ್ತು ಜಾತ್ಯತೀತರ ಬೆಂಬಲ ಹೊಂದಿರುವ ಜನಪರ ನಾಯಕ ಕಾಂಗ್ರೆಸ್‌ನ ಜನಾರ್ಧನ ಪೂಜಾರಿ ಈ ಸ್ಪರ್ಧೆಯಲ್ಲಿ ಮುಂದಿದ್ದಾರೆ.

● ಸದಾಶಿವ ಶೆಣೈ

ಹಾವೇರಿ: ಸಲೀಂ ವರ್ಸಸ್ ಉದಾಸಿ ಪಂಚ್'ಮಸಾಲಿ'ಗಳೆ ನಿರ್ಣಾಯಕರು...!


ಹಾವೇರಿ ಲೋಕಸಭಾ ಕ್ಷೇತ್ರ ಹೆರಿಗೆ ನೋವು ಅನುಭವಿಸುತ್ತಿದೆ. ಕೂಸು ಹುಟ್ಟುವ ಮುನ್ನವೇ ಉದಾಸಿ ಪಡೆ ಕುಲಾವಿ ಹೊಲಿಸಿಕೊಂಡು ಕುಣಿದಾಡುತ್ತಿದೆ. ಸಲೀಂ ಅಹ್ಮದ್ ಮಾತ್ರ ತಣ್ಣಗೆ ಶಾಕ್ ನೀಡುವ ತಯಾರಿ ಮಾಡಿದ್ದಾರೆ. ಆದರೆ ಅಭ್ಯರ್ಥಿ ಗೆಲುವಿನ ಪಲ್ಲಕ್ಕಿಗೆ ಭೋವಿಯಾಗಲಿರುವ ಪಂಚಮಸಾಲಿ ಸಮುದಾಯ ಮಾತ್ರ ತನ್ನ ಒಲವಿನ ಗುಟ್ಟನ್ನು ರಟ್ಟು ಮಾಡುತ್ತಿಲ್ಲ. ಹಾಗಂತ ಲಿಂಗಾಯತ್ ಪಾಲಿಟಿಕ್ಸ್‌ನಡಿ ಶಿವಕುಮಾರ ಉದಾಸಿ ಗೆದ್ದೇಬಿಡುತ್ತಾನೆ ಎನ್ನುವುದು ಮೂರ್ಖತನವೆನಿಸಿಕೊಳ್ಳುತ್ತದೆ. ಯಾಕೆಂದರೆ ಕೂಡಲ ಸಂಗಮದ ಪಂಚಮಸಾಲಿ ಪೀಠ ಸಲೀಂ ಅಹ್ಮದ್‌ರ ಬಹಿರಂಗ ಬೆಂಬಲಕ್ಕೆ ನಿಂತುಕೊಂಡುಬಿಟ್ಟಿದೆ. ನಿಜಕ್ಕೂ ಹಾವೇರಿ ಕ್ಷೇತ್ರದಲ್ಲಿ ಪಂಚಮಸಾಲಿಗರೇ ಅಭ್ಯರ್ಥಿಯನ್ನು ಗೆಲ್ಲಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿಕೊಳ್ಳುವುದು ದಿಟ.





70ರ ದಶಕದಿಂದ 2004ರ ನಡುವಿನ ಲೋಕಸಭಾ ಎಲೆಕ್ಷನ್‌ಗಳಲ್ಲಿ ಬಿ.ಎಂ ಮುಜಾಹಿದ್ದಿನ್ 3 ಬಾರಿ, ಅಜೀಜ್ ಶೇಠ್ ಬಾರಿ ಹಾಗೂ ಪ್ರೊ.ಐ.ಜಿ. ಸನದಿಯಂತಹ ಅಲ್ಪಸಂಖ್ಯಾತ ಸಮುದಾಯದ ವ್ಯಕ್ತಿಗಳನ್ನು ಗೆಲ್ಲಿಸಿಕೊಂಡು ಬಂದಿರುವುದು ಹಾವೇರಿ ಕ್ಷೇತ್ರದ ಹೆಗ್ಗಳಿಕೆ. ಹಾಗೆ ನೋಡಿದರೆ ಉಳಿದೆಲ್ಲ ಲೋಕಸಭಾ ಕ್ಷೇತ್ರಗಳ ಎಲೆಕ್ಷನ್‌ಗಿಂತ ಭಿನ್ನವಾಗಿ ಹಾವೇರಿ ಕ್ಷೇತ್ರದ ಚುನಾವಣೆ ನಡೆಯುವುದು ಬಹಿರಂಗ ಸತ್ಯ. ಒಟ್ಟು ...70,634 ಮತದಾರರನ್ನು ಒಳಗೊಂಡಿರುವ ಹಾವೇರಿ ಕ್ಷೇತ್ರ ಈ ಬಾರಿ ಡೀಲಿಮಿಟೇಷನ್ ಕಾರಣಕ್ಕೆ ಧಾರವಾಡ ದಕ್ಷಿಣ ಕ್ಷೇತ್ರದಿಂದ ಕಳಚಿಕೊಂಡು ಹಾವೇರಿ ಕ್ಷೇತ್ರವಾಗಿ ಮಾರ್ಪಾಟಾಗಿದೆ. ನರಗುಂದ ತಾಲೂಕು ಹೊರತುಪಡಿಸಿದ ಗದಗ ಜಿಲ್ಲೆ ಕೂಡ ಹಾವೇರಿ ಕ್ಷೇತ್ರದಲ್ಲಿ ಲೀನಗೊಂಡಿದೆ.

ಕಳೆದ ಬಾರಿ ಎಲೆಕ್ಷನ್ ತನಕ ಶಿಗ್ಗಾಂವಿ ಮತ್ತು ಹಾನಗಲ್ ಹಿರೇಕೆರೂರುಗಳೆರಡೂ ಧಾರವಾಡ ದಕ್ಷಿಣ ಕ್ಷೇತ್ರದಲ್ಲಿದ್ದ ಕಾರಣಕ್ಕೆ ಇಲ್ಲಿ ಅಲ್ಪಸಂಖ್ಯಾತರ ಗೆಲುವು ಕಟ್ಟಿಟ್ಟ ಬುತ್ತಿಯಂತಿತ್ತು. ಆದರೆ ಇವತ್ತು ಮುಸ್ಲಿಂ ಪ್ರಾಬಲ್ಯದ ಶಿಗ್ಗಾಂವಿ, ಸವಣೂರಗಳೆರಡೂ ಹೊಸದಾಗಿ ರಚನೆಗೊಂಡಿರುವ ಧಾರವಾಡ ಕ್ಷೇತ್ರಕ್ಕೆ ಸೇರ್ಪಡೆಯಾಗಿವೆ. ಹಾವೇರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಲೀಂ ಅಹ್ಮದ್‌ಗೆ ಇದೇ ಆತಂಕವಾಗಿ ಕಾಡುತ್ತಿದೆ. ಹಾಗೆಯೇ ಸಿ.ಎಂ. ಉದಾಸಿ ನೇತೃತ್ವದ ಬಿಜೆಪಿ ಪಾಳೆಯಕ್ಕೆ ಸಂಗೂರು ಸಕ್ಕರೆ ಕಾರ್ಖಾನೆಯನ್ನು ಓಡಿಸಿದ್ದು, ರೈತರ ಮೇಲೆ ಗೋಲಿಬಾರ್ ಮಾಡಿಸಿದ್ದು, ಅರ್ಬನ್ ಬ್ಯಾಂಕ್‌ಗಳನ್ನು ದಿವಾಳಿ ಮಾಡಿದ್ದು ದೊಡ್ಡ ಕಂಟಕವಾಗಿ ಪರಿಣಮಿಸಲಿದೆ. ಅಖಂಡ ಧಾರವಾಡ ಜಿಲ್ಲೆಯ ಕಬ್ಬು ಬೆಳೆಗಾರ ರೈತರ ಪಾಲಿಗೆ ಕಾಮಧೇನು ವಿನಂತಿದ್ದ ಸಂಗೂರು ಸಕ್ಕರೆ ಕಾರ್ಖಾನೆಗೆ ಉದಾಸಿ ಮತ್ತವನ ದತ್ತುಪುತ್ರನಂತಿರುವ ಶಿವರಾಜ ಸಜ್ಜನರ ಕಾಲಿಟ್ಟು ಶುಗರ್ ಫ್ಯಾಕ್ಟರಿಯನ್ನು ನುಂಗಿ ನೀರುಕುಡಿದುಬಿಟ್ಟರು.



ಅದೂ ಸಾಲದೆಂಬಂತೆ 18 ತಿಂಗಳಿನಿಂದ ಕಾರ್ಖಾನೆಯ ಕಾರ್ಮಿಕರಿಗೆ ಸಂಬಳ ನೀಡದೇ ದುರ್ಗಪ್ಪಾ ತಳವಾರ ಮತ್ತು ಹನುಮಂತಪ್ಪಾ ಕಾಳೆಗಳಿಬ್ಬರೂ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದರು. ಕಾರ್ಮಿಕರ ಭವಿಷ್ಯನಿಧಿಯಲ್ಲೂ ಕತ್ತರಿ ಪ್ರಯೋಗಿಸಿದ ಉದಾಸಿ ಪಡೆ ವಿಆರೆಸ್ ಭೂತವನ್ನು ಬಲವಂತವಾಗಿ ಕಾರ್ಖಾನೆಯಂಗಳಕ್ಕೆ ಎಳೆತಂದು ನೂರಾರು ಕುಟುಂಬಗಳ ಮನೆಯ ದೀಪವನ್ನು ಆರಿಸಿಬಿಟ್ಟರು. ಇಲ್ಲಿ ತನಕ ಸುಮಾರು 40 ವರ್ಷಗಳಿಂದ ಚೆನ್ನಬಸಪ್ಪ ಉದಾಸಿ ಉಪಟಳಗಳನ್ನು ಸಹಿಸಿಕೊಂಡಿರುವ ಹಾವೇರಿ ಜಿಲ್ಲೆಯ ಜನರಿಗೆ ಈಗ ಅವನ ಮಗ ಶಿವಕುಮಾರ ಉದಾಸಿಯ ಕಿರುಕುಳವನ್ನು ಅನುಭವಿಸಬೇಕೆ ಎಂಬ ಪ್ರಶ್ನೆ ಕಾಡುತ್ತಿದೆ.





ಶಿವಕುಮಾರ ಉದಾಸಿ ಮೂಲತಃ ರಾಜಕಾರಣದ ಪೂರ್ಣ ಪಾಠ ಗೊತ್ತಿಲ್ಲದ ಆಸಾಮಿ. ರಾಜಕಾರಣವೆಂದರೆ ನೆಲ ಮಾರಿ ದುಡ್ಡು ಗಳಿಸೋ ದಂಧೆ ಎಂದುಕೊಂಡಿರುವ ಈತ ಪಾರ್ಲಿಮೆಂಟ್ ಅಭ್ಯರ್ಥಿಯಾಗಲು ಸ್ವತಃ ಬಿಜೆಪಿಯಲ್ಲೇ ಅಸಮಾಧಾನದ ಹೊಗೆಯಾಡುತ್ತಿದೆ. ಈ ಭಾಗದಲ್ಲಿ ಮೊದಲಿನಿಂದಲೂ ಬಿಜೆಪಿಯನ್ನು ಕಟ್ಟಿ ಬೆಳೆಸಿರುವ ಸೋಮಣ್ಣ ಬೇವಿನಮರದ, ಜಿ.ಶಿವಲಿಂಗಪ್ಪನಂತಹ ಕಟ್ಟಾ ಬಿಜೆಪಿಗರ ಅಭಿಪ್ರಾಯ ಕೇಳದೆ ಸಿಎಂ ಉದಾಸಿ ತನ್ನ ಅಬ್ಕಾರಿ ಸುಪುತ್ರ ಶಿವಕುಮಾರ ಉದಾಸಿಗೆ ಟಿಕೆಟ್ ಕೊಡಿಸಿದ್ದು ಅವರೆಲ್ಲರಿಗೆ ಹೇವರಿಕೆ ತರಿಸಿದೆ. ಅಪ್ಪನ ಹತ್ಯಾ ರಾಜಕಾರಣದ ಹೊರತಾಗಿ ಶಿವಕುಮಾರ ಉದಾಸಿಗೆ ಮತ್ತ್ಯಾವುದೇ ವಿಶೇಷ ವರ್ಚಸ್ಸಿಲ್ಲ. ಆದರೆ ಇವನ ಎದುರಾಳಿಯಾಗಿರುವ ಸಲೀಂ ಅಹ್ಮದ್ ಯಾವತ್ತೂ ಹಲಕಟ್ ರಾಜಕಾರಣ ಮಾಡಿಕೊಂಡು ಬಂದವರಲ್ಲ. 80 ರ ದಶಕದಿಂದ ವಿದ್ಯಾರ್ಥಿ ನಾಯಕನಾಗಿ ಹೊರಹೊಮ್ಮಿದ ಸಲೀಂ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಕುಟುಂಬದ ಕುಡಿ. ಜೊತೆಗೆ ಕಳೆದ 25 ವರ್ಷಗಳಿಂದ ಹಾವೇರಿ ನೆಲವನ್ನು ತನ್ನ ಕರ್ಮಭೂಮಿಯನ್ನಾಗಿಸಿಕೊಂಡಿರುವ ಸಲೀಂ ಈ ಭಾಗದ ಶೈಕ್ಷಣಿಕ, ಆರೋಗ್ಯ, ಸಾಂಸ್ಕೃತಿಕ, ಸಹಕಾರಿ ರಂಗಗಳಿಗೆ ವಿಧಾನ ಪರಿಷತ್ ಸದಸ್ಯತ್ವದ ಅನುದಾನವನ್ನು ಕೊಡಿಸಿದ್ದಾರೆ. ಉದಾಸಿಯ ಭಂಡ ರಾಜಕಾರಣದ ಹೊರತಾಗಿ ಸಲೀಂ ಈ ಭಾಗದ ಜನರ ಪಾಲಿಗೆ ಹೊಸ ಆಶಾಕಿರಣವೇ ಸರಿ.






ಜಾತಿ ಲೆಕ್ಕಾಚಾರದ ಮೂಲಕ್ಕೆ ಕೈಯಿಟ್ಟರೇ ಅಲ್ಲಿಯೂ ಕೂಡ ಗಮನಿಸಲೇಬೇಕಾದಂತಹ ಅಂಶಗಳು ಕಾಣಸಿಗುತ್ತವೆ. ಅದಕ್ಕೆ ಕಾರಣವೆಂದರೇ ಜೆಡಿಎಸ್ ಅಭ್ಯರ್ಥಿ! ಮುಂಡರಗಿಯ ಗೋಸುಂಬೆ ರಾಜಕಾರಣಿ ಮಾಜಿ ಮಂತ್ರಿ ಎಸ್.ಎಸ್.ಪಾಟೀಲರ ಕುವರ ಶಿವಕುಮಾರಗೌಡ ಪಾಟೀಲ ಹಾವೇರಿ ಲೋಕಸಭಾ ಕ್ಷೇತ್ರಕ್ಕೆ ಜೆಡಿಎಸ್‌ನಿಂದ ಎಂಟ್ರಿ ಕೊಟ್ಟಿರುವುದು ಉದಾಸಿ ಪಡೆಗೆ ಚಳಿಜ್ವರ ತರಿಸಿದೆ. ಮೊದಲಿಗೆ ಈ ಭಾಗದ ಕಾಂಗ್ರೆಸ್ ಟಿಕೆಟ್‌ಗಾಗಿ ಬ್ಯಾಡಗಿಯ ಎಸ್.ಆರ್.ಪಾಟೀಲರನ್ನ ಕೋಳಿಪಾಡ ಸಂತತಿ ಎದ್ದು ನಿಲ್ಲಿಸಿತ್ತು. ಹೈಕಮಾಂಡಿನ ಫಿಲ್ಟರ್ ಕೆಲಸದಿಂದ ಕಾಂಗ್ರೆಸ್ ಟಿಕೆಟ್ ಸಲೀಂ ಅಹ್ಮದರಿಗೆ ದಕ್ಕುವಂತಾಗಿದ್ದು ಹಳೇಯ ಕಥೆ. ಯಾವಾಗ ಎಸ್.ಆರ್.ಪಾಟೀಲಗೆ ಕಾಂಗ್ರೆಸ್ ಟಿಕೆಟ್ ದಕ್ಕದೇ ಹೋಯಿತೋ ಆಗ ಅವರು ದೇವೇಗೌಡರ ಕಾಲ ಸಾನ್ನಿಧ್ಯದಲ್ಲಿ ಕಾಣತೊಡಗಿದರು. ಜಾತಿಯಿಂದ ಸಾದರ ಆಗಿರುವ ಎಸ್.ಆರ್.ಪಾಟೀಲ ಬ್ಯಾಡಗಿ, ಹಿರೇಕೆರೂರು, ಹಾನಗಲ್ಲ ಹಾಗೂ ರಾಣೆಬೆನ್ನೂರಿನಲ್ಲಿ ಪ್ರಾಬಲ್ಯ ಹೊಂದಿರುವ, ತಳಮಟ್ಟದಲ್ಲೂ ಜನಬೆಂಬಲ ಗಳಿಸಿರುವ ರಾಜಕಾರಣಿ. ಮುಂದೆ ಮುಂಡರಗಿಯ ಮತ್ತೊಬ್ಬ ಸಾದರ ಗೌಡ ಎಸ್.ಎಸ್.ಪಾಟೀಲ ತಮ್ಮ ಪಿತೃಪಕ್ಷವಾದ ಜೆಡಿಎಸ್‌ಗೆ ಮರಳಿ ಹಾವೇರಿ ಲೋಕಸಭಾ ಜೆಡಿಎಸ್ ಟಿಕೆಟ್‌ನ್ನು ತನ್ನ ಮಗ ಶಿವಕುಮಾರಗೌಡನ ಮುಡಿಗೇರುವಂತೆ ಮಾಡಿದರು. ಇದಕ್ಕೆ ಬ್ಯಾಡಗಿಯ ಮೆಣಸಿನಕಾಯಿ ವ್ಯಾಪಾರಿ ಎಸ್.ಆರ್.ಪಾಟೀಲರು ಕೂಡ ಬೆಂಬಲ ಘೋಷಿಸಿದರು. ಈ ಬೆಳವಣಿಗೆಗಳು ಬಿಜೆಪಿಯ ಲಿಂಗಾಯತ ಓಟ್ ಬ್ಯಾಂಕಿಗೆ ಕತ್ತರಿ ಬೀಳುವಂತೆ ಮಾಡುವುದರಲ್ಲಿ ಯಾವುದೇ ಸಂದೇಹಗಳಿಲ್ಲ.

ಎಸ್. ಆರ್. ಪಾಟೀಲ್, ಎಸ್.ಎಸ್.ಪಾಟೀಲ್ ಒಂದು ಕಾಲದಲ್ಲಿ ಚನ್ನಬಸಪ್ಪ ಉದಾಸಿಯ ಚೆಡ್ಡಿ ದೋಸ್ತಿಗಳಂತೆ ಇದ್ದರೂ ಉದಾಸಿಯಲ್ಲಿರುವ ಅರೋಗೆನ್ಸಿ ಕಾರಣಕ್ಕೆ ಅವರಲ್ಲಿದ್ದ ದೋಸ್ತಿಗೂ ಹೊಡೆತ ಕೊಟ್ಟಿದೆ. ಇದು ಶಿವಕುಮಾರ ಉದಾಸಿಯ ಸೋಲನ್ನು ಸೂಚ್ಯವಾಗಿ ಹೇಳುವಂತಾಗಿದ್ದರಲ್ಲಿ ಯಾವುದೇ ಅಚ್ಚರಿಗಳಿಲ್ಲ. ಜಾತಿವಾರು ಮತದಾರರ ಕಡೆ ಗಮನ ಹರಿಸಿದರೆ ಅಲ್ಲಿಯೂ ಕೂಡ ಅಚ್ಚರಿಯ ಬೆಳವಣಿಗೆಗಳನ್ನು ಹಾವೇರಿ ಮತಕ್ಷೇತ್ರ ಕಾಣುತ್ತಿದೆ. ಹಾವೇರಿಯ ಸ್ಥಳೀಯ ಶಾಸಕ ದಲಿತ ಸಮುದಾಯದ ನೆಹರೂ ಓಲೇಕಾರನನ್ನು ಗಲಾಟೆ ಮಾಡುವುದಕ್ಕಾಗಿ ಅಷ್ಟೆ ಈತನಕ ಬಳಸಿಕೊಂಡಿರುವ ಉದಾಸಿ ಚುನಾವಣಾ ಗೇಮ್ ಪ್ಲಾನ್‌ನಿಂದ ಹೊರಗಿಟ್ಟಿದ್ದು ದಲಿತ ಸಮುದಾಯವನ್ನು ಕೆರಳಿಸಿದೆ. ಸಾಲದ್ದಕ್ಕೆ ಸಿದ್ಧರಾಮಯ್ಯ ಹಾವೇರಿ ಕ್ಷೇತ್ರದಲ್ಲಿ ಎರಡೆರಡು ಬಾರಿ ಪ್ರಚಾರ ಕೈಗೊಂಡಿದ್ದರಿಂದ ಕುರುಬ ಸಮುದಾಯ ಸಲೀಂ ಅಹ್ಮದನನ್ನು ಗೆಲ್ಲಿಸುವುದರಲ್ಲಿ ಶ್ರಮ ವಹಿಸುತ್ತಿದೆ. ಇದರ ನೇತೃತ್ವ ಮಾಜಿ ಸಚಿವ ಹಾಗೂ ಸಜ್ಜನ ರಾಜಕಾರಣಿ ಬಸವರಾಜ ಶಿವಣ್ಣನವರ ವಹಿಸಿಕೊಂಡಿರುವುದು ಬಹಿರಂಗ ಸತ್ಯ. ಇನ್ನು ಪಂಚಮಸಾಲಿ ಪೀಠವೇ ಫತ್ವಾ ಹೊರಡಿಸಿದ್ದರೂ ಆ ಸಮುದಾಯದ ಜನ ಯಾರ ಬೆನ್ನಿಗೆ ನಿಲ್ಲುತ್ತದೆ ಎನ್ನುವುದು ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ. ಅಲ್ಪಸಂಖ್ಯಾತರು ಉದಾಸಿ ಭಂಡಾಟದಿಂದ ಹೈರಾಣೆದ್ದು ಹೋಗಿರುವುದರಿಂದ ಅವರ ತೀರ್ಪು ಸಲೀಂ ಪರವಾಗಿ ಇರುವುದು ಖಾತ್ರಿಯಾಗಿದೆ.


ಒಟ್ಟಾರೆಯಾಗಿ ಹಾವೇರಿ ಲೋಕಸಭಾ ಕ್ಷೇತ್ರದಲ್ಲಿ ಉದಾಸಿ ಪಡೆಯ ಸೋಲಿಗೆ ಜೆಡಿಎಸ್‌ನ ಶಿವಕುಮಾರ ಗೌಡ ಮುನ್ನುಡಿ ಬರೆಯುವಂತಾದರೆ ಕಾಂಗ್ರೆಸ್‌ನ ಸಲೀಂ ಅಹ್ಮದ್ ಗೆಲ್ಲುವುದರಲ್ಲಿ ಯಾವುದೇ ಸಂದೇಹಗಳಿಲ್ಲ.

● ವಿನಯ ಕುರುಳಿಕುಪ್ಪಿ



ಯಡ್ಡಿ ಮಗನ ದುರಾಚಾರದ ವಿರುದ್ಧ ಈಡಿಗ, ಒಕ್ಕಲಿಗ, ಮುಸ್ಲಿಂ ಆಕ್ರೋಶ

'ಬಂ' ಪರ ಕೆಳಜಾತಿಗಳ ಸಿಂಪಥಿ



ಒಂದೆಡೆ ಬೇಕಾಬಿಟ್ಟಿ ದುಡ್ಡು-ಹೆಂಡ ಹಂಚುತ್ತಿರುವ ಯಡ್ಡಿ ಗ್ಯಾಂಗ್ ಮತ್ತೊಂದೆಡೆ ಯಡ್ಡಿ ಗ್ಯಾಂಗ್ ಹಡಬೆ ದುಡ್ಡು ಪಡೆದೂ 'ಬಂ' ಪರ ಪ್ರಚಾರಕ್ಕಿಳಿದ ಜನಸಾಮಾನ್ಯರು. ಇದು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಂಕ್ಷಿಪ್ತ ಚಿತ್ರಣ. ಯಾರೆಷ್ಟೇ ಲಗಾಟಿ ಹಾಕಿದರೂ ಈಡಿಗರು, ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಒಕ್ಕಲಿಗರ ಓಟುಗಳೆಲ್ಲ ಯಡ್ಡಿ ಮಗನ ವಿರುದ್ಧ ಸಂಗ್ರಹಗೊಳ್ಳುವುದು ಶತಸ್ಸಿದ್ಧ. ಹಣ, ಹೆಂಡ, ಸ್ವಜನಪಕ್ಷಪಾತ ಮತ್ತು ಅಧಿಕಾರದ ದರ್ಪದ ವಿರುದ್ಧದ ಜನಾಕ್ರೋಶ ಶಿವಮೊಗ್ಗದ ಮಟ್ಟಿಗೆ ದಿನೇದಿನೇ ಉಲ್ಬಣಿಸುತ್ತಿದೆ. ಅದು ಯಡ್ಡಿ ಮಗನ ಸೋಲಿನ ಮೂಲಕವೇ ಜಗಜ್ಜಾಹೀರುಗೊಳ್ಳುತ್ತದೆ.

ಸೊರಬ, ಸಾಗರ ಮತ್ತು ಬೈಂದೂರಿನ ಈಡಿಗರ ಕೇರಿಗಳಿಗೆ ಮಂತ್ರಿ ಹರತಾಳು ಹಾಲಪ್ಪನವರಿಗೇ ಪ್ರವೇಶ ನಿಷಿದ್ಧ.

ಮತ್ತೊಬ್ಬ ಈಡಿಗ ಶಾಸಕ ಬೇಳೂರು ಗೋಪಾಲ ಕೃಷ್ಣರನ್ನು ತಮ್ಮ ರಸ್ತೆಗೇ ಕಾಲಿಡದಂತೆ ಈಡಿಗ ಹುಡುಗರ ಹಿಂಡೊಂದು ಏರಿಹೋದ ಪ್ರಸಂಗ-

ಮತ್ತು ಬಿಜೆಪಿ ಮುಖಂಡರ ಮನೆಗೆ ಲಗ್ಗೆಯಿಟ್ಟು ಕೂಡಿಟ್ಟ ಕಳಪೆ ಲಿಕ್ಕರ್ ರಾಶಿಗಳನ್ನು ಹೊತ್ತೊಯ್ದು ಪೊಲೀಸರಿಗೊಪ್ಪಿಸುವ ಜನಸಾಮಾನ್ಯರ ಆಕ್ರೋಶ-



ಹಾಲಪ್ಪ

ಹೀಗೆ ಪ್ರತಿನಿತ್ಯ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಒಂದಲ್ಲ ಒಂದು ಊರುಗಳಲ್ಲಿ ಸಂಭವಿಸುತ್ತಿರುವ ಇಂಥ ಘಟನಾವಳಿಗಳೆಲ್ಲ ಏನನ್ನು ಸೂಚಿಸುತ್ತವೆ?

ಬಿಜೆಪಿ ನಾಯಕರ ಪರ ಪಕ್ಷಪಾತ ತೋರುತ್ತಿರುವ ಪೊಲೀಸರು ಜನರೇ ಹಿಡಿದು ಕೊಟ್ಟ ಮದ್ಯದ ಲೋಡನ್ನು ವಶಪಡಿಸಿ ಕೊಳ್ಳದೇ ದುರಾಚಾರವೆಸಗಿದ್ದಾರೆಂದು ತೀರ್ಥಹಳ್ಳಿಯಲ್ಲಿ ಆರು ಸಾವಿರದಷ್ಟು ಜನ ಬೀದಿಗಿಳಿದು ಪ್ರತಿಭಟಿಸಿದ್ದು, ಭದ್ರಾವತಿಯ ಒಕ್ಕಲಿಗ ನಾಯಕರೆಲ್ಲ ಸೇರಿ ಯಡ್ಡಿ ಮಗನ ವಿರುದ್ಧ ಓಟು ಹಾಕಲು ನಿರ್ಧರಿಸಿದ್ದು ಸೊರಬ ಮತ್ತು ಶಿಕಾರಿಪುರದ ಹಳ್ಳಿಹಳ್ಳಿಗಳಲ್ಲಿ ಜನ ರೊಚ್ಚಿಗೆದ್ದು ಬಿಜೆಪಿ ನಾಯಕರ ಮನೆಗಳಿಂದ ವಶಪಡಿಸಿಕೊಳ್ಳುತ್ತಿರುವ ಕಳಪೆ ಲಿಕ್ಕರ್ ಕೇಸುಗಳ ರಾಶಿ ರಾಶಿ; ಇತ್ಯಾದಿಗಳೆಲ್ಲಕ್ಕೂ ಕಾರಣವಿದ್ದೇ ಇದೆ.


ಅದು ಮುಖ್ಯಮಂತ್ರಿ ಯಡಿಯೂರಪ್ಪನವರ ನಿರ್ಲಜ್ಜ ಜಾತಿಬುದ್ಧಿ, ಪುತ್ರ ವ್ಯಾಮೋಹ ಮತ್ತು ಭ್ರಷ್ಟಾಚಾರದ ವಿರುದ್ಧ ಎಲ್ಲಾ ಕೆಳಜಾತಿಗಳ ಅಸಹನೆ. ಇವತ್ತು ಇಡೀ ಕರ್ನಾಟಕದುದ್ದಕ್ಕೂ ಬಿಜೆಪಿ ಪರವಾಗಿ ಹೇಗೆ ಬಣಜಿಗ ಲಿಂಗಾಯತ, ಬ್ರಾಹ್ಮಣ ಮತ್ತು ಮಾರ್ವಾಡಿಗಳೆಲ್ಲ ಒಂದಾಗಿದ್ದಾರೋ ಹಾಗೇ ಇಂಥದೊಂದು ಕೂಟದ ವಿರುದ್ಧ ಒಕ್ಕಲಿಗ, ಕುರುಬ, ಈಡಿಗ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮೂಹಗಳಿಗೆ ಸಿಟ್ಟಿದೆ. ಅದರ ನಿಚ್ಚಳ ಉದಾಹರಣೆ ಗೋಚರಿಸುತ್ತಿರುವುದು ಶಿವಮೊಗ್ಗದಲ್ಲಿ.

ಸರಿಸುಮಾರು 14 ಲಕ್ಷ ಮತದಾರರಿರುವ ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಯಡ್ಡಿಯ ಮಗ ರಾಘವೇಂದ್ರನನ್ನು ನೂರು ಕೋಟಿ ಸುರಿದಾದರೂ ಗೆಲ್ಲಿಸಲೇಬೇಕೆಂಬ ದುರಾಸೆಗೆ ಬಿಜೆಪಿ ಬಿದ್ದಿದೆ. ಹಾಗೇ ನೋಡಿದರೆ ಕಾಂಗ್ರೆಸ್ ಅಭ್ಯರ್ಥಿ ಬಂಗಾರಪ್ಪ ಇಲ್ಲಿ ಕಾಸೇ ಬಿಚ್ಚುತ್ತಿಲ್ಲ, ಕೊಡುವುದಕ್ಕೆ ಅವರ ಬಳಿ ಕಾಸೂ ಇದ್ದಂತಿಲ್ಲ, ಪ್ರಚಾರ, ಪ್ರಭಾವ, ತಾಕತ್ತು ಮತ್ತು ಅಧಿಕಾರಕ್ಕೆ ಹೋಲಿಸಿದರೆ ಯಡ್ಡಿ ಮಗ ರಾಘವೇಂದ್ರನ ಮುಂದೆ ಬಂಗಾರಪ್ಪ ಏನೇನೂ ಅಲ್ಲ.


ಆದರೆ ಜನಸಾಮಾನ್ಯರ ಬೆಂಬಲ ಮತ್ತು ಸಿಂಪಥಿಯ ಲೆಕ್ಕಕ್ಕೆ ಬಂದರೆ 'ಬಂ' ಪರ ಇಡೀ ಶಿವಮೊಗ್ಗದ ಎಲ್ಲಾ ಕೆಳಜಾತಿಗಳೂ ಪರಸ್ಪರ ಕೈಜೋಡಿಸಿಬಿಟ್ಟಿವೆ. ಕಳೆದ ಉಪಚುನಾವಣೆಗೆ ಅಂದರೆ 2005ರ ಶಿವಮೊಗ್ಗ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಆಯನೂರು ಮಂಜುನಾಥ್ ವಿರುದ್ಧ ಹದಿನಾರು ಸಾವಿರದಷ್ಟು ಮತಗಳ ಅಂತರದಿಂದ ಗೆದ್ದ ಬಂಗಾರಪ್ಪ ಈಗಿನಷ್ಟು ಬಲಾಢ್ಯರಾಗಿರ ಲಿಲ್ಲ, ನಿಂತದ್ದು ಕೂಡ ಕರ್ನಾಟಕದ ಮಟ್ಟಿಗೆ ಲೆಕ್ಕಕ್ಕೇ ಇಲ್ಲದ ಸಮಾಜವಾದಿ ಪಕ್ಷದಿಂದ. ಆಗ 'ಬಂ' ವಿರುದ್ಧ ಕಾಂಗ್ರೆಸ್ ಆಯನೂರು ಮಂಜುನಾಥ್‌ರನ್ನು ಇಳಿಸಿತ್ತು, ಬಿಜೆಪಿಯಿಂದ ಭಾನುಪ್ರಕಾಶ್ ನಿಂತಿದ್ದರು. ಜೆಡಿಎಸ್ ಎಲ್.ಟಿ. ತಿಮ್ಮಪ್ಪ ಹೆಗಡೆಯವರನ್ನು ನಿಲ್ಲಿಸಿತ್ತು, ಆಗಿನ್ನೂ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು, ಹಾಗಿದ್ದೂ ಶಿವಮೊಗ್ಗದ ಜನ ಬಂಗಾರಪ್ಪನವರ ಕೈಬಿಡಲಿಲ್ಲ, ಕಾಂಗ್ರೆಸ್ಸಿನ ಆಯನೂರು ಸರಿಸುಮಾರು 3 ಲಕ್ಷ ಓಟು ಪಡೆದರೂ ಬಂಗಾರಪ್ಪನವರನ್ನು ಸೋಲಿಸಲಾಗಲಿಲ್ಲ, ಬಿಜೆಪಿ ಅಭ್ಯರ್ಥಿ ಭಾನುಪ್ರಕಾಶ್ ಸರಿಸುಮಾರು ಒಂದೂವರೆ ಲಕ್ಷ ಓಟು ಪಡೆದೂ ಠೇವಣಿ ಗಿಟ್ಟಲಿಲ್ಲ. ಜೆಡಿಎಸ್‌ಗೆ ಸಿಕ್ಕಿದ್ದು ಕೇವಲ 56 ಸಾವಿರದಷ್ಟು ಓಟು ಮಾತ್ರ.

ಈಗಿನ ಪರಿಸ್ಥಿತಿ ಆಗಿನಂಥಲ್ಲ. ನೆಟ್ಟಗೊಂದು ಪಕ್ಷವೇ ಇಲ್ಲದೆ, ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಇತ್ಯಾದಿ ಪೈಪೋಟಿಯಿದ್ದೂ ಗೆದ್ದ ಬಂಗಾರಪ್ಪ ಈಗ ಕಾಂಗ್ರೆಸ್ ಅಭ್ಯರ್ಥಿ. ಜೊತೆಗೆ ಜೆಡಿಎಸ್ ಕೂಡ ಬಂಗಾರಪ್ಪನವರ ಬೆನ್ನಿಗಿದೆ. ಬಂಗಾರಪ್ಪನವರ ವೈಯಕ್ತಿಕ ತಾಕತ್ತಿನ ಜೊತೆಗೆ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ಶಕ್ತಿಯೂ ಸೇರಿಬಿಟ್ಟರೆ ಅದಿನ್ನೆಂಥಾ ಶಕ್ತಿಯಾಗಬೇಡ?

ಇದಿಷ್ಟೇ ಅಲ್ಲದೇ 'ಬಂ'ಗೆ ಮತ್ತೂ ಒಂದು ಅನುಕೂಲವೆಂದರೆ, ಈಡಿಗರೇ ಬಹುಸಂಖ್ಯಾತರಾಗಿರುವ ಕರಾವಳಿಯ ಬೈಂದೂರು ಇತ್ತೀಚೆಗಷ್ಟೇ ಶಿವಮೊಗ್ಗ ಲೋಕಸಭಾ ವ್ಯಾಪ್ತಿಗೊಳಪಟ್ಟದ್ದು. ಬೈಂದೂರೊಂದರಲ್ಲೇ ನಲವತ್ತೈದು ಸಾವಿರದಷ್ಟು ದೀವರು ಅಂದರೆ ಈಡಿಗರ ಓಟುಗಳಿವೆ. ಎರಡನೆಯ ದೊಡ್ಡ ಜಾತಿಯಾದ ಬಂಟರು ಕೂಡ ಬಂಗಾರಪ್ಪನವರನ್ನೇ ಬೆಂಬಲಿಸುತ್ತಾರೆ. ಯಡ್ಡಿ ಮಗ ರಾಘುವಾಗಲಿ, ಬಿಜೆಪಿಯ ಧೂರ್ತರಾಗಲಿ ಹಣ-ಹೆಂಡ ಅಂತ ಏನೇ ಹಂಚಿದರೂ ಬಿಲ್ಲವ, ಪೂಜಾರಿ, ದೀವರು ಇತ್ಯಾದಿ ಈಡಿಗ ಜನಾಂಗದ ಓಟುಗಳೆಲ್ಲ ಬಂಗಾರಪ್ಪ ಪರ ಹರಿಯುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ.



ಇದೆಲ್ಲ ಗೊತ್ತಿದ್ದೇ ಮುಖ್ಯಮಂತ್ರಿ ಯಡ್ಡಿ ಇಲ್ಲಿ ಕುರುಡು ಕಾಂಚಾಣದ ಆಟಕ್ಕೆ ಕೈಹಾಕಿದ್ದಾರೆ. ನೂರು ಕೋಟಿ ಸುರಿದಾದರೂ ಅವರಿಗೆ ಮಗನನ್ನು ಗೆಲ್ಲಿಸಬೇಕಿದೆ. ಅವರ ಪಾಲಿಗದು ದೊಡ್ಡ ಸವಾಲು. ಇಡೀ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಒಟ್ಟು 14 ಲಕ್ಷ ಮತದಾರರ ಪೈಕಿ ದೀವರು ಅಂದರೆ ಈಡಿಗರದೇ ದೊಡ್ಡ ಸಂಖ್ಯೆ. ಸರಿಸುಮಾರು ಎರಡೂವರೆ ಲಕ್ಷದಷ್ಟಿರುವ ಈಡಿಗರ ಓಟು ಕೀಳಲೆಂದೇ ಯಡ್ಡಿ ಹರತಾಳು ಹಾಲಪ್ಪರನ್ನು ಬಿಜೆಪಿಗೆ ಎಳಕೊಂಡಿದ್ದು. ಹಾಗೇ ಸಾಗರದ ಬಿಜೆಪಿ ಶಾಸಕ ಬೇಳೂರು ಗೋಪಾಲಕೃಷ್ಣ ಕೂಡ ಬಿಜೆಪಿಯೇ. ಮಿಕ್ಕಂತೆ ಒಂದೂ ಮುಕ್ಕಾಲು ಲಕ್ಷದಷ್ಟಿರುವ ಲಿಂಗಾಯತರು ಎರಡನೇ ಅತೀದೊಡ್ಡ ಜನಾಂಗ.



ಜ್ಞಾನೇಂದ್ರ

ಒಂದೂವರೆ ಲಕ್ಷದಷ್ಟು ಮುಸ್ಲಿಮರು, ಒಂದು ಲಕ್ಷದಷ್ಟಿರುವ ಒಕ್ಕಲಿಗರು, ಅಷ್ಟೇ ಸಂಖ್ಯೆಯ ಬ್ರಾಹ್ಮಣರು, 60 ಸಾವಿರದಷ್ಟಿರುವ ಕುರುಬರು, ಒಂದು ಲಕ್ಷದಷ್ಟಿರುವ ದಲಿತರು ಮತ್ತು ಐವತ್ತು ಸಾವಿರದಷ್ಟಿರುವ ಕ್ರಿಶ್ಚಿಯನ್ನರೇ ಶಿವಮೊಗ್ಗದ ಭವಿಷ್ಯ ನಿರ್ಧರಿಸುತ್ತಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶಿಕಾರಿಪುರದಲ್ಲೂ ಇಂಥದ್ದೇ ಜಾತಿ ಸಮೀಕರಣವಿತ್ತು. ಗೆದ್ದದ್ದು ಯಡ್ಡಿಯ ದುಡ್ಡು. ಇದೇ ತಂತ್ರ ಬಳಸಿಬಿಟ್ಟರೆ ಲೋಕಸಭಾ ಚುನಾವಣೆಯಲ್ಲೂ ಬಂಗಾರಪ್ಪನವರನ್ನು ಸೋಲಿಸಿಬಿಡಬಹುದೆಂಬುದು ಯಡ್ಡಿಯ ಲೆಕ್ಕಾಚಾರ!

ಆದರೆ ವಿಧಾನಸಭಾ ಚುನಾವಣೆಯ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ವ್ಯತ್ಯಾಸವಿದೆ. ಆವಾಗ ಯಡ್ಡಿಯನ್ನು ಮುಖ್ಯಮಂತ್ರಿ ಮಾಡುವ ಹಂಗಿತ್ತು. ಈಗಿನದು ಮುಖ್ಯಮಂತ್ರಿಯಾದ ನಂತರದ ಅಟ್ಟಹಾಸ. ರಾಜ್ಯಾದ್ಯಂತ ಒಕ್ಕಲಿಗ ಅಧಿಕಾರಿಗಳಿಗೆ ಯಡ್ಡಿ ಕೊಟ್ಟ ಕಿರುಕುಳವನ್ನು ಇಲ್ಲಿನ ಒಕ್ಕಲಿಗರು ಮರೆತಿಲ್ಲ. ಒಕ್ಕಲಿಗರಿಗಾಗುತ್ತಿರುವ ಅನ್ಯಾಯದ ವಿರುದ್ಧ ಆದಿ ಚುಂಚನಗಿರಿ ಬಾಲಗಂಗಾಧರನಾಥ ಸ್ವಾಮಿಗಳೇ ಹೇಳಿಕೆ ಕೊಟ್ಟದ್ದನ್ನು ಇಲ್ಲಿನ ಒಕ್ಕಲಿಗರು ಗಮನಿಸಿಲ್ಲವೆಂದಲ್ಲ. ಶಿವಮೊಗ್ಗ ಲೋಕಸಭಾ ಕ್ಷೇತ್ರದ ಮಟ್ಟಿಗೆ ಒಕ್ಕಲಿಗರ ಭದ್ರಕೋಟೆಯಂತಿರುವ ಭದ್ರಾವತಿಯೊಂದರಲ್ಲೇ 45 ಸಾವಿರಕ್ಕೂ ಅಧಿಕ ಒಕ್ಕಲಿಗರಿದ್ದಾರೆ. ಆದರೆ ಹಾಲಿ ಶಾಸಕ ಸಂಗಮೇಶ್ ಮತ್ತು ಮಾಜಿ ಶಾಸಕ ಅಪ್ಪಾಜಿ ನಡುವಿನ ಜಿದ್ದಾಜಿದ್ದಿಗೆ ಸಿಲುಕಿದ ಲಿಂಗಾಯತರು ಮತ್ತು ಒಕ್ಕಲಿಗರ ಮಧ್ಯೆ ಯಾವತ್ತಿಗೋ ದ್ವೇಷದ ಬೆಂಕಿ ಬಿದ್ದಾಗಿದೆ.

ಭದ್ರಾವತಿಯ ಒಕ್ಕಲಿಗರು ಸಹಜವಾಗೇ ಲಿಂಗಾಯತರ ವಿರುದ್ಧ ಓಟು ಕೊಡುತ್ತಾರೆ. ಜೊತೆಗೆ ತೀರ್ಥಹಳ್ಳಿಯ ಕಾಂಗ್ರೆಸ್ ಶಾಸಕ ಕಿಮ್ಮನೆ ರತ್ನಾಕರ ಕೂಡ ಒಕ್ಕಲಿಗರೇ. ಶೇ. 80 ರಷ್ಟಾದರೂ ಒಕ್ಕಲಿಗರ ಓಟುಗಳು 'ಬಂ' ಬುಟ್ಟಿಗೆ ಬಿತ್ತೆಂದರೆ ಲೆಕ್ಕಾಚಾರವೇ ಉಲ್ಟಾ ಹೊಡೆಯುತ್ತದೆ. ಶಿವಮೊಗ್ಗದಲ್ಲೂ ನಡೆದ ಚರ್ಚ್‌ಗಳ ಮೇಲಿನ ದಾಳಿಯನ್ನಾಗಲಿ, ಕ್ರೈಸ್ತ ಶಾಲೆಗಳ ಮೇಲಿನ ದೌರ್ಜನ್ಯಗಳನ್ನಾಗಲಿ ಇಲ್ಲಿನ ಕ್ರಿಶ್ಚಿಯನ್ನರು ಮರೆತಿಲ್ಲ.

ಅಕ್ಕಪಕ್ಕದ ಜಿಲ್ಲೆಗಳಿಗೆ ಹೋಲಿಸಿದರೆ ಶಿವಮೊಗ್ಗದ ಮುಸ್ಲಿಮರು ರಾಜಕೀಯವಾಗಿ ಯಾವತ್ತಿಗೂ ಸಂಘಟಿತರೇ. ಪಕ್ಕದ ಕರಾವಳಿಯಲ್ಲಿನ ಮುಸ್ಲಿಂ ವಿರೋಧಿ ಬಿಜೆಪಿ ಅಟ್ಟಹಾಸಕ್ಕಾಗಲಿ, ಕೇಂದ್ರದಲ್ಲೇನಾದರೂ ಬಿಜೆಪಿ ಅಧಿಕಾರಕ್ಕೆ ಬಂದು ಎಲ್ಲಿ ಅಡ್ವಾಣಿ ಪ್ರಧಾನಿಯಾಗುತ್ತಾರೋ ಎಂಬ ಅಳುಕಿಗಾಗಲಿ ಅನಿವಾರ್ಯವಾಗಿ ಮುಸ್ಲಿಮರು ಬಂಗಾರಪ್ಪನವರನ್ನು ಬೆಂಬಲಿಸಬೇಕಿದೆ. ಉಳಿದಂತೆ ದಲಿತರು ಮತ್ತು ಲಂಬಾಣಿಗಳದ್ದೂ ಇದೇ ಪಾಡು. ರಾಜಕೀಯವಾಗಿಯಾಗಲಿ, ಸಾಮಾಜಿಕವಾಗಿ ಆಗಲಿ ದಲಿತ ಸಮೂಹ ಬಿಜೆಪಿಯನ್ನು ಬೆಂಬಲಿಸುವುದಿಲ್ಲ.

ಹಾಗೊಮ್ಮೆ ಅರ್ಧಕ್ಕರ್ಧ ದಲಿತರು ಮತ್ತು ಲಂಬಾಣಿ ಮತಗಳನ್ನು ಯಡ್ಡಿ ಗ್ಯಾಂಗ್ ಖರೀದಿಸಿದರೂ ಎರಡೂವರೆ ಲಕ್ಷದಷ್ಟಿರುವ ಈಡಿಗರು ಯಾವುದೇ ಕಾರಣಕ್ಕೂ ಬಂಗಾರಪ್ಪನವರ ಕೈಬಿಡುವುದಿಲ್ಲ, ಸದ್ಯದ ಪರಿಸ್ಥಿತಿಯಲ್ಲಿ 'ಬಂ' ಕೇವಲ ಈಡಿಗರ ನಾಯಕನಷ್ಟೇ ಅಲ್ಲ; ಅಧಿಕಾರಸ್ಥ ಮೇಲ್ಜಾತಿಗಳ ವಿರುದ್ಧದ ಎಲ್ಲ ಹಿಂದುಳಿದ ವರ್ಗಗಳ ಸ್ವಾಭಿಮಾನದ ಸಂಕೇತ. ಸಾಗರದ ಅನೇಕ ಈಡಿಗರ ಊರುಗಳಲ್ಲಿ ಬಿಜೆಪಿ ಪರ ಪ್ರಚಾರಕ್ಕೆಂದು ಬಂದ ಎಮ್ಮೆಲ್ಲೇ ಬೇಳೂರು ಗೋಪಾಲಕೃಷ್ಣರನ್ನು ಈಡಿಗ ಹುಡುಗರು ಓಡಿಸಿದ್ದಾರೆ. ಸೊರಬದಲ್ಲೂ ಇದೇ ಗತಿ. ಯಾವ ಈಡಿಗರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕುಮಾರ್ ಬಂಗಾರಪ್ಪನವರ ವಿರುದ್ಧ ಹರತಾಳು ಹಾಲಪ್ಪನನ್ನು ಗೆಲ್ಲಿಸಿದ್ದರೋ ಅದೇ ಈಡಿಗರೇ ಯಡ್ಡಿ ಮಗನ ಪರವಹಿಸಿ ಬಂದ ಮಂತ್ರಿ ಹಾಲಪ್ಪನ ಪ್ರಚಾರಕ್ಕೂ ಅವಕಾಶ ಕೊಡದೇ ಹಿಮ್ಮೆಟ್ಟಿಸಿದ್ದಾರೆ.

ಒಂದೆಡೆ ಬೇಕಾಬಿಟ್ಟಿ ದುಡ್ಡು-ಹೆಂಡ ಹಂಚುತ್ತಿರುವ ಯಡ್ಡಿ ಗ್ಯಾಂಗ್, ಮತ್ತೊಂದೆಡೆ ಯಡ್ಡಿ ಗ್ಯಾಂಗ್ ಹಡಬೆ ದುಡ್ಡು ಪಡೆದೂ 'ಬಂ' ಪರ ಪ್ರಚಾರಕ್ಕಿಳಿದ ಜನಸಾಮಾನ್ಯರು. ಇದು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಂಕ್ಷಿಪ್ತ ಚಿತ್ರಣ. ಯಾರೆಷ್ಟೇ ಲಗಾಟಿ ಹಾಕಿದರೂ ಈಡಿಗರು, ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಒಕ್ಕಲಿಗರ ಓಟುಗಳೆಲ್ಲ ಯಡ್ಡಿ ಮಗನ ವಿರುದ್ಧ ಸಂಗ್ರಹಗೊಳ್ಳುವುದು ಶತಸ್ಸಿದ್ಧ. ಹಣ, ಹೆಂಡ, ಸ್ವಜನಪಕ್ಷಪಾತ ಮತ್ತು ಅಧಿಕಾರದ ದರ್ಪದ ವಿರುದ್ಧದ ಜನಾಕ್ರೋಶ ಶಿವಮೊಗ್ಗದ ಮಟ್ಟಿಗೆ ದಿನೇದಿನೇ ಉಲ್ಬಣಿಸುತ್ತಿದೆ. ಅದು ಯಡ್ಡಿ ಮಗನ ಸೋಲಿನ ಮೂಲಕವೇ ಜಗಜ್ಜಾಹೀರುಗೊಳ್ಳುತ್ತದೆ.

● ರಾ. ಸೋಮನಾಥ್

ಭದ್ರಾವತಿಯ ಹೇತ್ಲಾಂಡಿ ಸಂಗಮೇಶನ ದೋಖಾ

ಯಡ್ಡಿ ಪರ ನಿಂತ ಲಿಂಗಾಯತರ ವಿರುದ್ಧ ಹೇಗೆ ಬೇರೆಲ್ಲ ವರ್ಗಗಳು ಒಗ್ಗಟ್ಟಾಗಿವೆ ಎಂಬುದಕ್ಕೆ ಏಪ್ರಿಲ್ 23 ರ ಭದ್ರಾವತಿ ಘಟನೆಯೇ ನಿದರ್ಶನದಂತಿದೆ. ಆವತ್ತು ಬೆಳಗ್ಗೆ ಭದ್ರಾವತಿಯ ಕನಕ ಮಂಟಪದಲ್ಲಿ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಬಂಗಾರಪ್ಪನವರಿಗಿಂತಲೂ ಮೊದಲೇ ಬಂದು ವೇದಿಕೆಯನ್ನಾಕ್ರಮಿಸಿದ್ದು ಎಮ್ಮೆಲ್ಲೇ ಸಂಗಮೇಶ.

ಕೊಂಚ ತಡವಾಗಿ ಬಂದ 'ಬಂ'ಗೆ ಪಕ್ಕಾ ಗರತಿಯ ಗೆಟಪ್ಪಿನಲ್ಲಿ ವೇದಿಕೆಯೇರಿ ಕೂತಿದ್ದ ಸಂಗಮೇಶ್‌ನನ್ನು ಕಂಡಿದ್ದೇ ಉರಿದಿದೆ. ಹಿಂದೆಮುಂದೆ ಕೂಡ ನೋಡದೇ 'ಯಾಕಯ್ಯಾ ಇಲ್ಲಿಗೆ ಬಂದೆ? ನೀನು ಡಬ್ಬಲ್ ಗೇಮ್, ಮೊದಲು ಸ್ಟೇಜ್‌ನಿಂದ ತೊಲಗು' ಎಂದು ಸಂಗಮೇಶ್‌ನನ್ನು ಝಾಡಿಸಿದ್ದಾರೆ. ವೇದಿಕೆಯಲ್ಲೇ ಅವಮಾನಿತನಾದ ಸಂಗಮೇಶ್ ತಕ್ಷಣವೇ ತನ್ನ ಪಟಾಲಮ್ಮನ್ನು ಛೂಬಿಟ್ಟು ಬಂಗಾರಪ್ಪನವರ ವಿರುದ್ಧ ದಾಂಧಲೆ ಮಾಡಿಸಿದ್ದಾನೆ. ಕಾಂಗ್ರೆಸ್ ಕಾರ್ಯಕರ್ತರ ವೇಷದಲ್ಲಿದ್ದ ಸಂಗಮೇಶ್ ಶಿಷ್ಯರು ಹೊಡೆದ ಕಲ್ಲು ಬಂಗಾರಪ್ಪನವರ ಎದೆಗೆ ಬಿದ್ದಿದೆ. ಬಿದ್ದ ಕಲ್ಲೇಟಿಗೆ ಪೆಟ್ಟಾದರೂ ಅದನ್ನು ಬಂಗಾರಪ್ಪ ತೋರಿಸಿಕೊಂಡಿಲ್ಲ. ಸಂಗಮೇಶ್ ಕೂಡ ಹೆಟ್ಟಿಗೆ ಬಾಲಬಿಚ್ಚದೇ ಓಡಿಹೋಗಿದ್ದಾನೆ.

ಅಷ್ಟಕ್ಕೂ ಸಂಗಮೇಶ್ ವಿರುದ್ಧ 'ಬಂ' ರೇಗಾಡಿದ್ದಕ್ಕೆ ಬೇರೆಯದೇ ಕಾರಣವಿದೆ. ಅದು ಸಂಗಮೇಶನ ಜಾತಿಬಲ. 'ಆಪರೇಷನ್ ಕಮಲ'ಕ್ಕೆ ತಲೆಕೊಟ್ಟು ಕಾಂಗ್ರೆಸ್‌ಗೆ ದೋಖಾ ಮಾಡಲು ಸಂಗಮೇಶ್ ತುದಿಗಾಲಲ್ಲಿ ನಿಂತಿದ್ದ. ಅದೇನು ಕುತಂತ್ರವೋ 'ಚುನಾವಣೆ ಕಳೆಯೋ ತನಕ ಸ್ವಲ್ಪ ಸುಮ್ಮಿರು....' ಎಂದಿದ್ದಾರೆ ಯಡ್ಡಿ. ಬಹುಶಃ ಯಡ್ಡಿ ಒಪ್ಪಿದ್ದರೆ ಈ ಹೊತ್ತಿಗಾಗಲೇ ಸಂಗಮೇಶ್ ಬಿಜೆಪಿಗೆ ಬಕರಿಯಾಗಿರುತ್ತಿದ್ದ. ಆದರೆ ಚುನಾವಣೆ ಸಮೀಪಿಸುತ್ತಿದ್ದಂತೆ ಸಂಗಮೇಶ್ ಬಣ್ಣ ಬಯಲಾಯಿತು. ನಾಮಕಾವಸ್ತೆಗಷ್ಟೇ ಕಾಂಗ್ರೆಸ್ ಪರ ಪ್ರಚಾರಕ್ಕಿಳಿದ ಸಂಗಮೇಶ್ ತನ್ನ ಖತರ್‌ನಾಕ್ ಅಣ್ಣ ಬಿ.ಕೆ. ಮೋಹನ್, ತಮ್ಮಂದಿರಾದ ಶಿವು, ಜಗ್ಗ ಮುಂತಾದವರನ್ನು ಬಿಜೆಪಿ ಪರ ಪ್ರಚಾರಕ್ಕೆ ಇಳಿಸಿ ತಾನು ಮಾತ್ರ ಪಕ್ಕಾ ಕಾಂಗ್ರೆಸ್ಸಿಗನಂತೆ ಸೋಗು ಹಾಕಿದ್ದ. ಇದು ಗೊತ್ತಾಗಿಯೇ ಕೆರಳಿದ 'ಬಂ' ಸಂಗಮೇಶ್ ನನ್ನು ವೇದಿಕೆಯಿಂದ ಹೊರದಬ್ಬಿದ್ದು. ತನ್ನ ಬಣ್ಣ ಬಯಲಾಗಿದ್ದು ಗೊತ್ತಾಗಿಯೇ ಸಂಗಮೇಶ್ 'ಬಂ' ವೇದಿಕೆಗೆ ಕಲ್ಲು ಹೊಡೆಸಿದ್ದಾನೆ. ತನ್ನ ತಂದೆಯ ವಯಸ್ಸಿನ ಬಂಗಾರಪ್ಪನವರ ಮೇಲೇ ಪುಂಡರನ್ನು ಛೂಬಿಟ್ಟ ಸಂಗಮೇಶ್ ಸದ್ಯ ಕಾಂಗ್ರೆಸ್ಸಿನಲ್ಲಿದ್ದೂ ಬಿಜೆಪಿಯ ಏಜೆಂಟ್. ಜಾತಿಬುದ್ಧಿಗೆ ಬಿದ್ದು ಕಾಂಗ್ರೆಸ್ಸಿಗೇ ದೋಖಾ ಮಾಡಿದ ಈತನ ವಿರುದ್ಧ ಸದ್ಯ ಭದ್ರಾವತಿಗೆ ಭದ್ರಾವತಿಯೇ ತಿರುಗಿಬಿದ್ದಿದೆ. ■

ಶಿವಮೊಗ್ಗ: ಹಲ ಸ್ವಾರಸ್ಯಕರ ದೃಶ್ಯಗಳು

ಹಿಂದೆಲ್ಲ ತಮ್ಮ ಮತ ಕ್ಷೇತ್ರದಲ್ಲಿ ಪ್ರಚಾರಕ್ಕೂ ಹೋಗದೆ ಗೆದ್ದು ಬರುತ್ತಿದ್ದ ಬಂಗಾರಪ್ಪನವರು ಈ ಬಾರಿ ಸ್ವಲ್ಪ ಡಲ್ ಆಗಿ ಕಾಣುತ್ತಿದ್ದರೆ ಅದಕ್ಕೆ ಕಾರಣ ಅವರ ಜನಪ್ರಿಯತೆ ಕುಗ್ಗಿದೆ ಎಂದಲ್ಲ, ಬದಲಾಗಿ ಇಲ್ಲಿನ ಬಿಜೆಪಿ ಅಭ್ಯರ್ಥಿ ಬಿ.ವೈ. ರಾಘವೇಂದ್ರನ ತಂದೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹರಿಸುತ್ತಿರುವ ಹಣದ ಹೊಳೆ!

ಇವತ್ತು ಕರ್ನಾಟಕದ ಮೂಲೆಮೂಲೆಯಿಂದ ಯಡಿಯೂರಪ್ಪನ ಶಿವಮೊಗ್ಗೆಯ ಮನೆಯ ಖಜಾನೆಗೆ ಹಣ ಹರಿದುಬರುತ್ತಿದೆ. ಈ ಹಣ ರಸ್ತೆ ಮುಖಾಂತರ ಬಂದರೆ ತಪಾಸಣೆಗಳಾಗುವ ಭೀತಿ ಇರುವುದರಿಂದ ಹಲವೊಮ್ಮೆ ರೈಲಿನ ಮುಖಾಂತರವೂ ಬಂದು ಆತನ ಖಜಾನೆ ಸೇರುತ್ತಿದೆ. ಇನ್ನು ಸ್ವತಃ ಯಡಿಯೂರಪ್ಪನ ಹೆಲಿಕಾಪ್ಟರ್ ರೆಕ್ಕೆ ಸೋತ ಕಾಗೆಯಂತೆ ಪದೇಪದೇ ಶಿವಮೊಗ್ಗದಲ್ಲಿ ಇಳಿದು ಹಾರಿ ಹೋಗುತ್ತಿದೆ. ಹೀಗೆ ರೈಲು ಮತ್ತು ಹೆಲಿಕಾಪ್ಟರ್ ಮೂಲಕ ಶೇಖರಣೆಗೊಳ್ಳುತ್ತಿರುವ ಹಣದ ಬಟಾವಡೆಯೂ ಕ್ರಮಬದ್ಧವಾಗಿ ನಡೆಯುತ್ತಿದೆ.

*****

ಈಗಾಗಲೇ ಕಾಂಗ್ರೆಸ್ಸಿನ ಎಲ್ಲಾ ಲೀಡರುಗಳನ್ನು ಖರೀದಿಸಿಯಾಗಿದೆ. ಸಹಜವಾಗಿಯೇ ಈ ಖರೀದಿಯೂ ಅವರವರ ಯೋಗ್ಯತಾನುಸಾರ ನಡೆದಿದೆ. ಪ್ರಭಾವಿಗಳಾಗಿದ್ದರೆ ಎಳೆಂಟು ಲಕ್ಷ. ಜಿಲ್ಲಾ ಪಂಚಾಯ್ತಿ ಸದಸ್ಯರಿಗೆ ಐದು ಲಕ್ಷ. ಪಂಚಾಯ್ತಿ ಸದಸ್ಯರಿಗೆ ಅದರಲ್ಲಿ ಅರ್ಧ.. ಹೀಗೆ ರೇಟ್ ಫಿಕ್ಸ್ ಆಗಿ ಮಾರಾಟ ನಡೆದಿದೆ. ಇವತ್ತು ಶಿವಮೊಗ್ಗ ಜಿಲ್ಲೆಯ ಪರಿಸ್ಥಿತಿ ಹೇಗಾಗಿದೆ ಅಂದರೆ ಯಾವನೇ ಒಬ್ಬ ಬಿಜೆಪಿ ಸೇರಿದನೆಂದರೆ ಆತನ ರೇಟು ಎಷ್ಟಿರಬಹುದು ಎಂದೇ ಜನ ಚರ್ಚಿಸುವಂತಾಗಿದೆ.



ಇದೆಲ್ಲದರ ಮಧ್ಯೆ ಇಲ್ಲಿಯತನಕ ಕೋಸಂಬರಿ, ಪಾನಕ, ಚಿತ್ರಾನ್ನ ತಿಂದೇ ಈ ಜಿಲ್ಲೆಯಲ್ಲಿ ಕಮಲದ ಪಾರ್ಟಿ ಕಟ್ಟಿದ ಚೆಡ್ಡಿಗಳ ಸ್ಥಿತಿ ನಿಜಕ್ಕೂ ಕರುಣಾಜನಕವಾಗಿದೆ. ಬರೀ ಲಾರಿ ಹಿಡಿದು ಚೆಡ್ಡಿ ತೊಟ್ಟು ಜೇಬಿನಲ್ಲಿ ಚಿಲ್ಲರೆ ಕಾಸೂ ಇರದ ಈ ಮೂಲ ಚೆಡ್ಡಿಗಳು ಇವತ್ತು ಹೊಸ ಬಿಜೆಪಿಗಳು ಸಾವಿರ ರೂಪಾಯಿ ನೋಟುಗಳ ಕಂತೆಗಳನ್ನು ಹಿಡಿದು ನಾಯಕರ ಮತ್ತು ಮತಗಳ ಖರೀದಿಗೆ ಇಳಿದಿರುವುದು ಅವರೆಲ್ಲ ಬಿಸಿ ಕಣ್ಣೀರು ಹಾಕುವಂತೆ ಮಾಡಿದೆ!

*****


ಬಿಜೆಪಿ ಸಿದ್ಧಾಂತಕ್ಕೆ ವಿರುದ್ಧವಾಗಿ ಯಡಿಯೂರಪ್ಪ ತನ್ನ ಮಗನನ್ನು ತಂದು ಚುನಾವಣಾ ಕಣಕ್ಕಿಳಿಸಿದ ಫಲವಾಗಿ ಇಲ್ಲಿಯತನಕ ತಾವೂ ಬಿಜೆಪಿಯ ಪ್ರಮುಖ ನಾಯಕರೆ ಎಂದು ಬೀಗುತ್ತಿದ್ದ ಆಯನೂರ್ ಮಂಜುನಾಥ್ ಮತ್ತು ಭಾನು ಪ್ರಕಾಶ್ ಅವರ ಜಮಾನಾ ಮುಗಿದಂತೆ ಕಾಣಿಸುತ್ತಿದೆ. ಆದರೆ ಅವರ್‍ಯಾರೂ ಬಾಯಿಬಿಡುತ್ತಿಲ್ಲ. ಪ್ರಾಯಶಃ ಅವರ ಬಾಯಿಗಳಿಗೂ ಹಣದ ಕಂತೆಗಳನ್ನು ತುರುಕಿರಬಹುದು ಎಂದು ಸಾಮಾನ್ಯ ಜನ ಲೇವಡಿ ಮಾಡುತ್ತಿದ್ದಾರೆ.

ಈ ಚುನಾವಣೆ ಬಂಗಾರಪ್ಪನವರಿಗೆ ಒಂದು ದೊಡ್ಡ ಸವಾಲಾಗಿದ್ದರೂ ಅವರು ತಮ್ಮ ಮಾತಿನ ವೈಖರಿಯನ್ನೇನೂ ಬದಲಿಸಿಲ್ಲ, ಯಾರನ್ನೂ ಓಲೈಸುತ್ತಿಲ್ಲ. ಅವರ ಠೇಂಕಾರ ಎಂದಿನಂತೆ ಮುಂದುವರೆದಿದೆ. ಈ ಕಾರಣಕ್ಕಾಗಿಯೇ ಅವರು "ರಾಮಚಂದ್ರಾಪುರಮಠದ ಸ್ವಾಮಿ ಬಿಜೆಪಿ ಸ್ವಾಮಿ. ಸಾರ್ವಜನಿಕರ ತೆರಿಗೆ ಹಣವನ್ನು ಆ ಮಠಕ್ಕೆ ಕೊಟ್ಟ ಯಡಿಯೂರಪ್ಪ ಅಕ್ಷಮ್ಯ ಅಪರಾಧ ಮಾಡಿದ್ದಾರೆ" ಎಂದು ಬಹಿರಂಗವಾಗಿಯೇ ಆರೋಪಿಸಿದರು.

*****


ಇದರ ವಿರುದ್ಧ ಸಾಗರದ ಹವ್ಯಕ ಬ್ರಾಹ್ಮಣರ ಸಮುದಾಯ ಒಗ್ಗಟ್ಟಿನಿಂದ ಪ್ರತಿಭಟಿಸಿತ್ತು. ವಿಚಿತ್ರವೆಂದರೆ ಇಲ್ಲಿಯತನಕ ತಾನೋರ್ವ ಮಹಾನ್ ಸೆಕ್ಯುಲರ್ ರಾಜಕಾರಣಿ ಎಂದು ಪೋಸು ಕೊಡುತ್ತಿದ್ದ ಬಿ.ಆರ್. ಜಯಂತ್ ಎಂಬಾತ ಹವ್ಯಕರ ಜೊತೆ ಪ್ರತಿಭಟಿಸುವ ಮೂಲಕ ತನ್ನ ಜಾತೀವಾದಿ ಬುದ್ಧಿಯನ್ನು, ತನ್ನ ಜನಿವಾರವನ್ನೂ ಬಹಿರಂಗಪಡಿಸಿದ.

*****



ಹವ್ಯಕ ಬ್ರಾಹ್ಮಣರು ಹೀಗೆ ಒಗ್ಗಟ್ಟಾಗಿ ಬಂಗಾರಪ್ಪನವರ ವಿರುದ್ಧ ಪ್ರತಿಭಟಿಸಿದ್ದರಿಂದ ಒಳ್ಳೆಯದೇ ಆಯಿತು. ಯಾಕೆಂದರೆ ಮೇಲುಜಾತಿ ಹವ್ಯಕ ಭ್ರಾಹ್ಮಣರ ವಿರುದ್ಧ ಈಡಿಗರು ಮತ್ತು ಇತರೆ ಹಿಂದುಳಿದ ಜಾತಿ ಸಮುದಾಯಗಳು ಬಂಗಾರಪ್ಪನವರ ಪರವಾಗಿ ಸಂಘಟಿತರಾದರು! ಈ ಕ್ಷೇತ್ರದಲ್ಲಿ ಎರಡು ಲಕ್ಷ ಈಡಿಗರು, ಸುಮಾರು ಎರಡು ಲಕ್ಷ ಎಸ್‌ಸಿಗಳು, 55,000 ಕುರುಬರು, ಸುಮಾರು ಮೂರು ಲಕ್ಷ ಇತರೆ ಕೆಳಜಾತಿ ಮತ್ತು ಹಿಂದುಳಿದ ಜಾತಿ ಮತದಾರರಿದ್ದಾರೆ. ಇವರೆಲ್ಲ ಒಂದೆಡೆಯಾದರೆ, ಎರಡು ಲಕ್ಷ ಲಿಂಗಾಯತರು ಮತ್ತು ಒಂದು ಲಕ್ಷ ಬ್ರಾಹ್ಮಣರು ಇನ್ನೊಂದೆಡೆಯಾದರೆ ಫಲಿತಾಂಶ ಏನಾಗಬಹುದು ಎಂಬುದು ಸಿಂಪಲ್ ಲೆಕ್ಕವಲ್ಲವೇ?!

*****



1990ರ ಚುನಾವಣೆಯಲ್ಲಿ ಬಂಗಾರಪ್ಪ ಜಿಲ್ಲೆಯಲ್ಲಿ ಮೂವರು ಲಿಂಗಾಯತ ಅಭ್ಯರ್ಥಿಗಳಿಗೆ ಟಿಕೆಟ್ ಕೊಟ್ಟು, ಅವರನ್ನೆಲ್ಲ ಗೆಲ್ಲಿಸಿ ಈಶ್ವರಪ್ಪ ಮತ್ತು ಯಡಿಯೂರಪ್ಪನನ್ನು ಸೋಲಿಸಿ ಎಸ್.ಎಂ. ಕೃಷ್ಣರಿಗೆ ವಿರೋಧ ಪಕ್ಷವೇ ಇಲ್ಲದಂತೆ ಮಾಡಿದ್ದರು. ಆ ಪೈಕಿ ಶಿಕಾರಿಪುರದ ಮಹಾಲಿಂಗಪ್ಪ ಮತ್ತು ಶಿವಮೊಗ್ಗದ ಚಂದ್ರಶೇಖರಪ್ಪ ಇನ್ನೂ 'ಬಂ' ನಿಷ್ಠೆಯನ್ನು ತೋರುತ್ತಿದ್ದರೆ, ಭದ್ರಾವತಿ ಸಂಗಮೇಶ ಈ ಕ್ಷಣಕ್ಕೂ 'ಬಂ' ಕಣ್ಣಿಗೆ ಬಿದ್ದಿಲ್ಲ. ತನ್ನ ಮನೆಯವರನ್ನೆಲ್ಲಾ ರಾಘವೇಂದ್ರನ ಪರ ಪ್ರಚಾರಕ್ಕೆ ಕಳುಹಿಸಿ ಆತ ಮಾತ್ರ ಎಲ್ಲೋ ಅಡಗಿ ಕೂತಿದ್ದಾನೆ. ಇನ್ನು ಭದ್ರಾವತಿಯ ಅಪ್ಪಾಜಿ ಗೌಡ ಬಿಜೆಪಿಯಿಂದ ಹಣ ಪಡೆದು ಭೂಗತನಾಗಿದ್ದಾನೆ.

*****

ಈ ಕ್ಷೇತ್ರದ ಲಿಂಗಾಯತರೆಲ್ಲಾ ಬಿಜೆಪಿಯ ಯಡಿಯೂರಪ್ಪನ ಹಿಂದಿದ್ದಾರೆ ಎಂಬುದಂತೂ ಸುಳ್ಳು. ಯಾಕೆಂದರೆ ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವ ಸಾದರ ಲಿಂಗಾಯತರು ಮತ್ತು ನೊಣಬ ಲಿಂಗಾಯತರು "ನಮಗೂ ಸ್ವಾಭಿಮಾನವಿದೆ. ಯಡಿಯೂರಪ್ಪ ಮಾಡುತ್ತಿರುವ ರಾಜಕಾರಣವನ್ನೆಲ್ಲಾ ನಾವು ಸಹಿಸಲಾಗುವುದಿಲ್ಲ" ಎನ್ನುತ್ತಾ ಬಂಗಾರಪ್ಪನವರಿಗೆ ನಿಷ್ಠೆ ತೋರುತ್ತಿದ್ದಾರೆ.

*****

ಕಳೆದ ಚುನಾವಣೆಯಲ್ಲಿ ಬಂಗಾರಪ್ಪನವರು ಸೋತಾಗ ಅವರ ಪರ ಪ್ರಚಾರ ಮಾಡಲು ಯಾರೂ ಇರಲಿಲ್ಲ. ಆದರೆ ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್‌ನ ದಂಡು ಅವರ ಬೆನ್ನಿಗಿದೆ. ಅದರಲ್ಲೂ ಜೆಡಿಎಸ್‌ನ ಶ್ರೀಕಾಂತ್ ದೇವೇಗೌಡರ ಆಣತಿಯಂತೆ ಬಂಗಾರಪ್ಪನವರ ಪರವಾಗಿ ಓಡಾಡುತ್ತಿದ್ದಾರೆ. ಭದ್ರಾವತಿಯಲ್ಲಿ ಸಂಗಮೇಶ್ ಮತ್ತು ಅಪ್ಪಾಜಿ ಬದಲಿಗೆ ಬಿಎಸ್‌ಪಿಯ ಮಹೇಶ್ ಕುಮಾರ್ ಕಾಂಗ್ರೆಸ್ ಸೇರಿಕೊಂಡು ಕಾಂಗ್ರೆಸ್ ಪರ ಕೆಲಸ ಮಾಡುತ್ತಿದ್ದಾರೆ.

*****

ಶಿವಮೊಗ್ಗ ಸಮಾಜವಾದಿ ಗೋಪಾಲಗೌಡರು ರಾಜಕಾರಣ ಮಾಡಿದ ಜಿಲ್ಲೆ. ಹಲವಾರು ಚಳವಳಿಗಳು ಹುಟ್ಟಿ ಹಾಕಿದ ಜಿಲ್ಲೆ. ಇಂತಹ ಜಿಲ್ಲೆಯಲ್ಲಿ ಯಡಿಯೂರಪ್ಪನ ಅಸಹ್ಯ ಹುಟ್ಟಿಸುವ ಹಣದ ರಾಜಕಾರಣ ನೋಡಿ ಜನರಿಗೆ ಬೇಸರವಾಗುತ್ತಿದೆ.

*****

ಈ ಚುನಾವಣೆಯಲ್ಲಿ ರಾಘವೇಂದ್ರ ಗೆದ್ದರೆ ಅದು ಖಂಡಿತವಾಗಿಯೂ ಜನಾಭಿಪ್ರಾಯವಾಗಿರುವುದಿಲ್ಲ. ಬದಲಾಗಿ ಮತಗಳನ್ನು ಖರೀದಿ ಮಾಡಿ ಸಾಧಿಸಿದ ಗೆಲುವು ಮಾತ್ರವಾಗುತ್ತದೆ. ಅಂತಹ ಕಳಂಕ ಶಿವಮೊಗ್ಗ ಕ್ಷೇತ್ರಕ್ಕೆ ಅಂಟದಿರಲಿ ಎಂಬುದೇ ಇಲ್ಲಿನ ಎಲ್ಲಾ ಪ್ರಜ್ಞಾವಂತರ ಆಶಯವಾಗಿದೆ. ■

ಮುಸ್ಲಿಮರು ಬಿಜೆಪಿಗೆ ಯಾಕೆ ಓಟು ಹಾಕುವುದಿಲ್ಲ?

ಈ ದೇಶದ ಪ್ರಜಾಪ್ರಭುತ್ವ, ಜಾತ್ಯತೀತ ವ್ಯವಸ್ಥೆಯನ್ನು ಕಟ್ಟಿಬೆಳೆಸಲು ಸ್ವಾತಂತ್ರ್ಯಾನಂತರದ ಚುನಾವಣೆಗಳಲ್ಲಿ ಮುಸ್ಲಿಮರು ಪ್ರಯತ್ನಿಸಿದ್ದಾರೆಯೇ ಹೊರತು ಕೋಮುವಾದಕ್ಕೆ ಎಂದೂ ಬೆಂಬಲ ಸೂಚಿಸಿಲ್ಲ.



1925 ರಲ್ಲಿ ಹುಟ್ಟಿಕೊಂಡ ಆರೆಸ್ಸೆಸ್ ಯೋಜನಾಬದ್ಧವಾಗಿ ಪ್ರಚಾರ ಮಾಡುತ್ತಿರುವ ಮುಸ್ಲಿಮ್ ದ್ವೇಷದಿಂದ ದೇಶಾದ್ಯಂತ ಮುಸ್ಲಿಮರ ಮಾರಣ ಹೋಮ ನಡೆಯುತ್ತಿದೆ. ಆರೆಸ್ಸೆಸ್‌ನ ರಾಜಕೀಯ ಪಕ್ಷ ಬಿಜೆಪಿ ಉದಯಗೊಂಡ ನಂತರವಂತೂ ದೇಶದ ಸಂವಿಧಾನ ಹಾಗೂ ಪ್ರಜಾತಂತ್ರವನ್ನು ಅಣಕಿಸುವಂತೆ ಬಾಬರಿ ಮಸೀದಿಯನ್ನು ಉರುಳಿಸಲಾಯಿತು. ಆನಂತರ ಗುಜರಾತ್ ಹತ್ಯಾಕಾಂಡ ನಡೆಯಿತು. ಬಿಜೆಪಿಯನ್ನು ಅಧಿಕಾರಕ್ಕೆ ತರಲು ಮುಖ್ಯವಾಗಿ ಆರೆಸ್ಸೆಸ್ ಬಳಸಿಕೊಂಡ ಎರಡು ಚಿಂತನಾಧಾರೆಗಳು ಕೂಡ ಅದುವೇ ಆಗಿದ್ದವು.

1. ಮುಸ್ಲಿಮರ ವಿರುದ್ಧ ಕಠಿಣ ಧೋರಣೆಯನ್ನು ತಾಳುವಂತೆ ಮಾಡಿ ಅವರ ಮೇಲೆ ಆಕ್ರಮಣ ನಡೆಸುವಂತೆ ಮಾಡುವುದು.

2. ಸಾಮ್ರಾಜ್ಯಶಾಹಿಗಳಿಗೆ ಗೌರವ ತೋರಿ ಅವರಿಗೆ ಬದ್ಧರಾಗಿ ಇರುವುದು. ಹಿಂದೂತ್ವ ರಾಷ್ಟ್ರದ ಪ್ರತಿಪಾದಕರು.

ಒಮ್ಮೆಯೂ ಈ ಎರಡು ಧೋರಣೆಯನ್ನು ಅಲ್ಲಗಳೆದಿಲ್ಲ.

ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ ಮಂಚ್, ಭಜರಂಗದಳ ಮುಂತಾದ ಆರೆಸ್ಸೆಸ್ ಪರಿವಾರದ ಸಂಘಟನೆಗಳನ್ನು ಮುಸ್ಲಿಮರನ್ನು ಮತ್ತು ಕ್ರಿಶ್ಚಿಯನ್ನರನ್ನು ನಿರ್ನಾಮಗೊಳಿಸಲು ಬಳಸಲಾಗುತ್ತಿದೆ. ಬಿಜೆಪಿ ಆಡಳಿತ ನಡೆಸುತ್ತಿರುವ ಗುಜರಾತನ್ನು ಇದರ ಪ್ರಯೋಗಶಾಲೆಯಾಗಿ ಉಪಯೋಗಿಸಿದ ನಂತರ ದೇಶದ ಇತರ ರಾಜ್ಯಗಳಲ್ಲಿಯೂ ಬಿಜೆಪಿ ಈ ಸಂಘಟನೆಗಳನ್ನು ಇಂತಹ ಹಿಂಸಾಚಾರಕ್ಕೆ ಬಳಸುತ್ತಿದೆ. ಉದಾಹರಣೆಗೆ ಕರ್ನಾಟಕ ಮತ್ತು ಒರಿಸ್ಸಾ.

ಸ್ವಾತಂತ್ರ್ಯಾನಂತರ ನಮ್ಮ ದೇಶದ ಸರಕಾರ ಎರಡು ಸಲ ದೇಶವಿರೋಧಿ ಚಟುವಟಿಕೆಗಳಿಗಾಗಿ ಆರೆಸ್ಸೆಸ್‌ಅನ್ನು ನಿಷೇಧಿಸಿದೆ. ಆರೆಸ್ಸೆಸ್‌ನ ನಾಯಕರು ಹಿಟ್ಲರ್, ಮುಸೋಲಿನಿಯ ಚಿಂತನಾಧಾರೆಯನ್ನು ಹೊಂದಿದವರು ಮತ್ತು ನಾಸಿಸಂ, ಫ್ಯಾಸಿಸಂನ ಆದರ್ಶವನ್ನು ನೆಚ್ಚಿಕೊಂಡವರು ಎಂಬುದನ್ನು ಚರಿತ್ರೆಯಿಂದ ತಿಳಿದುಕೊಳ್ಳಬಹುದು. ಆರೆಸ್ಸೆಸ್‌ನ ರಾಜಕೀಯ ಪಕ್ಷ ಬಿಜೆಪಿ ಇದೇ ಆದರ್ಶವನ್ನು ತನ್ನ ಗುಪ್ತ ಅಜೆಂಡವನ್ನಾಗಿಸಿಕೊಂಡಿದೆ. ಬಿಜೆಪಿ ಕೇವಲ ಅಲ್ಪಸಂಖ್ಯಾತರ ವಿರೋಧಿ ಅಲ್ಲ, ದಲಿತರನ್ನೂ, ಹಿಂದುಳಿದ ವರ್ಗಗಳನ್ನೂ, ಹಿಂದೂ ಧರ್ಮದ ಮಹಿಳೆಯರನ್ನೂ ಕೂಡ ಇವರು ಶತ್ರುಗಳಂತೆ ಕಾಣುತ್ತಾರೆ.


ಮಾನವೀಯತೆಯ ಪರಿಗಣನೆ ಇಲ್ಲದ, ಗೌರವಯುತ ಅಸ್ತಿತ್ವವೇ ಇಲ್ಲದ, ಮೂಲಭೂತ ಹಕ್ಕುಗಳನ್ನೇ ನೀಡದ, ಮಹಿಳೆಯರನ್ನು ಅಪಮಾನಿಸುವ, ದಲಿತರ ಚರ್ಮ ಸುಲಿಯುವ ಒಂದು ಕರಾಳ ರಾಷ್ಟ್ರವನ್ನು ಹುಟ್ಟುಹಾಕಲು ಈ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬಳಸಿಕೊಂಡು ಬಿಜೆಪಿ ಪ್ರಯತ್ನಿಸುತ್ತಿದೆ.


ಬಿಜೆಪಿ ನಮ್ಮ ದೇಶದ ಚುನಾವಣಾ ವ್ಯವಸ್ಥೆಯನ್ನು ಬಳಸಿಕೊಂಡು ಒಂದೊಂದೇ ಸೀಟನ್ನು ಹೆಚ್ಚಿಸುತ್ತಲೇ ಹೋದಂತೆ ಈ ದೇಶದ ಸೆಕ್ಯುಲರ್ ಸಿದ್ಧಾಂತಗಳು ಬಲಹೀನವಾದದ್ದನ್ನು ನಾವು ಕಾಣುತ್ತಿದ್ದೇವೆ. ಕುಸಿದು ಬೀಳುತ್ತಿರುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಎತ್ತಿನಿಲ್ಲಿಸಲು ಹಾಗೂ ಈ ದೇಶದ ಜಾತಿ, ಧರ್ಮ, ಭಾಷೆ, ವೇಷ ಭೂಷಣಾದಿ ವೈವಿಧ್ಯತೆಯಲ್ಲಿ ಏಕತೆಯನ್ನು ಮರಳಿ ತರಲು ಬಯಸುವ ಮುಸ್ಲಿಮರು ಎಂದಿಗೂ ಬಿಜೆಪಿಗೆ ಓಟು ಹಾಕುವುದಿಲ್ಲ. ಈ ದೇಶದ ಪ್ರಜಾಪ್ರಭುತ್ವ, ಜಾತ್ಯತೀತ ವ್ಯವಸ್ಥೆಯನ್ನು ಕಟ್ಟಿಬೆಳೆಸಲು ಸ್ವಾತಂತ್ರ್ಯಾನಂತರದ ಚುನಾವಣೆಗಳಲ್ಲಿ ಮುಸ್ಲಿಮರು ಪ್ರಯತ್ನಿಸಿದ್ದಾರೆಯೇ ಹೊರತು ಕೋಮುವಾದಕ್ಕೆ ಎಂದೂ ಬೆಂಬಲ ಸೂಚಿಸಿಲ್ಲ.

ಎಲ್ಲ ಹಿಂದೂತ್ವವಾದಿಗಳು, ಜಾತಿವಾದಿಗಳು ಹಾಗೂ ಫ್ಯಾಸಿಸ್ಟ್ ಮನೋಭಾವದವರು, ಮಧ್ಯಯುಗದ ಪೌರಾಣಿಕ ಮಾನಸಿಕತೆಯಲ್ಲಿ ತೊಳಲಾಡುವವರು, ಧಾರ್ಮಿಕ ಉನ್ಮಾದ ಬಡಿದೆಬ್ಬಿಸುವವರು, ಹಿಂಸಾಚಾರ ನಡೆಸಿ ಅಧಿಕಾರ ಪಡೆಯುವವರು, ಸಮಾಜದ ಮತ್ತು ಮಾನವತೆಯ ಶತ್ರುಗಳು. ಇದು ಬಹುತೇಕ ಮುಸ್ಲಿಮರಿಗೆ ತಿಳಿದಿರುವುದರಿಂದ ಅವರು ಎಂದಿಗೂ ಬಿಜೆಪಿಗೆ ಓಟು ಹಾಕುವುದಿಲ್ಲ. ಜನ ವಿರೋಧಿ ಸರಕಾರ ಬರುವುದನ್ನು ಈ ದೇಶದ ಅತಿದೊಡ್ಡ ಅಲ್ಪಸಂಖ್ಯಾತರು ಬಯಸುವುದಿಲ್ಲ.

● ಕೆ.ಎಂ.ಶರೀಫ್

ಮೈಸೂರು: ಚೆಡ್ಡಿ ಕುರುಬ V/s ದೊಡ್ಡಿ ಕುರುಬ



ವಿಜಯಶಂಕರ್



ಒಬ್ಬ ಚೆಡ್ಡಿ ಕುರುಬ ಮತ್ತೊಬ್ಬ ದೊಡ್ಡಿ ಕುರುಬ. ಇವರ ಮಧ್ಯೆ ಕೊಡಗು ಗೌಡನ ಬೇಳೆ ಬೇಯುತ್ತಾ?


ಇದು ಮೈಸೂರು ಲೋಕಸಭಾ ಕ್ಷೇತ್ರದ ವಸ್ತುಸ್ಥಿತಿ. ಕಳೆದ ಬಾರಿ ಗೆದ್ದ ಬಜೆಪಿಯ ವಿಜಯ್‌ಶಂಕರ್ ವಿರುದ್ಧ ಅವರದೇ ಕುರುಬ ಜಾತಿಯ ವಿಶ್ವನಾಥ್ ನಿಲ್ಲದೇ ಹೋಗಿದ್ದರೆ ಅದರ ಕತೆಯೇ ಬೇರೆಯಿತ್ತು, ಕುರುಬರೆಲ್ಲ ಸಾರಾಸಗಟಾಗಿ ಬಜೆಪಿಗೆ ಗುದ್ದಿ ವಿಜಯಶಂಕರ್ ಗೆಲ್ಲುವುದು ಕಷ್ಟವಿರಲಿಲ್ಲ, ಆದರೆ ಕುರುಬರ ಮಧ್ಯೆ ಚೆಡ್ಡಿ ಕುರುಬನೋ ಅಥವಾ ದೊಡ್ಡಿ ಕುರುಬನೋ? ಅಥವಾ ಹೈಟೆಕ್ ಕುರುಬನೋ ಅಥವಾ ಲೋಕಲ್ ಕುರುಬನೋ ಎಂಬ ಪ್ರಶ್ನೆ ಬಂದರೆ ವಿಶ್ವನಾಥ್‌ರನ್ನೇ ಆಯ್ಕೆ ಮಾಡಿಕೊಳ್ಳದೇ ಮೈಸೂರಿನ ಕುರುಬರಿಗೆ ವಿಧಿಯಿಲ್ಲ,

ಏಕೆಂದರೆ ಬಜೆಪಿಯಿಂದ ಎರಡು ಬಾರಿ ಗೆದ್ದು ಸಂಸದರಾದ ವಿಜಯ್‌ಶಂಕರ್ ಯಾರಿಗೂ ಕೇಡನ್ನು ಬಗೆದಿಲ್ಲ ನಿಜ. ಆದರೆ ಯಾರಿಗೂ ಒಳಿತನ್ನೂ ಮಾಡಿಲ್ಲ. ಹಣೆಗೆ ಅಚ್ಚುಕಟ್ಟಾಗಿ ಕುಂಕುಮ ಮೆತ್ತಿಕೊಂಡು ಟಪ್‌ಟಾಪ್ ಡ್ರೆಸ್ ಮಾಡುತ್ತಾರೆ. ಏನ್ ಬ್ರದರ್, ಚೆನ್ನಾಗಿದ್ದೀರಾ? ಎಂದು ನೀಟಾಗಿಯೇ ಕುಶಲೋಪರಿ ವಿಚಾರಿಸುತ್ತಾರೆ.



ಒಮ್ಮೆ ಗೆದ್ದು ದೆಹಲಿಗೆ ಹಾರಿದರೆಂದರೆ ಮತ್ತೆ ಪ್ರತ್ಯಕ್ಷರಾಗುವುದು ಚುನಾವಣೆಗಿನ್ನು ಆರು ತಿಂಗಳಿರುವಾಗಲೇ. ರಾಜ್ಯದ ಯಾವುದೇ ಸಮಸ್ಯೆ ಬಗ್ಗೆ ಲೋಕಸಭೆಯಲ್ಲಿ ಉಸಿರೆತ್ತುವುದಿರಲಿ, ಓಟು ಕೊಟ್ಟ ಮೈಸೂರಿನ ಜನಕ್ಕೂ ಒಂದೇ ಒಂದು ಶಿಫಾರಸ್ಸು ಪತ್ರ ಕೊಟ್ಟವರಲ್ಲ, ಇದು ಮೈಸೂರಿನ ಮಾಜಿ ಸಂಸದ ವಿಜಯ್‌ಶಂಕರ್ ವ್ಯಕ್ತಿತ್ವ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್‌ನ ಗುರುಸ್ವಾಮಿ ವಿರುದ್ಧ ಕೇವಲ 8 ಸಾವಿರ ಮತಗಳ ಅಂತರದಿಂದ ಗೆದ್ದ ವಿಜಯ್‌ಶಂಕರ್ ಸದ್ಯ ಹುಣಸೂರಿನ ತಮ್ಮ ಮನೆಯನ್ನೇ ಖಾಲಿ ಮಾಡಿಕೊಂಡು ಮೈಸೂರಿನ ಕುವೆಂಪುನಗರದ ಬಂಗಲೆಗೆ ಬಂದಿದ್ದಾರೆ. ನಂಜನಗೂಡಿನಲ್ಲಿ ತಮ್ಮ ಅಶೋಕ್ ಹೆಸರಿನಲ್ಲೊಂದು ಗ್ಯಾಸ್ ಏಜೆನ್ಸಿಯನ್ನೂ ತೆರೆದಿದ್ದಾರೆ. ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮೈಸೂರು ಪಕ್ಕದಲ್ಲೇ ನಾಲ್ಕೆಕರೆ ಜಮೀನು ಗಿಟ್ಟಿಸಿದ್ದಾರೆ. ಅದು ಯಾವ ಕೈಗಾರಿಕೆಗೆ ಎಂಬುದು ಮಾತ್ರ ನಿಗೂಢವಾಗಿದೆ.


ವಿಜಯ

ಸಾಲದ್ದಕ್ಕೆ ತಮ್ಮ ಹುಟ್ಟೂರು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಗುಮ್ಮನಹಳ್ಳಿಯಲ್ಲಿ ಎಂಬತ್ತೆಕರೆಯ ಭಾರೀ ಆಸ್ತಿಯನ್ನೇ ಖರೀದಿಸಿದ್ದಾರೆ. ಹಾಗಿದ್ದೂ ತನಗಿರುವುದು ಕೇವಲ ಮೂರು ಕೋಟಿಯ ಆಸ್ತಿ ಮಾತ್ರ ಎಂದು ಚುನಾವಣಾ ಆಯೋಗಕ್ಕೆ ಲೆಕ್ಕ ಕೊಡುತ್ತಾರೆ. ಈ ಬಾರಿ ಗೆದ್ದರೆ ವಿಜಯಶಂಕರ್ ಹ್ಯಾಟ್ರಿಕ್ ಬಾರಿಸಿದಂತಾಗುತ್ತಿತ್ತು. ದುರಾದೃಷ್ಟವಶಾತ್ ಅವರದೇ ಕುರುಬರ ಜಾತಿಯ ವಿಶ್ವನಾಥ್ ಅವರ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿ!


ಹದಿನಾರೂವರೆ ಲಕ್ಷದಷ್ಟಿರುವ ಮತದಾರರ ಪೈಕಿ ಮೂರೂವರೆ ಲಕ್ಷದಷ್ಟಿರುವ ಒಕ್ಕಲಿಗರು, ಎರಡೂಕಾಲು ಲಕ್ಷದಷ್ಟಿರುವ ದಲಿತರು, ಎರಡು ಲಕ್ಷದಷ್ಟಿರುವ ಮುಸ್ಲಿಮರು ಮತ್ತು ಒಂದೂವರೆ ಲಕ್ಷದಷ್ಟಿರುವ ಲಿಂಗಾಯತರೇ ಇಲ್ಲಿನ ಪ್ರಮುಖ ಜಾತಿಗಳು. ಕುರುಬರೇ ಒಂದೂವರೆ ಲಕ್ಷದಷ್ಟಿದ್ದಾರೆ. ಒಂದು ಲಕ್ಷದಷ್ಟಿರುವ ಬ್ರಾಹ್ಮಣರು ಮತ್ತು 75 ಸಾವಿರದಷ್ಟು ನಾಯಕರೂ ಪ್ರಮುಖ ಪಾತ್ರ ವಹಿಸುತ್ತಾರೆ.

ಬಜೆಪಿಯ ನಾಲ್ವರು ಮತ್ತು ಕಾಂಗ್ರೆಸ್ಸಿನ ನಾಲ್ವರು ಶಾಸಕರಿದ್ದು ಜೆಡಿಎಸ್‌ಗೆ ಬೆಂಬಲವಿಲ್ಲವೆಂದಲ್ಲ, ಜೆಡಿಎಸ್ ಅಭ್ಯರ್ಥಿ ಜೀವಿಜಯ ಗೆದ್ದೇ ಗೆಲ್ಲುತ್ತಾರೆಂದು ಪ್ರತಿನಿತ್ಯ 'ಕನ್ನಡ ಪ್ರಭ' ವಿಶೇಷ ವರದಿ ಮಾಡುತ್ತಲೇ ಇದೆ. ಆದರೆ ಹಕೀಕತ್ತೇ ಬೇರೆಯಿದೆ. ಜಿ.ಟಿ. ದೇವೇಗೌಡ, ರಾಜಶೇಖರಮೂರ್ತಿ, ಸಿದ್ದರಾಮಯ್ಯನವರಂಥ ಅತಿರಥ ಮಹಾರಥರಿದ್ದಾಗಲೇ ಇಲ್ಲಿ ಜೆಡಿಎಸ್ ಗೆಲ್ಲಲಾಗಲಿಲ್ಲ, ಇನ್ನು ಈ ಸ್ಥಿತಿಯಲ್ಲಿ ಒಂದೇ ಒಂದು ಜೆಡಿಎಸ್ ಎಮ್ಮೆಲ್ಲೆಗಳಿಲ್ಲದಿದ್ದಾಗಲೂ ಹೇಗೆ ಜೀವಿಜಯ ಗೆಲ್ಲಲು ಸಾಧ್ಯ?

ವೀರಾಜಪೇಟೆಯ ಅಪ್ಪಚ್ಚು ರಂಜನ್, ಮಡಿಕೇರಿಯ ಬೋಪಯ್ಯ ಚಾಮರಾಜದ ಶಂಕರಲಿಂಗೇಗೌಡ ಮತ್ತು ಕೃಷ್ಣರಾಜ ಕ್ಷೇತ್ರದ ರಾಮದಾಸ್‌ರಂಥ ಬಜೆಪಿ ಶಾಸಕರು ಕೈಜೋಡಿಸಿಬಿಟ್ಟರೆ ತಾನು ಗೆದ್ದೇ ಗೆಲ್ಲುತ್ತೇನೆಂದು ವಿಜಯ್‌ಶಂಕರ್ ಡೈಲಾಗ್ ಹೊಡೆಯುತ್ತಾರೆ. ಆದರೆ ಪಿರಿಯಾಪಟ್ಟಣದ ವೆಂಕಟೇಶ್, ಹುಣಸೂರಿನ ಮಂಜುನಾಥ್, ಚಾಮುಂಡೇಶ್ವರಿಯ ಸತ್ಯನಾರಾಯಣ ಮತ್ತು ನರಸಿಂಹರಾಜದ ತನ್ವೀರ್ ಸೇಠ್‌ರಂಥ ಕಾಂಗ್ರೆಸ್ ಎಮ್ಮೆಲ್ಲೆಗಳಿಗೂ ಇದು ಪ್ರತಿಷ್ಠೆಯ ಪ್ರಶ್ನೆಯೆ. ಮೇಲುನೋಟಕ್ಕೆ ಕಾಂಗ್ರೆಸ್-ಬಜೆಪಿಗಳೆರಡೂ ಸಮಕ್ಕಿವೆ. ವಿಶ್ವನಾಥ್

ಉಡುಪಿ-ಚಿಕ್ಕಮಗಳೂರು: 'ಕೈ' ಹಿಡಿಯಲಿರುವ ಕಾಫಿ ಬೆಳೆಗಾರರು

ರಾಜ್ಯದಲ್ಲಿ 24 ಕ್ಷೇತ್ರಗಳನ್ನು ಗೆಲ್ಲುವುದಾಗಿ ಬಜೆಪಿ ನಾಯಕರು ಬಡಬಡಾಯಿಸುತ್ತಿದ್ದಾರೆ. ಆದರೆ ಪಕ್ಷದ ರಾಜ್ಯಾಧ್ಯಕ್ಷ ಸದಾನಂದ ಗೌಡ ಗೆಲ್ಲುವುದೇ ಕಷ್ಟ ಎಂಬಂತಹ ಪರಿಸ್ಥಿತಿ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಉದ್ಭವಿಸಿದೆ. ತಮ್ಮ ಮೂಲ ಊರಾದ ಪುತ್ತೂರಿನಲ್ಲಿ ಥರ್ಡ್ ಕ್ಲಾಸ್ ರಾಜಕೀಯ ಮಾಡಿ, ತಮ್ಮ ರಾಜಕೀಯ ಗುರು ಉರಿಮಜಲು ರಾಮಭಟ್ಟರಿಂದ ಬಾಯಿಗೆ ಬಂದಹಾಗೆ ಬೈಸಿಕೊಂಡು, ಅವರ ಸಿಟ್ಟಿಗೆ ಹೆದರಿ ಚಿಕ್ಕಮಗಳೂರು-ಉಡುಪಿ ಲೋಕಸಭಾ ಕ್ಷೇತ್ರಕ್ಕೆ ವಲಸೆ ಬಂದ ಹಲ್ಮುಖಿ ಸದಾನಂದ ಗೌಡ ಈಗ ಘಟ್ಟದ ಮೇಲೆ ಮತ್ತು ಕೆಳಗೆ ಎರಡೂ ಕಡೆ ಬೆವರು ಹರಿಸುತ್ತಿದ್ದಾರೆ. ಆದರೂ ಗೆಲ್ಲುವ ಲಕ್ಷಣಗಳು ಕಾಣುತ್ತಿಲ್ಲ.



ಸದಾನಂದಗೌಡ

ಹಲ್ಮುಖಿ ಗೌಡರಿಗೆ ಸವಾಲೊಡ್ಡಲು ಕಾಂಗ್ರೆಸ್ ಕಣಕ್ಕಿಳಿಸಿರುವ ಸಜ್ಜನ ಜಯಪ್ರಕಾಶ್ ಹೆಗ್ಡೆ ದಿನದಿಂದ ದಿನಕ್ಕೆ ಜಯದತ್ತ ಹೆಜ್ಜೆ ಇಡುತ್ತಿದ್ದಾರೆ. ಘಟ್ಟದ ಕೆಳಗಿನ ನಾಲ್ಕು ಕ್ಷೇತ್ರಗಳಲ್ಲಿ ಅವರಿಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. "ಏನೇ ಆದರೂ ಸದಾನಂದ ಗೌಡ ರಾಜಕೀಯ ಮಾಡಲು ಇಲ್ಲಿಗೆ ವಲಸೆ ಬಂದವರು. ಜಯಪ್ರಕಾಶ್ ಹೆಗ್ಡೆ ನಮ್ಮ ಕ್ಷೇತ್ರದವರೇ" ಎಂದು ಮತದಾರರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. "ಹೊರಗಿನಿಂದ ಬಂದವರನ್ನು ಒದ್ದೋಡಿಸೋಣ, ನಮ್ಮವರ ಬೆಂಬಲಕ್ಕೆ ನಿಲ್ಲೋಣ" ಎಂಬ ಕೂಗು ಕೂಡ ಕ್ಷೇತ್ರದಾದ್ಯಂತ ಕೇಳಿಬರುತ್ತಿದೆ.

ಚಿಕ್ಕಮಗಳೂರು ಜಿಲ್ಲೆಯ ಎಲ್ಲ ಏಳು ವಿಧಾನ ಸಭಾ ಕ್ಷೇತ್ರಗಳಲ್ಲಿ ಬಜೆಪಿ ಗದ್ದುಗೆಯಾದರೂ ಆ ಪಕ್ಷದಲ್ಲಿ ಇವತ್ತು ಒಗ್ಗಟ್ಟಿನ ಕೊರತೆ ಎದ್ದು ಕಾಣುತ್ತಿದೆ. ಹಿಂದಿನ ಬಾರಿ . ಕಾಂಗ್ರೆಸ್‌ಗೆ ಪರ್ಯಾಯವಾಗಿ ಜನತೆ ಬಜೆಪಿಯನ್ನು ಗೆಲ್ಲಿಸಿದ್ದರಾದರೂ, ಇಲ್ಲಿ ಪಕ್ಷಕ್ಕೆ ಬಲವಾದ ನೆಲೆಗಟ್ಟಿಲ್ಲ, ಮತ ಬ್ಯಾಂಕ್ ಅಂತೂ ಇಲ್ಲವೇ ಇಲ್ಲ, ಇನ್ನು ಉಡುಪಿ ಜಿಲ್ಲೆಯಲ್ಲಿ 2004 ಮತ್ತು 1998ರಲ್ಲಿ ಬಜೆಪಿಯಿಂದ ಗೆದ್ದು ಸಂಸದರಾಗಿದ್ದ ಮನೋರಮಾ ಮಧ್ವರಾಜ್ ಮತ್ತು ಐ.ಎಂ. ಜಯರಾಮ್ ಶೆಟ್ಟಿ ಈಗ ಆ ಪಕ್ಷದಲ್ಲಿಲ್ಲ, ಅವರು ಕಾಂಗ್ರೆಸ್ ಸೇರಿ ಜಯಪ್ರಕಾಶ್ ಹೆಗ್ಡೆಯವರ ಗೆಲುವಿಗೆ ಹಗಲಿರುಳು ಶ್ರಮಿಸುತ್ತಿದ್ದಾರೆ.


ಘಟ್ಟದ ಕೆಳಗಿನ ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳದಲ್ಲಿ ವಿಧಾನಸಭಾ ಕ್ಷೇತ್ರಗಳಲ್ಲಿ ಜಯಪ್ರಕಾಶ್ ಹೆಗ್ಡೆ ಅವರಿಗೆ ಮುನ್ನಡೆ ಖಚಿತ ಎಂಬುದು ಈಗಾಗಲೇ ಮನದಟ್ಟಾಗಿದೆ. ಕೆಲಸಗಾರ, ಸಜ್ಜನ, ಸ್ನೇಹಜೀವಿ ಹೆಗ್ಡೆಯವರನ್ನೇ ಗೆಲ್ಲಿಸಬೇಕು ಎಂದು ಮತದಾರರು ತೀರ್ಮಾನಿಸಿರುವುದು ಮೇಲ್ನೋಟಕ್ಕೇ ಕಂಡುಬರುತ್ತಿದೆ. ಪಕ್ಷಾತೀತವಾಗಿ ಮತದಾರರು ಈ ನಿರ್ಧಾರಕ್ಕೆ ಬಂದಿರುವುದು ಬಜೆಪಿ ನಾಯಕರ ನಿದ್ರೆಗೆಡಿಸಿದೆ. ಹೀಗಾಗಿ ಅವರೆಲ್ಲಾ ಸದಾನಂದ ಗೌಡರು ಬಂದಾಗ ನಗುಮುಖದೊಂದಿಗೆ ಸ್ವಾಗತಿಸಿ, ಅವರ ಅತ್ತ ಹೋದನಂತರ ಕೈಕಟ್ಟಿ ಕೂರುತ್ತಿದ್ದಾರೆ. ಮುಖ್ಯವಾಗಿ ಬಂಟರು, ಬಿಲ್ಲವರು ಮತ್ತು ಇತರ ಸಣ್ಣ-ಪುಟ್ಟ ಜಾತಿಯವರು ಹೆಗ್ಡೆಯವರ ಬೆಂಬಲಕ್ಕೆ ನಿಂತಿದ್ದಾರೆ.

ಶೃಂಗೇರಿ ಕ್ಷೇತ್ರದ ಡಿ.ಬಿ. ಚಂದ್ರೇಗೌಡರನ್ನು ಬಜೆಪಿ ಕೊಂಡುಕೊಂಡಿದ್ದು, ತರಿಕೆರೆ ಕ್ಷೇತ್ರದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯನ್ನು ಅವೈಜ್ಞಾನಿಕವಾಗಿ ಜಾರಿಗೆ ತರಲು ಮುಂದಾಗಿದ್ದು, ಚಿಕ್ಕಮಗಳೂರು ಕ್ಷೇತ್ರದಲ್ಲಿ ಶಾಸಕ ಸಿ.ಟಿ.ರವಿಯ ಭ್ರಷ್ಟಾಚಾರ ಮತ್ತು ಮೂಡಿಗೆರೆಯಲ್ಲಿ ಶಾಸಕ ಕುಮಾರಸ್ವಾಮಿಯ ನಿಷ್ಕ್ರಿಯತೆಯಿಂದಾಗಿ ಅಲ್ಲಿ ಬಜೆಪಿಗೆ ಸುಬತ್ ಹೊಡೆತ ಬೀಳಲಿದೆ. ಇದು ಹಲ್ಮುಖಿ ಗೌಡರ ಅರಿವಿಗೆ ಬಂದಿದ್ದರಿಂದಲೋ ಏನೋ ಅವರು ಇನ್ನಿಲ್ಲದಂತೆ ಹಣ ಹರಿಸುತ್ತಿದ್ದಾರೆ. ಇದುವರೆಗೆ ನೀರನ್ನಷ್ಟೇ ಈ ಪ್ರಮಾಣದಲ್ಲಿ ನೋಡಿದ್ದ ಇಲ್ಲಿನ ಜನ ಇಷ್ಟೊಂದು ದುಡ್ಡು ಹರಿಯುವುದನ್ನು ನೋಡಿ ಬೆಚ್ಚಿ ಬಿದ್ದಿದ್ದಾರೆ. ಇದು ಬಜೆಪಿ ಬಗ್ಗೆ ಜನರಲ್ಲಿ ಅಸಹ್ಯವನ್ನೂ ಮೂಡಿಸಿದೆ.



ಪ್ರಾಬಲ್ಯ ಹೊಂದಿರದ ಜಾತಿಗಳು

ಚಿಕ್ಕಮಗಳೂರು-ಉಡುಪಿ ಕ್ಷೇತ್ರದ ವಿಶೇಷವೆಂದರೆ ಯಾವುದೇ ಜಾತಿಯೂ ಇಲ್ಲಿ ಪ್ರಾಬಲ್ಯ ಹೊಂದಿಲ್ಲದಿರುವುದು. ಅಂದರೆ ಎಲ್ಲ ಜಾತಿಗಳ ಮತಗಳೂ ಇಲ್ಲಿ ನಿರ್ಣಾಯಕವೇ. ಹೀಗಾಗಿ ಜಾತಿಗಳ ಲೆಕ್ಕಾಚಾರ ಯಾಕ ಕೈಗೂ ಎಟಕುತ್ತಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಬಿಲ್ಲವರು, ಒಕ್ಕಲಿಗರು, ಬಂಟರು ಮತ್ತು ಮುಸ್ಲಿಮರ ಸಂಖ್ಯೆ ಲಕ್ಷಕ್ಕಿಂತ ಹೆಚ್ಚಿದ್ದರೆ, ಬ್ರಾಹ್ಮಣರು, ಲಿಂಗಾಯತರು ಸರಿಸುಮಾರು ತಲಾ ಒಂದೊಂದು ಲಕ್ಷದಷ್ಟಿದ್ದಾರೆ. ಇನ್ನು ಮೊಗವೀರರು, ಕುರುಬರು ಮತ್ತು ಕ್ರಿಶ್ಚಿಯನ್ನರು ಸುಮಾರು ಅರ್ಧ ಲಕ್ಷಕ್ಕಿಂತ ಹೆಚ್ಚಿದ್ದು, ಈ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ.


ಜಯಪ್ರಕಾಶ್

ಹಿಂದುಳಿದ ಜಾತಿಯ ಮತಗಳೊಂದಿಗೆ ಬಂಟರ, ಮುಸ್ಲಿಮರ, ಬಿಲ್ಲವರ ಹೆಚ್ಚಿನ ಮತಗಳು ಕಾಂಗ್ರೆಸ್‌ಗೆ ಗ್ಯಾರಂಟಿ. ಒಕ್ಕಲಿಗರ ಮತಗಳು ಜಾತಿ ಕಾರಣಕ್ಕೆ ಬಜೆಪಿ ಪಾಲಾಗುತ್ತವೆ ಎನಿಸಿದರೂ, ಘಟ್ಟದ ಮೇಲಿನ ಮತ್ತು ಕೆಳಗಿನ ಒಕ್ಕಲಿಗರ ನಡುವೆ ಡಿಫರೆನ್ಸ್ ಇರುವುದರಿಂದ ಈ ಜಾತಿ ಲೆಕ್ಕಾಚಾರ ವರ್ಕ್‌ಔಟ್ ಆಗುವಂತೆ ಕಾಣುತ್ತಿಲ್ಲ, ಬ್ರಾಹ್ಮಣರ ಮತಗಳು ಬಜೆಪಿ ಪಾಲಾದರೂ, ಮೊಗವೀರರ ಮತ್ತು ಕ್ರೈಸ್ತರ ಮತಗಳು 'ಕೈ'ಗೆ ಗ್ಯಾರಂಟಿ.

ಬಾಬಾಬುಡನ್‌ಗಿರಿ ವಿವಾದದ ಮೂಲಕ ಜಿಲ್ಲೆಯ ಶೂದ್ರ ಯುವಕರನ್ನು ಆಕರ್ಷಿಸುವಲ್ಲಿ ಬಜೆಪಿ ಒಂದಿಷ್ಟು ಯಶಸ್ವಿಯಾಗಿತ್ತು. ಈಗ ಈ ಶೂದ್ರ ಯುವಕರಿಗೇ ದುಡ್ಡು ಕೊಟ್ಟು, ಅಬ್ಬರದ ಪ್ರಚಾರ ನಡೆಸಲಾಗುತ್ತಿದೆ. ಆದರೆ ಇದೇ ಹೊತ್ತಿಗೆ ಬಜೆಪಿಯ ಕೀಳು ರಾಜಕೀಯ ದಾಟದಲ್ಲಿ ಸಿಲುಕಿ ಕಷ್ಟಗಳನ್ನು ಅನುಭವಿಸುತ್ತಿರುವ ಬಜರಂಗದಳದ ಶೂದ್ರನಾಯಕರು ಈಗ ಬಜೆಪಿಯಿಂದ ದೂರವಾಗುತ್ತಿದ್ದಾರೆ. ಇದಕ್ಕೆ ಉದಾಹರಣೆ ಎಂದರೆ ಮಹೇಂದ್ರ ಕುಮಾರ್ ಅಂಡ್ ಗ್ಯಾಂಗ್. ಬಜೆಪಿಗಾಗಿ ಇಲ್ಲದ ಗಲಾಟೆ ಮಾಡಿ, ಪೊಲೀಸ್ ಠಾಣೆ, ಕೋರ್ಟು ಇತ್ಯಾದಿ ಅಲೆಯುತ್ತಿರುವ ಮಹೇಂದ್ರ ಕುಮಾರ್‌ನಂತಹ ಬಹುತೇಕ ಬಜರಂಗದಳದ ಶೂದ್ರ ಕಾರ್ಯಕರ್ತರಿಗೆ ಈಗ ಜ್ಞಾನೋದಯವಾದಂತಾಗಿದೆ. ಹೀಗಾಗಿ ಅವರೆಲ್ಲಾ ನಿಷ್ಕ್ರಿಯರಾಗಿ ಮನೆ ಸೇರಿದ್ದಾರೆ.

ಕಾಫಿ ಬೆಳೆಗಾರರಿಗೆ ಕಾಂಗ್ರೆಸ್ ಬೇಕು!

ಚಿಕ್ಕಮಗಳೂರು ಜಿಲ್ಲೆಯ ಕಾಫಿ ಎಸ್ಟೇಟ್ ಮಾಲೀಕರು ಸ್ವತಃ ರಾಜಕಾರಣಿಗಳು ಮಾತ್ರವಲ್ಲ, ಅವರೇ ಜಿಲ್ಲೆಯ ರಾಜಕಾರಣವನ್ನು ನಿಯಂತ್ರಿಸುತ್ತ ಬಂದಿದ್ದಾರೆ. ಈ ಹಿಂದಿನ ಎರಡು ಚುನಾವಣೆಗಳಲ್ಲಿ ಬಜೆಪಿಯತ್ತ ವಾಲಿದ್ದ ಕಾಫಿ ಬೆಳೆಗಾರರು ಈಗ ಕಾಂಗ್ರೆಸ್ ಜಪ ಆರಂಭಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣ ಯುಪಿಎ ಸರ್ಕಾರ ಕಾಫಿ ಬೆಳೆಗಾರರಿಗೆ ಪ್ಯಾಕೇಜ್ ಜಾರಿಗೆ ತರಲು ನಿರ್ಧರಿಸಿದ್ದು.

ಕಾಫಿ ಬೆಳೆಗಾರರ ಸಮಸ್ಯೆಯನ್ನೇ ಮುಂದಿಟ್ಟುಕೊಂಡು ಕಾಫಿ ಬೆಳೆಗಾರರ ಪ್ರದೇಶದಲ್ಲಿ ರಾಜಕೀಯ ಮಾಡಿದ್ದ ಬಜೆಪಿ ಎನ್‌ಡಿಎ ಸರ್ಕಾರವಿದ್ದಾಗ ಹೆಚ್ಚೇನೂ ಕಡಿದಿರಲಿಲ್ಲ, ಮೊದಲಿಗೆ ಯುಪಿಎ ಕೂಡ ಈ ಬೆಳೆಗಾರರ ಸಮಸ್ಯೆಯನ್ನು ನಿರ್ಲಕ್ಷಿಸಿತ್ತು, ಆದರೆ ಕಾಫಿ ಬೆಳೆಗಾರರ ನಿರಂತರ ಲಾಬಿಯಿಂದಾಗಿ ಎಚ್ಚೆತ್ತು ಕೊನೆಗೂ ಕಾಫಿ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ಪ್ರಕಟಿಸಿತ್ತು. ಈ ಪ್ಯಾಕೇಜ್ ಇನ್ನೇನು ಜಾರಿಯಾಗಬೇಕೆಂಬ ಹೊತ್ತಿನಲ್ಲಿ, ಚುನಾವಣೆ ಘೋಷಣೆಯಾಗಿದ್ದು, ಬೆಳೆಗಾರರನ್ನು ಇದು ತಲುಪಿಲ್ಲ ಅಷ್ಟೆ.

ಸಾಲಮನ್ನಾ, ಕನಿಷ್ಠ ಬೆಲೆ, ಹೆಚ್ಚುವರಿ ಸಾಲ ಮತ್ತಿತರ ಅಂಶಗಳನ್ನೊಳಗೊಂಡ ಈ ಪ್ಯಾಕೇಜ್ ಜಾರಿಯಾಗಬೇಕಾದರೆ ಮತ್ತೆ ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರಕ್ಕೆ ಬರಬೇಕು. ಅದಕ್ಕೆ ಕಾಂಗ್ರೆಸ್ ಬೆಂಬಲಿಸಿ ಎಂದು ಕಾಫಿ ಎಸ್ಟೇಟ್ ಮಾಲೀಕರು ಬಹಿರಂಗವಾಗಿಯೇ ಪ್ರಚಾರ ಆರಂಭಿಸಿದ್ದಾರೆ. ಬಹುತೇಕ ಒಕ್ಕಲಿಗರು ಕಾಫಿ ಬೆಳೆಗಾರರಾಗಿದ್ದು ಅವರ ಈ ನಿರ್ಧಾರ ಬಜೆಪಿಗೆ ಸೋಲಿನ

ಪುಸ್ತಕ ಬರೆದೋ ಡೈಲಾಗ್ ಹೊಡೆದೋ ಏನೇ ವಿವಾದ ಸೃಷ್ಟಿಸಿದರೂ ವಿಜಯ್‌ಶಂಕರ್‌ರಂತೆ ವೈಟ್ ಕಾಲರ್ ಅಲ್ಲ. ಜನರ ಮಧ್ಯೆ ನಿಂತು ಕೆಲಸ ಮಾಡುವ ಮನುಷ್ಯ. ಲೋಕಸಭೆಯಲ್ಲಿ ಕೂಡ ಸುಮ್ಮನೇ ಕೂರುವ ಆಸಾಮಿಯಲ್ಲ. ಕುರುಬರ ವಿಷಯಕ್ಕೆ ಬಂದರೆ ವಿಜಯ್‌ಶಂಕರ್‌ಗಿಂತ ಹತ್ತು ಪಟ್ಟು ಪ್ರಯೋಜನಕಾರಿ.

ಇದು ಮೈಸೂರಿನ ಕುರುಬರಿಗೂ ಚೆನ್ನಾಗಿ ಗೊತ್ತಿದೆ. ಶೇ. 90 ರಷ್ಟು ಕುರುಬರೆಲ್ಲ ವಿಶ್ವನಾಥ್‌ರನ್ನೇ ಬೆಂಬಲಿಸುತ್ತಿದ್ದಾರೆ. ಬಿಜೆಪಿಯ ಓಟ್‌ಬ್ಯಾಂಕ್ ಹೊರತಾಗಿ ವಿಜಯ್‌ಶಂಕರ್ ಪಾಲಿಗೆ ಯಾವುದೇ ಹೆಗ್ಗಳಿಕೆಯಾಗಲಿ, ವಿಶೇಷ ಒಲವಾಗಲಿ ಕಂಡುಬರುತ್ತಿಲ್ಲ. ಆದರೆ ಜೆಡಿಎಸ್‌ನ ಜೇವಿಜಯ ಸುಮ್ಮನೇ ಕೂತಿಲ್ಲ. ಕಾಂಗ್ರೆಸ್ ಪಾಲಿನ ಸೆಕ್ಯೂಲರ್ ಮತಬುಟ್ಟಿಗೆ ಕೈಹಾಕಿದ್ದಾರೆ. ದೇವೇಗೌಡರ ಮುಖ ನೋಡಿಯಾದರೂ ಒಂದಷ್ಟು ಒಕ್ಕಲಿಗರ ಮತಗಳು ಜೇವಿಜಯರಿಗೆ ಬಂದರೆ ಅದು ವಿಶ್ವನಾಥ್ ದಾರಿಗೆ ತೊಡಕಾಗುತ್ತದೆ. ಲಿಂಗಾಯತರ ಹೊರತಾಗಿ ಜೇವಿಜಯ ಗಿಟ್ಟಿಸುವ ಪ್ರತಿ ಓಟೂ ಕಾಂಗ್ರೆಸ್ಸಿನ ವಿಶ್ವನಾಥ್ ಪಾಲಿನ ಓಟೇ.

ಇಲ್ಲಿ ಜೇವಿಜಯ ಎಷ್ಟು ಓಟು ಸೆಳೆಯುತ್ತಾರೆಂಬುದರ ಮೇಲೆ ವಿಶ್ವನಾಥ್ ಗೆಲುವು ನಿರ್ಧಾರವಾಗುತ್ತದೆ. ಸಿದ್ದರಾಮಯ್ಯ ಬೇರೆ ಕಾಂಗ್ರೆಸ್ ಸಾರಥ್ಯ ವಹಿಸಿದ್ದು ವಿಶ್ವನಾಥ್ ಪಾಲಿಗೆ ದೊಡ್ಡ ಲಾಭವಾಗಲಿದೆ. ವಿಶ್ವನಾಥ್ ಮಟ್ಟಿಗೆ ಇನ್ನೂ ಒಂದು ಅನುಕೂಲವೆಂದರೆ ವಿಜಯ್ ಶಂಕರ್ ವಿರುದ್ಧ ಬಿಜೆಪಿ ಕಾರ್ಯಕರ್ತರಿಗಿರುವ ಅಸಹನೆ. ಯಾರಿಗೂ ನಯಾಪೈಸೆ ಬಿಚ್ಚದೆ, ಯಾರನ್ನೂ ವಿಶ್ವಾಸದಿಂದ ನೋಡದೆ, ಲೋಕಸಭೆಯಲ್ಲಿ ಬಾಯಿಬಿಚ್ಚದೆ ಯಾರಿಗೂ ನೆರವಾಗದೇ ಸಭ್ಯನ ಸೋಗು ಹಾಕುವ ವಿಜಯ್‌ಶಂಕರ್‌ಗಿಂತ ಒಳಿತೋ ಕೆಡಕೋ ಜನರ ನಡುವೆಯೇ ಇರುವ ವಿಶ್ವನಾಥ್ ಮೈಸೂರಿನ ಜನಕ್ಕೆ ಹೆಚ್ಚು ಅನುಕೂಲಕಾರಿಯಾಗಿ ಕಾಣುತ್ತಿದ್ದಾರೆ. ■

ಭಯ ಮೂಡಿಸಿದೆ. ಈಗಿನಂತೆಯೇ ಕಾಫಿ ಬೆಳೆಗಾರರು ಮತ್ತು ಕಾರ್ಮಿಕರು ಕಾಂಗ್ರೆಸ್ ಪರ ನಿಂತಲ್ಲಿ ಕ್ಷೇತ್ರದಲ್ಲಿ ಹೊಸ ರಾಜಕೀಯ ಶಕೆ ಆರಂಭಗೊಳ್ಳಲಿದೆ.

ಕಾಂಗ್ರೆಸ್ ಮತಕ್ಕೆ ಸಿಪಿಐ ಕನ್ನ

ಇತ್ತ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತೆ ಪ್ರಾಬಲ್ಯ ಹೊಂದಲು ಕಷ್ಟಪಡುತ್ತಿದ್ದರೆ, ಅತ್ತ ಸಿಪಿಐ ಕಾಂಗ್ರೆಸ್ ಮತಗಳಿಗೆ ಕನ್ನಹಾಕಲು ಆರಂಭಿಸಿದೆ. ತೃತೀಯ ರಂಗದ ಅಭ್ಯರ್ಥಿಯಾಗಿ ರಾಧಾ ಸುಂದರೇಶ್ ಕಣಕ್ಕಿಳಿದಿದ್ದು, ಘಟ್ಟದ ಮೇಲೆ ಬಿರುಸಿನ ಪ್ರಚಾರ ನಡೆಸಿದ್ದಾರೆ. 1996ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ರಾಧಾ ಸುಂದರೇಶ್ 76 ಸಾವಿರ ಮತಗಳನ್ನು ಪಡೆದಿದ್ದರು. ಈ ಬಾರಿ ಜೆಡಿಎಸ್ ಕೂಡ ಅವರಿಗೆ ಬೆಂಬಲ ನೀಡುತ್ತಿರುವುದರಿಂದ ಜಾತ್ಯತೀತ ಮತಗಳು ಹಂಚಿಹೋಗಲಿವೆ ಎಂದು ಹೇಳಲಾಗುತ್ತಿದೆ.

ಆದರೆ ಜೆಡಿಎಸ್ ನಾಯಕರು ಜಾತ್ಯತೀತ ಮತಗಳು ಹಂಚಿಹೋಗದಂತೆ ನೋಡಿಕೊಳ್ಳುವುದಾಗಿ ಕಾಂಗ್ರೆಸ್ ನಾಯಕರಿಗೆ ಒಳಗಿಂದೊಳಗೇ ಭರವಸೆ ನೀಡುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಇಲ್ಲಿ ಮತ್ತೆ ಬಿಜೆಪಿ ಗೆದ್ದರೆ ಮುಂದೆ ರಾಜಕೀಯ ಮಾಡುವುದು ಕಷ್ಟ ಎಂದು ಅರಿತಿರುವ ಜಾತ್ಯತೀತ ಜನತಾ ದಳದ ನಾಯಕರು ಕಾಂಗ್ರೆಸ್‌ಗೆ ಮತ ನೀಡುವಂತೆ ಒಳಗೊಳಗೇ ಸೂಚನೆ ನೀಡುತ್ತಿದ್ದಾರೆ. ಹೀಗಾಗಿ ಜೆಡಿಎಸ್‌ನ ಶೇ. 80ರಷ್ಟು ಮತಗಳು ಕಾಂಗ್ರೆಸ್ ಪಾಲಾಗಲಿದೆ ಎಂದು ಹೇಳಲಾಗುತ್ತಿದೆ.

ಹಲ್ಲುಬಿ ಗೌಡರ ದುಡ್ಡಿನ ಮತ್ತು ಕೋಮುವಾದಿ ರಾಜಕಾರಣದ ಮುಂದೆ ಸಜ್ಜನ ಜಯಪ್ರಕಾಶ್ ಹೆಗ್ಡೆ ಗೆಲ್ಲಬೇಕಿದೆ. ಕಾಂಗ್ರೆಸ್ ನಾಯಕರಾದ ಬಿ.ಎಲ್.ಶಂಕರ್, ತಾರಾದೇವಿ, ಮೋಟಮ್ಮ, ಲಿಂಗಯ್ಯ, ಸಗೀರ್ ಅಹ್ಮದ್, ಮನೋರಮಾ ಮಧ್ವರಾಜ್, ಜಯಪ್ರಕಾಶ್ ಶೆಟ್ಟಿ ಮತ್ತಿತರರು ಜೊತೆಗೂಡಿ ಇವರ ಗೆಲುವಿಗೆ ಯತ್ನಿಸುತ್ತಿದ್ದಾರೆ.


ಆದರೆ ಬಿಜೆಪಿಯಲ್ಲಿ ಸಿ.ಟಿ. ರವಿ ವಿರುದ್ಧ ಸಿಡಿದೆದ್ದಿರುವ ಲೋಕೇಶ್ ಮತ್ತು ಶಾಸಕ ಕುಮಾರಸ್ವಾಮಿ, ಜೀವರಾಜ್ ವಿರುದ್ಧ ಅಸಮಾಧಾನ ಹೊಂದಿರುವ ಅರಗ ಜ್ಞಾನೇಂದ್ರ, ಮಹೇಂದ್ರ ಕುಮಾರ್ ಮತ್ತಿತರರು, ಸಚಿವ ವಿ.ಎಸ್. ಆಚಾರ್ಯರನ್ನು ಎದುರಿಗೇ ಆಡಿಕೊಳ್ಳುತ್ತಿರುವ ಘಟ್ಟದ ಕೆಳಗಿನ ಬಿಜೆಪಿ ನಾಯಕರು ಇವರೆಲ್ಲರೂ ಸೇರಿ ಹಲ್ಲುಬಿ ಗೌಡರನ್ನು ಸೋಲಿಸಿ ಆ ಸೋಲನ್ನು ಯಾರ ತಲೆಗೆ ಕಟ್ಟಬೇಕೆಂದು ಲೆಕ್ಕಹಾಕುತ್ತಿದ್ದಾರೆ.

● ವರದಿಗಾರ

ಮಂಡ್ಯ: ಅಂಬಿ ಓಟಕ್ಕೆ ಚೆಲುವೆ ಅಡ್ಡಗಾಲು?




ಒಂದೇ ಸಮನೆ ನಡೆಯುತ್ತಿರುವ ಪಕ್ಷಾಂತರಗಳು, ಕಾಂಗ್ರೆಸ್ಸಿಗರ ಒಳೇಟಿನ ನಡುವೆಯೂ ರೇಸಿನಲ್ಲಿ ಮುಂದುಮುಂದಕ್ಕೆ ದಾಟುತ್ತಿರುವ ಅಂಬರೀಷ್, ಡಲ್ ಆಗಿರುವ ಬಿಜೆಪಿಯ ಶಿವರಾಮೇಗೌಡ, ಸಂಪೂರ್ಣ ಕಣಕ್ಕಿಳಿದಿರುವ ಜೆಡಿಎಸ್ ಎಂಎಲ್‌ಎಗಳು ಇವು ಚುನಾವಣೆಯ ದಿನಗಳು ಹತ್ತಿರ ಬರುತ್ತಿದ್ದಂತೆ ಮಂಡ್ಯದ ಗದ್ದೆ ಬಯಲುಗಳಲ್ಲಿ ಕಾಣಬರುತ್ತಿರುವ ಕೆಲವು ಬಿಡಿ ಚಿತ್ರಗಳು.



ಪಕ್ಷಾಂತರದ ಕಾರುಬಾರು

ಬಿಜೆಪಿ ಪಕ್ಷದ ಅಭ್ಯರ್ಥಿಯೇ ಕಡೆಗಳಿಗೆಯಲ್ಲಿ ಪಕ್ಷಾಂತರ ಮಾಡಿದ ವ್ಯಕ್ತಿಯಾಗಿದ್ದರೆ, ಇದರ ಸುತ್ತಮುತ್ತ ಇಬ್ಬರು ಮಾಜಿ ಎಂಎಲ್‌ಎಗಳು, ಒಬ್ಬರು ಮಾಜಿ ಎಂಎಲ್‌ಸಿ ಸಹ ಪಕ್ಷ ಬದಲಾಯಿಸಿದ್ದಾರೆ. ಅಂಬರೀಷರ ಚೇಲಾ ಎಂಬ ಖ್ಯಾತಿಯನ್ನು ಹೊಂದಿರುವ ಕೆರಗೋಡಿನ ಮಾಜಿ ಶಾಸಕ ಎಚ್.ಬಿ.ರಾಮು ಕಾಂಗ್ರೆಸ್ ಬಿಟ್ಟು ದಳಕ್ಕೆ ಜಿಗಿದಿದ್ದರೆ, ಇದೇ ಕ್ಷೇತ್ರದ ಮತ್ತೊಬ್ಬ ಮಾಜಿ ಶಾಸಕ ಜಿ.ಬಿ.ಶಿವಕುಮಾರ್ ದಳದಿಂದ ಬಿಜೆಪಿಗೆ ಹೋಗಿದ್ದಾರೆ. ಇಬ್ಬರೂ ಜನ ಬೆಂಬಲವಿಲ್ಲದ 'ನಾಯಕರೇ' ಆದರೂ ಇದ್ದುದರಲ್ಲಿ ರಾಮು ಇನ್ನೂ ಸಕ್ರಿಯವಾಗಿದ್ದ ವ್ಯಕ್ತಿ. ಹಾಗಾಗಿ ಕೆರಗೋಡಿನ ಮಟ್ಟಿಗೆ ದಳಕ್ಕೆ ಲಾಭ.

ಈ ಮಧ್ಯೆ ಕಾಂಗ್ರೆಸ್ಸಿನಲ್ಲಿ ಪುರಾತನ ಕಾಲದಿಂದ ಬದುಕಿದ್ದ ರಮೇಶರಾಜು ಎಂಬ ಎಸ್.ಎಂ.ಕೃಷ್ಣರ ಬಂಟ ಮತ್ತು ಮಾಜಿ ಎಂಎಲ್‌ಸಿ ಈಗೇಕೋ 'ದಳಕ್ಕೆ ನನ್ನ ಬೆಂಬಲ' ಎನ್ನುತ್ತಿದ್ದಾರೆ. ಈ ರಮೇಶರಾಜು ಎಂಬಾತನ ಕ್ವಾಲಿಫಿಕೇಷನ್ ಏನು, ಈತನ ಹಿಂದೆ ಇರುವ ನಾಲ್ಕು ಜನರಾದರೂ ಯಾರು ಎಂದು ಮಂಡ್ಯದಲ್ಲಿ ಯಾರಿಗೂ ಗೊತ್ತಿಲ್ಲ. ಈತ ತನ್ನ ಅರಕೇಶ್ವರ ಶಿಕ್ಷಣ ಸಂಸ್ಥೆಯ ಮುಂದೆ ಮರದ ಕೆಳಗೆ ಕುರ್ಚಿ ಹಾಕಿಕೊಂಡು ದಿನನಿತ್ಯ ಕೂರುವ ವ್ಯಕ್ತಿ ಎಂದರೆ ಕೆಲವರಿಗೆ 'ಓ ಆವಯ್ಯನಾ' ಎನಿಸಬಹುದು ಅಷ್ಟೆ. ಆದರೆ ಮಂಡ್ಯದ ಚುನಾವಣಾ ಸಂದರ್ಭದಲ್ಲಿ ರಮೇಶರಾಜು ಪಕ್ಷ ಬಿಟ್ಟಿದ್ದೂ ಒಂದು ಸುದ್ದಿ.




ಶಿವರಾಮೇಗೌಡ

ಇದಕ್ಕಿಂತ ಸ್ವಲ್ಪ ದೊಡ್ಡ ಸುದ್ದಿಯಾದದ್ದು ಡಾ.ಸಿ.ಕೆ. ರವಿಶಂಕರ್ ಎಂಬ ಕಲ್ಲು ಎಕ್ಸ್‌ಪರ್ಟ್‌ನದ್ದು. ಈಗ ಭೂಗರ್ಭ ಶಾಸ್ತ್ರದಲ್ಲೇನೂ ಪದವಿ ಪಡೆದಿಲ್ಲ ಆದರೆ ಕಲ್ಲು ಕೊರೆದೇ ದುಡ್ಡು ದುಡಿದ ವ್ಯಕ್ತಿ. ಬಿಜೆಪಿಯಲ್ಲಿ ದುಡ್ಡು ಚೆಲ್ಲುವವರೇ ನಾಯಕರು ಎಂಬಂತಾಗಿರುವುದರಿಂದ ಈತನೂ ಅದನ್ನೇ ನಿಷ್ಠೆಯಿಂದ ಮಾಡಿಕೊಂಡು ಬಂದರು. ಆದರೆ ಈತನಿಗೆ ಎಂಎಲ್‌ಎ ಟಿಕೆಟ್ಟೂ ಇಲ್ಲ, ಕೊನೆಕ್ಷಣದಲ್ಲಿ ಎಂಪಿ ಟಿಕೆಟ್ಟೂ ಇಲ್ಲ ಅಂದರೆ ಹೊಟ್ಟೆ ಉರಿಯುವುದಿಲ್ಲವಾ? ಹಾಗಾಗಿ ಮೊನ್ನೆ ಮಂಡ್ಯಕ್ಕೆ ಬಂದ ಗುಲಾಂ ನಬಿ ಆಜಾದ್‌ರ ಸಮ್ಮುಖದಲ್ಲಿ ಈತ ಕಾಂಗ್ರೆಸ್ ಶಾಲು ಹೊದ್ದುಕೊಂಡ. ಈತನ ಜೊತೆಗೇ ಕಾಂಗ್ರೆಸ್ಸಿಗೆ ಬರುತ್ತಿರುವ ಸಮಾಜವಾದಿ ಪಕ್ಷದ ಜಿಲ್ಲಾಧ್ಯಕ್ಷ, ಹಲವು ಚುನಾವಣೆಗಳಲ್ಲಿ ಸೋತ ಶ್ರೀಮಂತ ಅನುಭವ ಇರುವ ಸಿ.ಎಂ.ದ್ಯಾವಪ್ಪರನ್ನು ಇನ್ನು ಮುಂದೆ 'ಸೆಕ್ಯುಲರ್' ಅನ್ನಲು ಯಾವ ಅಡ್ಡಿಯೂ ಇಲ್ಲ. ಕೆಬ್ಬಳ್ಳಿ ರಾಜು ಎಂಬ ಹಳೇ ರಾಬರಿ ಕೇಸುಗಳ ಪ್ರವೀಣನೂ, ಎಂಎಲ್‌ಎ ಟಿಕೆಟ್ ಆಕಾಂಕ್ಷಿಯೂ ಆದ ವ್ಯಕ್ತಿ ಬಿಜೆಪಿ ಬಿಟ್ಟು ಸೆಕ್ಯುಲರ್ ಆಗಿದ್ದು ಮತ್ತೊಂದು ಸುದ್ದಿ.

ಇದರ ಜೊತೆಗೆ ಹೆಚ್ಚು ಕಡಿಮೆ 200 ಜನ ಸಣ್ಣಪುಟ್ಟ ಲೀಡರ್‌ಗಳು ಪಕ್ಷ ಬದಲಾಯಿಸಿದ್ದಾರೆ. ಆದರೆ ಗಮನಿಸಬೇಕಾದ ಸಂಗತಿಯೆಂದರೆ ಜನತಾದಳದ ಲೀಡರ್‌ಗಳಲ್ಲಿ ಕದಲಿದವರು ಬಹಳ ಕಡಿಮೆ. ಅದರಲ್ಲೂ ಪ್ರತಿ ಹಳ್ಳಿಯಲ್ಲಿನ ದಳಪತಿಗಳು ಇದ್ದಲ್ಲಿಯೇ ಉಳಿದುಕೊಂಡಿದ್ದಾರೆ. ಇದು ಚೆಲುವರಾಯಸ್ವಾಮಿಯ ಬುಡ ಇನ್ನೂ ಭದ್ರ ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಅಂಬರೀಷ್ ಕುದುರೆ ಮುಂದುಮುಂದಕ್ಕೆ

ನಾಮಪತ್ರ ಸಲ್ಲಿಸುವ ಹಿಂದಿನ ದಿನದವರೆಗೂ ರೇಸಿನಲ್ಲೇ ಇಲ್ಲದಿದ್ದ ಅಂಬರೀಷ್ ಎಂಬ ಹಳೇ ಕುದುರೆ, ಈಗ ಒಬ್ಬೊಬ್ಬರನ್ನೇ ಹಿಂದಿಕ್ಕುತ್ತಾ ಸಾಗಿದ್ದಾರೆ. ಆದರೆ ಮೊದಲಿಂದಲೂ ಮುನ್ನಡೆ ಕಾದುಕೊಂಡು ಬಂದಿರುವ ಚೆಲುವರಾಯಸ್ವಾಮಿಯನ್ನು ಇನ್ನೂ ಹಿಂದಿಕ್ಕಲಾಗಿಲ್ಲ. ಈ ಮಧ್ಯೆ ಪುಟ್ಟಣ್ಣಯ್ಯರೆಂಬ ಹಸಿರು ಕುದುರೆಯೂ ಛಲ ಬಿಡದೆ ಓಡುತ್ತಲೇ ಇದೆ. ಇದೆಲ್ಲದರ ನಡುವೆ ಬಿಜೆಪಿಯ ಎಲ್.ಆರ್.ಶಿವರಾಮೇಗೌಡ ನಾಲ್ಕನೇ ಸ್ಥಾನಕ್ಕೆ ದೂಡಲ್ಪಟ್ಟಿದ್ದಾರೆ. ಅಂಬರೀಷ್ ಚೆನ್ನಾಗಿ ಪಿಕಪ್ ಆಗುತ್ತಿರುವುದರಿಂದಲೇ ಎಲ್ಲಾ ಪಕ್ಷಗಳೂ ಅಂಬರೀಷರನ್ನೇ ಟಾರ್ಗೆಟ್ ಮಾಡುತ್ತಾ ಪ್ರಚಾರ ನಡೆಸಿದ್ದಾರೆ.



ಪುಟ್ಟಣ್ಣಯ್ಯ

ಕಳೆದ ಸಂಚಿಕೆಯಲ್ಲಿ ಹೇಳಿದಂತೆ ಕಾಂಗ್ರೆಸ್‌ನ ಬಹುತೇಕ ನಾಯಕರು ಅಂಬರೀಷ್ ವಿರುದ್ಧ ಕೆಲಸ ಮಾಡುತ್ತಿದ್ದಾರೆ. ಆತ್ಮಾನಂದರ ಬೆಂಬಲಿಗ ರಾಜು ಬಿಜೆಪಿ ಪರ ಜೈ ಅನ್ನುತ್ತಿದ್ದರೆ, ಹಳೇ ಮಂಡ್ಯದ ಪುಡಿ ಪುಢಾರಿಗಳೆಲ್ಲಾ ದಳದೊಂದಿಗೆ ಕೈ ಜೋಡಿಸುತ್ತಿದ್ದಾರೆ. ಇಂತಹ ಉದಾಹರಣೆಗಳು ಕ್ಷೇತ್ರದಾದ್ಯಂತ ಇವೆ. ಇಷ್ಟೆಲ್ಲಾ ಇದ್ದರೂ ಅಂಬರೀಷ್ ಸಭೆಗಳಿಗೆ ಸೇರುತ್ತಿರುವ ಜನರ ಸಂಖ್ಯೆ ಮತ್ತು ವ್ಯಕ್ತಪಡಿಸುತ್ತಿರುವ ಅಭಿಮಾನವನ್ನು ನೋಡಿದರೆ ಈ ಸಾರಿಯೂ ಅಂಬರೀಷೇ ಗೆದ್ದು ಬಿಡಬಹುದು ಎನಿಸುತ್ತದೆ. ಇದು ಕಳೆದ ವಾರದಿಂದ ಕಂಡುಬಂದಿರುವ ವ್ಯತ್ಯಾಸ.

ನಾಯಕರುಗಳೆಲ್ಲಾ ಕೈಕೊಟ್ಟರೂ ಪಕ್ಷವನ್ನು ಮೀರಿದ ವಿಚಿತ್ರ ಅಭಿಮಾನ ಅಂಬರೀಷ್ ಬಗ್ಗೆ ಇರುವುದೇ ಇದಕ್ಕೆ ಕಾರಣವಾಗಿದೆ. ಅಂಬಿ ವಿಚಾರ ಬಂದಾಗ ಮಂಡ್ಯದ ಜನರ ಪ್ರಜ್ಞಾವಂತಿಕೆ ಕೈಕೊಡುವುದೇ ಈ ವಿಚಿತ್ರದ ಮೂಲ. ಅಂಬಿ ಕೇಳಿದರು ಎಂದು ಜನ ಓಟು ನೀಡುವುದಿಲ್ಲ, ಇವರು ಏನಾದರೂ ಕೆಲಸ ಮಾಡಬಹುದು ಎಂದೂ ಜನ ಭಾವಿಸುವುದಿಲ್ಲ; ಆದರೂ ಸ್ವತಃ ಆತನೇ ನಿಂತರೆ ಮಾತ್ರ ಓಟು ಗ್ಯಾರಂಟಿ ಎಂಬ ಸ್ಥಿತಿ ಒಂದಷ್ಟು ಮಟ್ಟಿಗೆ ಇದೆ.

ಆದರೆ ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಅತ್ಯಂತ ಹೆಚ್ಚು ಓಟು ಕೊಟ್ಟ ಶ್ರೀರಂಗಪಟ್ಟಣದಲ್ಲೇ 2008ರ ವಿಧಾನಸಭಾ ಚುನಾವಣೆಯಲ್ಲಿ ಅಂಬಿ ಸೋತಿದ್ದು. ಇದರರ್ಥ ಈ ಬಾರಿ ಮತದಾರ 3 ಬಾರಿಯ ಹಳೇ ಸಂಸದರಿಗೆ ಓಟು ನೀಡದಷ್ಟು ಪ್ರಜ್ಞಾವಂತನಾಗಿದ್ದಾನೆ ಎಂದು ಮಿಕ್ಕ ಅಭ್ಯರ್ಥಿಗಳು ಹೇಳುತ್ತಿದ್ದಾರೆ.

ಶಭಾಷ್ ಪುಟ್ಟಣ್ಣಯ್ಯ

ಪುಟ್ಟಣ್ಣಯ್ಯನೇ ಗೆಲ್ಲುವ ವ್ಯಕ್ತಿ ಎಂದು ಇಂದು ರೈತಸಂಘದ ಹೊರತಾಗಿಯೂ ಹಲವರು ಹೇಳುತ್ತಿದ್ದರೆ ಅದಕ್ಕೆ ಕಾರಣವಿದೆ. ಈ ಬಾರಿ ಅಷ್ಟು ಸೀರಿಯಸ್ ಆಗಿ ಸರ್ವೋದಯ ಕರ್ನಾಟಕವು ಚುನಾವಣೆಯನ್ನು ತೆಗೆದುಕೊಂಡಿದೆ. "ಕನಿಷ್ಠ 2-3 ಲಕ್ಷ ಓಟು ನಮಗೆ ಗ್ಯಾರಂಟಿ ಇದೆ'' ಎನ್ನುವುದಕ್ಕೆ ರೈತ ಸಂಘದ ಮುಖಂಡರು ಹಲವು ಲೆಕ್ಕಾಚಾರಗಳನ್ನು ಮುಂದಿಡುತ್ತಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪುಟ್ಟಣ್ಣಯ್ಯ ಮತ್ತು ನಂಜುಂಡೇಗೌಡರು ಪಡೆದುಕೊಂಡ ಮತಗಳ ಜೊತೆಗೆ 10 ವರ್ಷಗಳ ಕೆಳಗಿನ ವಿಧಾನಸಭಾ ಚುನಾವಣೆಯಲ್ಲಿ ಬೇರೆ ಬೇರೆ ವಿಧಾನಸಭಾ ಕ್ಷೇತ್ರಗಳಲ್ಲಿ ರೈತ ಸಂಘ ಪಡೆದುಕೊಂಡ ಓಟುಗಳನ್ನೆಲ್ಲಾ ಸೇರಿಸಿದರೆ ಅಷ್ಟಾಗುತ್ತದೆ. ಅದರ ಜೊತೆಗೆ ಈ ಬಾರಿ ಒಂದು ಅವಕಾಶ ಕೊಟ್ಟು ನೋಡಬೇಕು ಎಂಬ ಮತದಾರನ ಜಾಗೃತಿ ತಮಗೆ ಸಹಾಯಕವಾಗುತ್ತದೆ ಎಂಬ ಲೆಕ್ಕಾಚಾರ ಅವರದ್ದು. ಆದರೆ ಅಷ್ಟು ಒಳ್ಳೆಯ ಕಾಲ ಇದಲ್ಲ; ಜೊತೆಗೆ ರೈತಸಂಘದವರೂ ಚುನಾವಣೆ ಬಂದಾಗ ಮಾತ್ರ ತಯಾರಿಕೆಗೆ ಮುಂದಾಗುತ್ತಾರೆ; ಮೇಲಾಗಿ ಬಹುತೇಕ ತಾಲೂಕುಗಳಲ್ಲಿ ಸಂಘಟನೆಯ ಯಾವ ಘಟಕಗಳೂ ಇಲ್ಲ ಎಂಬುದು ಸಕ್ರಿಯ ರಾಜಕಾರಣಿಗಳ ನುಡಿ. ಏನೇ ಇದ್ದರೂ ಸರ್ವೋದಯ ಕರ್ನಾಟಕ ತನ್ನ 'ಚುನಾವಣಾ ಹೋರಾಟ'ದ ಬಿರುಸನ್ನು ಇನ್ನೂ ಕಾಪಾಡಿಕೊಂಡು ಬರುತ್ತಿರುವುದೇ ದೊಡ್ಡ ಸಾಧನೆ. ಇದರ ಫಲವಾಗಿ ಮತ್ತು ಮತದಾರರ ಜಾಗೃತಿ ಪುಟ್ಟಣ್ಣಯ್ಯರ ಗೆಲುವಿಗೆ ಕಾರಣವಾದರೆ ಅದು ಈ ಚುನಾವಣೆಯ ವಿಶೇಷವಾಗುತ್ತದೆ.

ಸಿಆರ್‌ಎಸ್ ಮುಂದೆ- ಎಲ್‌ಆರ್‌ಎಸ್ ಹಿಂದೆ

ಇದು ನಾಗಮಂಗಲದ ಈ ಇಬ್ಬರು ಹಳೆಯ ಎದುರಾಳಿಗಳ ಪರಿಸ್ಥಿತಿ. ಜೆಡಿಎಸ್‌ನ ಎಲ್ಲಾ ಎಂಎಲ್‌ಎಗಳು ಚೆಲುವರಾಯಸ್ವಾಮಿಯ ಪರ ನಿಂತಿರುವುದು ಕಾಣುತ್ತಿದೆ. ಕೆ.ಆರ್.ನಗರದ ಸಾ.ರಾ.ಮಹೇಶ್ ಸಹ ನಿಷ್ಠೆಯಿಂದ ಪಕ್ಷಕ್ಕೆ ದುಡಿಯುತ್ತಿದ್ದಾರೆ. ಮಳವಳ್ಳಿಯಲ್ಲೂ ನರೇಂದ್ರಸ್ವಾಮಿಯ ವಿರುದ್ಧದ ಅಲೆ ಮತ್ತು ಆತನ ನಿಷ್ಕ್ರಿಯತೆ ದಳಕ್ಕೇ ಸಹಾಯವಾಗುತ್ತದೆ. ಹಾಗೆ ನೋಡಿದರೆ, ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಮಾತ್ರ ದಳಕ್ಕೆ ಲೀಡ್ ಇರುವುದಿಲ್ಲ, ಮಿಕ್ಕೆಲ್ಲಾ ಕಡೆ ಪರವಾಗಿಲ್ಲ ಎನ್ನುವ ಸ್ಥಿತಿ ಇದೆ. ಇನ್ನು ಶಿವರಾಮೇಗೌಡರನ್ನು ನಾಗಮಂಗಲದ ಜನತೆಯೂ ಕೈ ಬಿಟ್ಟಂತೆ ಕಾಣುತ್ತಿದೆ. ಶಿವರಾಮೇಗೌಡರ ಹಿಂದೆ ಬಿಜೆಪಿಗೆ ವಲಸೆ ಹೋಗಿದ್ದ ಕಾರ್ಯಕರ್ತರೆಲ್ಲಾ ಈಗ ಮೂಲ ಪಕ್ಷಕ್ಕೇ ಮರಳುತ್ತಿದ್ದಾರೆ. ರೇವಣ್ಣ ಮತ್ತು ದೇವೇಗೌಡರು ಈಗ ಬಂದು ಕ್ಷೇತ್ರ ಪ್ರವಾಸ ನಡೆಸುತ್ತಿರುವುದು ಒಕ್ಕಲಿಗರಿಗೆ ಸ್ಪಷ್ಟ ಮೆಸೇಜ್ ನೀಡಲೆಂದೇ ಆಗಿದೆ.

ಅಂತಿಮವಾಗಿ ಚೆಲುವರಾಯಸ್ವಾಮಿಯೇ ಗೆಲ್ಲುತ್ತಾರಾ, ಅಂಬರೀಷ್ ಎನ್ನುವ dark horse ಈ ಸಾರಿಯೂ ಗೆಲ್ಲುತ್ತಾ, ಇಲ್ಲಾ ಪುಟ್ಟಣ್ಣಯ್ಯರ ಹಸಿರು ಕುದುರೆ ಗೆದ್ದುಬರುತ್ತದಾ ಎಂಬುದು ಗೊತ್ತಾಗಲು ಇನ್ನೊಂದು ತಿಂಗಳು ಕಳೆಯಬೇಕಿದೆ.

● ಲಕ್ಷ್ಮಣ್ ಚೀರನಹಳ್ಳಿ


ಬಡ ಮಹಿಳೆಯರಿಗೂ ದೋಖಾ!

ಈ ಭಾಗದ ಶಾಲೆಗಳಿಗೆ ಬಿಸಿಯೂಟ ಮಾಡಿಕೊಟ್ಟು ಅದರಿಂದ ಸಿಗುತ್ತಿದ್ದ ಅಲ್ಪಸ್ವಲ್ಪ ಸಂಬಳದಲ್ಲೇ ಅನೇಕ ಮಹಿಳೆಯರು ಜೀವನ ಸಾಗಿಸುತ್ತಿದ್ದರು. ಪ್ರಹ್ಲಾದ್ ಜೋಶಿಗೆ ಈ ಮಹಿಳೆಯರ ಮೇಲೆ ಅದೇನು ಸಿಟ್ಟಿತ್ತೊ ಗೊತ್ತಿಲ್ಲ, ಅವರನ್ನೆಲ್ಲಾ ಕೆಲಸದಿಂದ ತೆಗೆದುಹಾಕಿ ಇಡೀ ಜವಾಬ್ದಾರಿಯನ್ನು ಖಾಸಗಿ ಸಂಸ್ಥೆಯೊಂದಕ್ಕೆ ವಹಿಸಿಕೊಟ್ಟಿದ್ದಾನೆ.

ಇದರಿಂದಾಗಿ ಕೆಲಸ ಕಳೆದುಕೊಂಡ ಮಹಿಳೆಯರು ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿಕೊಂಡು ಜೋಶಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಜೋಶಿಯಿಂದಾಗಿ ತಮ್ಮ ಕೆಲಸ ಕಳೆದುಕೊಂಡಿರುವ ಮಹಿಳೆಯರು ಬಹಿರಂಗವಾಗಿ ಜೋಶಿ ವಿರುದ್ಧ ಚುನಾವಣಾ ಪ್ರಚಾರ ಮಾಡುತ್ತಿದ್ದಾರೆ. "ಯಾರಿಗಾದರೂ ಓಟು ಹಾಕಿ, ಜೋಶಿಗೆ ಮಾತ್ರ ಹಾಕಬೇಡಿ" ಎಂಬುದು ಅವರ ಅಳಲು. "ಮಹಿಳೆ ದೇವರ ಸಮಾನ" ಎಂದೆಲ್ಲಾ ಡೈಲಾಗ್ ಹೊಡೆಯುವ ಜೋಶಿ ಮಹಿಳೆಯರಿಗೆ ಅನ್ಯಾಯ ಮಾಡುತ್ತಿರುವ ರೀತಿಯಿದು.

ಪಾರ್ಲಿಮೆಂಟಿಗೆ ಕುನ್ನೂರ

ಕೇಶವಕೃಪಾಕ್ಕೆ ಜೋಶಿ!



■ ವಿನಯ್ ಹುರುಳಿಕುಪ್ಪಿ

ಧಾರವಾಡ ಲೋಕಸಭಾ ಕ್ಷೇತ್ರದ ಫಲಿತಾಂಶಕ್ಕಾಗಿ ಮೇ 16ರ ತನಕ ಕಾಯುವ ಅವಶ್ಯಕತೆಯಿಲ್ಲ. ಒಂದು ರೀತಿಯಲ್ಲಿ ಅದು ಈಗಾಗಲೇ ಚುನಾವಣೆಗೆ ಮುಂಚೆಯೇ ನಿರ್ಧಾರವಾಗಿ ಹೋಗಿದೆ. ಕಾಂಗ್ರೆಸ್‌ನ ಮಂಜುನಾಥ ಕುನ್ನೂರ ಗೆದ್ದು ಪಾರ್ಲಿಮೆಂಟಿಗೆ ಹೋಗುವುದು ಎಷ್ಟು ಖಚಿತವೋ ಅವರಿಗೆ ಎದುರಾಳಿಯಾಗಿರುವ ಬಿಜೆಪಿಯ ಪ್ರಹ್ಲಾದ್ ಜೋಶಿ ಸೋತು ಸುಣ್ಣವಾಗಿ, ರಾಜಕೀಯದಲ್ಲಿ ಕೆಲಸವಿಲ್ಲದೇ ಆರೆಸ್ಸೆಸ್‌ನ ಗರ್ಭಗುಡಿಯಾದ ಕೇಶವ ಕೃಪದಲ್ಲಿ ಲಾಠಿ ತಿರುವುತ್ತಾ ಕೂರುವುದೂ ಅಷ್ಟೇ ಖಚಿತ.

"ನಮ್ಮನ್ನು ಗೆಲ್ಲಿಸಿ, ನಾವು ಅದನ್ನು ಕಡಿಯುತ್ತೇವೆ, ಇಲ್ಲಿ ಗುಡ್ಡೆ ಹಾಕುತ್ತೇವೆ" ಎಂದು ವೀರಾವೇಶದಿಂದ ಮಾತನಾಡುತ್ತಿದ್ದ ಬಿಜೆಪಿಗಳನ್ನು ಧಾರವಾಡದ ಜನ ಗೆಲ್ಲಿಸಿ ನೋಡಿಯಾಗಿದೆ. ವಿಜಯ್ ಸಂಕೇಶ್ವರ್ ಎಂಬ ಮಾಜಿ ಬಸ್ ಕಂಡಕ್ಟರ್‌ನನ್ನು ಮೂರು ಬಾರಿ, ಗೆಲ್ಲಿಸಿದರು. ನಂತರ ಫಿನೈಲ್ ಮಾರಾಟಗಾರನಾಗಿದ್ದ ಪ್ರಹ್ಲಾದ್ ಜೋಶಿಯನ್ನೂ ಗೆಲ್ಲಿಸಿ ನೋಡಿದರು. ಈ ಇಬ್ಬರು ಬಿಜೆಪಿ ಮಹಾಶಯರು ಎಷ್ಟರಮಟ್ಟಿಗೆ ಕ್ಷೇತ್ರಕ್ಕಾಗಿ ಕಡಿದು ಗುಡ್ಡೆ ಹಾಕಿದ್ದಾರೆಂಬುದು ಅವರ ಕಣ್ಣ ಮುಂದಿದೆ. ಜನ ಕೊಟ್ಟ ಅಧಿಕಾರವನ್ನು ಸಂಕೇಶ್ವರ್ ತನ್ನ ವಿಜಯಾನಂದ ಟ್ರಾವೆಲ್ಸ್ ದಂಧೆ ಬೆಳೆಸಿಕೊಳ್ಳಲು ಬಳಸಿಕೊಂಡರೆ ಪ್ರಹ್ಲಾದ್ ಜೋಶಿ ಹುಬ್ಬಳ್ಳಿಯ ಈದ್ಗಾ ಮೈದಾನ ಗಲಾಟೆ ಎಬ್ಬಿಸಿ ಸೌಹಾರ್ದತೆಯಿಂದ ಬದುಕುತ್ತಿದ್ದ ಜನರ ನಡುವೆ ಕೊಳ್ಳಿಯಿಡಲು ಬಳಸಿಕೊಂಡ.

ಹುಬ್ಬಳ್ಳಿ-ಧಾರವಾಡವನ್ನು ಕರ್ನಾಟಕದ ಎರಡನೇ ರಾಜಧಾನಿಯೆಂದೇ ಪರಿಗಣಿಸಲಾಗುತ್ತದೆ. ಹಾಗೆ ನೋಡಿದರೆ ಇಲ್ಲಿ ಸಮಸ್ಯೆಗಳು ಬೆಟ್ಟದಷ್ಟಿವೆ. ಈ ಭಾಗದ ರೈತರ ಬವಣೆಗಳಿಗೆ ಕೊನೆಯೆಂಬುದಿಲ್ಲ. ಇಲ್ಲಿನ ಸಂಸದನಾಗಿದ್ದ ಜೋಶಿ ಇವುಗಳಲ್ಲಿ ಕೆಲವನ್ನಾದರೂ ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ ಈ ಹೊತ್ತು ಧಾರವಾಡ ಈ ರೀತಿ ಕ್ಯಾನ್ಸರ್ ತಗುಲಿಕೊಂಡ ರೋಗಿಯಂತೆ ಬಳಲುತ್ತಿರಲಿಲ್ಲ. ಆದರೆ ಜೋಶಿ ಆರೆಸ್ಸೆಸ್‌ನ ಅಡ್ಡೆ ಕೇಶವಕೃಪಾದಲ್ಲಿ ನಿದ್ದೆ ಮಾಡಿದನೆ ಹೊರತು ರೈತರ ಸಮಸ್ಯೆಗಳತ್ತ ಕಣ್ಣು ಹಾಯಿಸಲಿಲ್ಲ. ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ತನ್ನ ಸ್ವಂತ ಫಿನೈಲ್ ಬಿಸಿನೆಸ್ ವಿಸ್ತರಿಸಿಕೊಂಡನೇ ಹೊರತು ನಗರದಲ್ಲಿ ಜನರಿಗೆ ಕನಿಷ್ಠ ಕುಡಿಯುವ ನೀರು ಕೊಡುವುದಕ್ಕೆ ಮುಂದಾಗಲಿಲ್ಲ. ಮಾತ್ರವಲ್ಲ, ತನ್ನ ಸಹೋದರನ ನೇತೃತ್ವದಲ್ಲಿ ರಿಯಲ್ ಎಸ್ಟೇಟ್ ದಂಧೆಯಲ್ಲೂ ಕೈಯಾಡಿಸಿ ಕೋಟಿ ಕೋಟಿ ದುಡ್ಡು ಬಾಚಿಕೊಂಡ. ಇದನ್ನೆಲ್ಲಾ ಕಾಣದಿರುವಷ್ಟು ಕುರುಡರಲ್ಲ ಧಾರವಾಡದ ಜನ.

ತೊಂಭತ್ತರ ದಶಕದಲ್ಲಿ ಪ್ರಹ್ಲಾದ್ ಜೋಶಿ ಒಂದು ಹೊತ್ತಿನ ಕೂಳಿಗೂ ಪರದಾಡುತ್ತಿದ್ದ ತಿರಬೋಕಿಯಾಗಿದ್ದ. ಆದರೆ ಇವತ್ತು ಸಾವಿರಾರು ಕೋಟಿ ರೂಪಾಯಿ ಹಡಬಿ ದುಡ್ಡಿನ ಒಡೆಯನೀತ. ಈ ಹಿಂದೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಅಂದಿನ ಧಾರವಾಡ ಉತ್ತರ ಕ್ಷೇತ್ರದ 150ಕ್ಕೂ ಹೆಚ್ಚು ಹಳ್ಳಿಗಳು ನೆರೆಹಾವಳಿಗೆ ತುತ್ತಾಗಿದ್ದವು. ಸಾವಿರಾರು ಕುಟುಂಬಗಳು ಮನೆಮಠ ಕಳೆದುಕೊಂಡು ಅಕ್ಷರಶಃ ಬೀದಿಪಾಲಾಗಿದ್ದವು. ಅವರಿಗೆ ಜೀವನಾಧಾರವಾಗಿದ್ದ ಹೊಲಗದ್ದೆಗಳು ಜಲಾವೃತವಾಗಿ ಬೆಳೆದುನಿಂತ ಮೆಣಸಿನಕಾಯಿ, ಗೋಧಿ, ಮೆಕ್ಕೆಜೋಳಗಳು ಮುಳುಗಿಹೋಗಿದ್ದವು. ಆ ಹೊತ್ತು ಇದೇ ಪ್ರಹ್ಲಾದ್ ಜೋಶಿ ಆ ಕ್ಷೇತ್ರದ ಸಂಸದನಾಗಿದ್ದ. ಮನೆಮಠ ಕಳೆದುಕೊಂಡು, ಹಸಿದ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆಹಾಕಿಕೊಂಡು ಬೀದಿಯಲ್ಲಿ ಬಿದ್ದಿದ್ದ ಜನ ಈತ ತಮಗೆ ಕೇಂದ್ರ ಸರ್ಕಾರದಿಂದ ಪರಿಹಾರ, ಪುನರ್ವಸತಿಗಳನ್ನು ಕೊಡಿಸುತ್ತಾನೆಂದು ನಂಬಿದ್ದರು. ಈತ ದಿಢೀರನೆ ದಿಲ್ಲಿಗೆ ಹಾರಿ ಹೋದಾಗ ಈ ಕೆಲಸಕ್ಕೆ ಹೋಗಿದ್ದಾನೆಂದೇ ಅವರೆಲ್ಲಾ ಅಂದುಕೊಂಡಿದ್ದರು. ಆದರೆ ಈತ ದಿಲ್ಲಿಗೆ ಹೋಗಿ ತನ್ನ 'ವಿಭವ್ ಎಂಟರ್‌ಪ್ರೈಸಸ್' ಕಂಪೆನಿ ತಯಾರಿಸುವ ಫಿನೈಲ್ ಮತ್ತು ಕಸಬರಿಗೆಗಳನ್ನು ವಿದೇಶಕ್ಕೆ ರಫ್ತು ಮಾಡುವುದಕ್ಕಾಗಿ ಪರವಾನಗಿ ತೆಗೆದುಕೊಂಡು ಬಂದ. ಆಗಲೇ ಜನ ಇವನಿಗೆ ಕ್ಯಾಕರಿಸಿ ಉಗಿದಿದ್ದರು. ನೆರೆ ಹಾವಳಿಯಿಂದ ತತ್ತರಿಸಿದ್ದ ಜನರ ಬಳಿಗೆಹೋದರೆ ತನಗೆ ಚಪ್ಪಲಿಯೇಟು ಬೀಳುತ್ತದೆಂದು ಹೆದರಿ ಅತ್ತ ಕಡೆ ಈತ ಸುಳಿದಿರಲಿಲ್ಲ. ಇಷ್ಟು ಸಾಲದೆಂಬಂತೆ, ಹುಬ್ಬಳ್ಳಿಯ ವಿಮಾನ ನಿಲ್ದಾಣ ಸ್ಥಾಪನೆಗಾಗಿ ತನ್ನ ತಮ್ಮನ ರಿಯಲ್ ಎಸ್ಟೇಟ್ ಏಜೆನ್ಸಿಯನ್ನು ಮುಂದಿಟ್ಟುಕೊಂಡು ರೈತರ ಫಲವತ್ತಾದ ಜಮೀನು ಕಿತ್ತುಕೊಂಡು, ಅವರಿಗೆ ಬಿಡಿಗಾಸು ಕೊಟ್ಟು ಅವರನ್ನೂ ಬೀದಿ ಪಾಲು ಮಾಡಿದ.



ಇನ್ನು ಸಂಸದನಾಗಿ ಈತನಿಗೆ ಸರ್ಕಾರ ಕೊಟ್ಟ ಎಂಪಿ ಫಂಡು ಎಲ್ಲಿ ಹೋಯಿತೆಂದು ಕೇಳಿದರೆ ಬಾಯಿಂದ ಶಬ್ದವೇ ಹೊರಡುವುದಿಲ್ಲ, ಈ ದುಡ್ಡನ್ನು ಬಳಸಿ ಎಲ್ಲಿಯಾದರೂ ಜನೋಪಕಾರಿ ಕೆಲಸ ಮಾಡಿದ್ದರ ಒಂದೇ ಒಂದು ಸುಳಿವೂ ಸಿಗುವುದಿಲ್ಲ, ಬಂದ ಎಲ್ಲಾ ದುಡ್ಡನ್ನು ಮಠಮಾನ್ಯಗಳಿಗೆ, ಆರೆಸ್ಸೆಸ್-ಭಜರಂಗದಳಗಳೆಂಬ ಬೆಂಕಿ ಹಚ್ಚುವ ಸಂಘಟನೆಗಳಿಗೆ ಕೊಟ್ಟು ಕುಳಿತಿದ್ದಾನೆ.

ಜೋಶಿಯ ದುರಾಡಳಿತದಿಂದ ಬೇಸತ್ತಿರುವ ಜನರಿಗೆ ಕಾಂಗ್ರೆಸ್‌ನ ಮಂಜುನಾಥ ಕುನ್ನೂರ ಒಂದು ಆಶಾಕಿರಣವಾಗಿ ಕಾಣುತ್ತಿದ್ದಾರೆ. ಅದಕ್ಕೆ ಕಾರಣವೂ ಇದೆ. ಸ್ವಾತಂತ್ರ್ಯ ಪೂರ್ವದಿಂದ ಇವತ್ತಿನತನಕ ಧಾರವಾಡ, ಗದಗ, ಹಾವೇರಿ ಭಾಗದ ಜನ ಕುಡಿಯುವ ನೀರಿಗಾಗಿ ಪರಿತಪಿಸುತ್ತಿರುವುದು ತಪ್ಪಿಲ್ಲ. ಹಿಂದಿನ ಚುನಾವಣೆಯಲ್ಲಿ ಉಣಕಲ್ ಕೆರೆಯ ನೀರನ್ನು ಶುದ್ಧೀಕರಣ ಮಾಡಿ ಕುಡಿಯುವ ನೀರನ್ನಾಗಿ ಪರಿವರ್ತಿಸಿ ಜನರಿಗೆ ಒದಗಿಸುವೆ ಎಂದು ರೈಲು ಹತ್ತಿಸಿದ್ದ ಜೋಶಿಗಿಂತ ಕಾಳಿ ನದಿಯ ನೀರನ್ನು ಬಳಸಿ ಈ ಭಾಗದ ಜನರಿಗೆ ನೀರುಣಿಸಲು ಹೊರಟಿರುವ ಕುನ್ನೂರ ಹೆಚ್ಚು ಜನೋಪಕಾರಿಯಾಗಿ ಕಾಣುತ್ತಾರೆ.

ಸಂಸದನಾಗಿ ಗೆದ್ದುಹೋಗಿದ್ದ ಜೋಶಿ ಜನರ ಸಮಸ್ಯೆಗಳಿಗೆ ಸ್ಪಂದಿಸಲಿಲ್ಲ, ತನಗೆ ಬಂದಿದ್ದ ಎಂಪಿ ಫಂಡನ್ನೆಲ್ಲಾ ಬ್ರಾಹ್ಮಣ ಸಂಘಕ್ಕೆ, ರಾಯರ ಮಠಕ್ಕೆ, ಹುಬ್ಬಳ್ಳಿಯ ಚಡ್ಡಿ ಗ್ಯಾಂಗುಗಳಿಗೆ ಹಂಚಿದ್ದ. ಅದೇ ಕುನ್ನೂರರನ್ನು ನೋಡಿ. ಧಾರವಾಡ ದಕ್ಷಿಣ ಕ್ಷೇತ್ರದ ಪ್ರತಿಯೊಂದು ರೇಲ್ವೇ ನಿಲ್ದಾಣಗಳ ಅಭಿವೃದ್ಧಿಗೆ ಸುಮಾರು ಎಂಟು ಕೋಟಿಯಷ್ಟು ದುಡ್ಡನ್ನು ಕೇಂದ್ರ ಸರ್ಕಾರದಿಂದ ಮಂಜೂರು ಮಾಡಿಸಿಕೊಂಡು ಬಂದಿದ್ದಾರೆ. ಸ್ವಾತಂತ್ರ್ಯಾ ನಂತರದಲ್ಲಿ ಕಳೆದ ಲೋಕಸಭಾ ಚುನಾವಣೆಗಳ ತನಕ ಕನಿಷ್ಠ ಕುಡಿಯುವ ನೀರಿಗೂ ಪರಿತಪಿಸುತ್ತಿದ್ದ ಶಿಗ್ಗಾಂವಿ, ಬಂಕಾಪುರ, ಸವಣೂರುಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದು ಇದೇ ಕುನ್ನೂರ. ಬ್ರಿಟಿಷ್ ಕಾಲದಿಂದಲೂ ಹದಗೆಟ್ಟುಹೋಗಿದ್ದ ಈ ಭಾಗದ ರಸ್ತೆಗಳಿಗೆ ಆಧುನಿಕ ಸ್ಪರ್ಶ ಕೊಟ್ಟವರೂ ಕುನ್ನೂರ. ಪ್ರಧಾನಮಂತ್ರಿಗಳ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಸುಮರು 83 ಕೋಟಿ ಅಂದಾಜಿನ 42 ರಸ್ತೆಗಳನ್ನು, ಕೇಂದ್ರ ಸರ್ಕಾರದ ರಸ್ತೆ ನಿಧಿ ಯೋಜನೆಯಡಿಯಲ್ಲಿ ಸುಮಾರು 20 ಕೋಟಿ ವೆಚ್ಚದಲ್ಲಿ 27 ರಸ್ತೆಗಳ ಅಭಿವೃದ್ಧಿಗೆ ಅವರು ಚಾಲನೆ ಕೊಟ್ಟಿದ್ದಾರೆ.

ಕೂಡಲಸಂಗಮ ಅಭಿವೃದ್ಧಿ ಪ್ಯಾಕೇಜ್ ನಂತೆಯೇ ಶಿಶುನಾಳ ಷರೀಫ್ ಅಭಿವೃದ್ಧಿ ಪ್ರಾಧಿಕಾರಕ್ಕೂ ತಮ್ಮ ಎಂಪಿ ಫಂಡ್‌ನಿಂದ ಒಂದು ಕೋಟಿ ದುಡ್ಡನ್ನು ಕೊಟ್ಟಿದ್ದಾರೆ. ಬಂಕಾಪುರ ನವಿಲುಧಾಮಕ್ಕೆ 25 ಲಕ್ಷ, ಹುಬ್ಬಳ್ಳಿ ಸಮೀಪದ ವರೂರು ನವಗ್ರಹ ತೀರ್ಥ ಅಭಿವೃದ್ಧಿಗಾಗಿ ಕೇಂದ್ರದಿಂದ ಮೂರು ಕೋಟಿ, ಸವಣೂರಿನ ಕವಿ ವಿ.ಕೃ. ಗೋಕಾಕ್ ಪ್ರಾಧಿಕಾರಕ್ಕೆ 20 ಲಕ್ಷಗಳಷ್ಟು ದುಡ್ಡನ್ನು ಮಂಜೂರು ಮಾಡಿಸಿರುವ ಕುನ್ನೂರ ಸುಮಾರು ಹತ್ತು ಕೋಟಿ ವೆಚ್ಚದ 400 ಕಾಮಗಾರಿಗಳನ್ನು ಜಿಲ್ಲೆಯಾದ್ಯಂತ ನೆರವೇರಿಸಿದ್ದಾರೆ. ಇದರಲ್ಲಿ ಆಸ್ಪತ್ರೆ, ಶಾಲೆ, ರಂಗಮಂದಿರ, ಸಮುದಾಯ ಭವನ, ಶಾದಿ ಮಹಲ್, ಮುಕ್ತಿ ಧಾಮಗಳನ್ನು ಕಟ್ಟಿಸಿದ್ದಾರೆ.



ಲೋಕಸಭೆಯಲ್ಲಿ ಶೇ.72ರಷ್ಟು ಹಾಜರಾತಿ ಹೊಂದಿರುವ ಕುನ್ನೂರ ತಮ್ಮ ಕ್ಷೇತ್ರದ ಸ್ಥಳೀಯ ಸಮಸ್ಯೆಗಳನ್ನು ಕುರಿತು 54 ಬಾರಿ ಚರ್ಚೆ ಮಾಡಿದ್ದಾರೆ. ಪ್ರಸ್ತುತ ಅಸೆಂಬ್ಲಿ ತೀರ್ಮಾನಗಳ ಕುರಿತು 156 ಬಾರಿ ಪ್ರಶ್ನೆ ಎತ್ತಿದ್ದಾರೆ. ಆದರೆ ಜೋಶಿಯ 'ಶೂನ್ಯ ಸಾಧನೆ' ನೋಡಿ. ಪಾರ್ಲಿಮೆಂಟಿನ ಚರ್ಚೆಗಳಲ್ಲಿ ಭಾಗವಹಿಸದೇ, ಸ್ಥಳೀಯ ಜನರ, ತನ್ನ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡದೇ ರಾಷ್ಟ್ರೋತ್ಥಾನ ಬಳಗದಲ್ಲಿ ಖಾಕಿ ಚಡ್ಡಿ ತೊಟ್ಟು ಕದಂತಾಲ್ ಮಾಡುವಲ್ಲಿ, ಆರೆಸ್ಸೆಸ್ಸಿನ ಅಡ್ಡೆಯಾಗಿರುವ ಕೇಶವಕೃಪಾದಲ್ಲಿ ಬೈಠಕ್ ನಡೆಸುವುದರಲ್ಲಿ, ದಿಲ್ಲಿಯ ನಿವಾಸದಲ್ಲಿ ನಿದ್ದೆ ಮಾಡುವುದರಲ್ಲೇ ಐದು ವರ್ಷದ ತಮ್ಮ ಎಂಪಿಗಿರಿಯನ್ನು ಕಳೆದಿದ್ದಾರೆ.

- ಜಾತಿಯ ಲೆಕ್ಕಾಚಾರ ಹಾಕಿದರೂ ಕುನ್ನೂರ ಜೋಶಿಗಿಂತ ಮುಂದಿದ್ದಾರೆ. ಪ್ರಹ್ಲಾದ್ ಜೋಶಿ ಸಂಸದನಾಗಿ ಗೆದ್ದು ಬರುವುದಕ್ಕೆ ಕ್ಷೇತ್ರದಲ್ಲಿ ಅಪಾರ ಸಂಖ್ಯೆಯಲ್ಲಿರುವ ಲಿಂಗಾಯತರು - ಅದರಲ್ಲೂ ವಿಶೇಷವಾಗಿ ಪಂಚಮಸಾಲಿ ಲಿಂಗಾಯತರು - ಪ್ರಮುಖ ಕಾರಣರಾಗಿದ್ದರು. ಅದೂಅಲ್ಲದೇ ದೊಡ್ಡ ಸಂಖ್ಯೆಲ್ಲಿರುವ ಕುರುಬ ಸಮುದಾಯವೂ ಕಳೆದ ಚುನಾವಣೆಯಲ್ಲಿ ಜೋಶಿಯ ಹಿಂದೆ ನಿಂತಿದ್ದು ಆತನ ಗೆಲುವನ್ನು ಸರಾಗಗೊಳಿಸಿತ್ತು. ರಾಜ್ಯದಲ್ಲಿ ಸುಮಾರು 75 ಲಕ್ಷದಷ್ಟಿರುವ ಪಂಚಮಸಾಲಿ ಸಮುದಾಯದಿಂದ ಬಿಜೆಪಿಯಲ್ಲಿ 14 ಜನ ಎಮ್ಮೆಲ್ಲೆಗಳಿದ್ದರೂ ಢೋಂಗಿ ಪಂಚಮಸಾಲಿ ಮುರುಗೇಶ್ ನಿರಾಣಿಗೆ ಮಾತ್ರವೇ ಮಂತ್ರಿ ಪದವಿ ಕೊಟ್ಟಿರುವ ಬಿಜೆಪಿಯ ಪಂಚಮಸಾಲಿ ವಿರೋಧಿ ಧೋರಣೆಗೆ ಇದೇ ಜೋಶಿ ಬೆಂಬಲವಾಗಿ ನಿಂತಿದ್ದ.

ಈ ಚುನಾವಣೆಯಲ್ಲೂ ಬಿಜೆಪಿ ಅತಿ ಹೆಚ್ಚು ಜನಸಂಖ್ಯೆಯಿರುವ ಪಂಚಮಸಾಲಿಗಳಿಗೆ ಕೇವಲ ಒಂದೇ ಒಂದು ಟಿಕೆಟ್ ಕೊಟ್ಟು (ಕೊಪ್ಪಳದಲ್ಲಿ ಶಿವರಾಮೇಗೌಡರಿಗೆ) ಅವರ ಮೂಗಿಗೆ ತುಪ್ಪ ಸವರಿದ್ದರಿಂದ ರಾಜ್ಯಾದ್ಯಂತ ಪಂಚಮಸಾಲಿ ನಾಯಕರು ಬಿಜೆಪಿಯ ವಿರುದ್ಧ ತಿರುಗಿಬಿದ್ದಿದ್ದಾರೆ. ಇದೇ ಧಾರವಾಡ ಕ್ಷೇತ್ರವನ್ನೇ ತೆಗೆದುಕೊಂಡರೂ "ನಮ್ಮ ಮೇಲೆ ಜೋಶಿಯಂಥ ಬ್ರಾಹ್ಮಣರು ಏಕೆ ಆಳ್ವಿಕೆ ಮಾಡಬೇಕು?" "ನಮ್ಮಲ್ಲೇ ಮಂಜುನಾಥ ಕುನ್ನೂರರಂಥ ಪಂಚಮಸಾಲಿ ನಾಯಕರಿಲ್ಲವೆ?" ಎಂಬಂತಹ ಮಾತುಗಳು ಪಂಚಮಸಾಲಿ ಜನರಲ್ಲಿ ಸಹಜವಾಗಿ ಹರಿದಾಡುತ್ತಿವೆ.

ಇನ್ನೊಂದು ದೃಷ್ಟಿಯಿಂದ ನೋಡಿ. ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಮುಸ್ಲಿಂ ಮತಗಳಿವೆ. ಹಾಗೆ ನೋಡಿದರೆ ಪಂಚಮಸಾಲಿಗಳನ್ನು ಬಿಟ್ಟರೆ ಎರಡನೇ ದೊಡ್ಡ ಸಮುದಾಯವೆಂದರೆ ಮುಸ್ಲಿಮರೆ. ಮುಸ್ಲಿಮರೆಂದರೆ ಉರಿದು ಬೀಳುವ, ಕಂಡಕಂಡಲ್ಲಿ ಕೋಮು ಬೆಂಕಿ ಹಚ್ಚುವ ಪ್ರಹ್ಲಾದ್ ಜೋಶಿ ಮತ್ತು ಬಿಜೆಪಿಯ ಮಗ್ಗಲು ಮುರಿಯುವುದಕ್ಕೆ ಅವರೆಲ್ಲಾ ಕುನ್ನೂರರ ಪರ ವಹಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಅದೂಅಲ್ಲದೇ ಈ ನಡುವೆ ಸವಣೂರು ಮತ್ತು ಶಿಗ್ಗಾಂವಿಗಳ ಪಂಚಾಯತಗಳು ಕಾಂಗ್ರೆಸ್‌ಮಯವಾಗಿರುವುದು ಕುನ್ನೂರರ ಬಲವನ್ನು ಹೆಚ್ಚಿಸಿವೆ. ಏಕೆಂದರೆ, ಇವು ಕುನ್ನೂರ ಅವರು ಹುಟ್ಟಿ, ಓಡಾಡಿ ಬೆಳೆದ ಪ್ರದೇಶಗಳು. ಈ ಕ್ಷೇತ್ರದಲ್ಲಿ ಕುರುಬರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಕುರುಬರ ನಾಯಕ ಸಿದ್ಧರಾಮಯ್ಯ ಈಗ ಕಾಂಗ್ರೆಸ್‌ನಲ್ಲಿರುವುದು, ಅವರು ರಾಜ್ಯದೆಲ್ಲೆಡೆ ಬಿರುಗಾಳಿಯಂತೆ ಸುತ್ತಾಡುತ್ತಿರುವುದು, ಎಲ್ಲ ಕಡೆ ಅವರಿಗೆ ಉತ್ತಮ ಪ್ರತಿಕ್ರಿಯೆ ಬಂದಿರುವುದು ಕುರುಬರು ಸಾಲಿಡ್ಡಾಗಿ ಕಾಂಗ್ರೆಸ್ ಕಡೆ ವಾಲುವುದಕ್ಕೆ ಕಾರಣವಾಗಲಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಧಾರವಾಡ ಕ್ಷೇತ್ರದ ಜನರಿಗೆ ಒಂದು ಹೊತ್ತಿನ ಊಟ ಇಲ್ಲದಿದ್ದರೂ ಪರವಾಗಿಲ್ಲ, ಆದರೆ ಅವರಿಗೆ ನೆಮ್ಮದಿ ಬೇಕು. ಪ್ರಹ್ಲಾದ್ ಜೋಶಿ ಗೆದ್ದರೆ ಅದು ಖಂಡಿತಾ ಸಾಧ್ಯವಿಲ್ಲ, ದಿನಬೆಳಗಾದರೆ ಖಾಕಿ ಚಡ್ಡಿ ತೊಟ್ಟು ಹುಬ್ಬಳ್ಳಿ-ಧಾರವಾಡಕ್ಕೆ ಬೆಂಕಿಯಿಡುವ ಕೆಲಸದಲ್ಲಿ ಜೋಶಿ ನಿರತನಾಗಿದ್ದಾನೆ. ಒಂದಲ್ಲಾ ಒಂದು ಕಡೆ ಹಿಂದೂ-ಮುಸ್ಲಿಮರ ನಡುವೆ ಗಲಾಟೆ ಎಬ್ಬಿಸುತ್ತಿರುವ ಈತನ ಕುಕೃತ್ಯಗಳನ್ನು ಕಂಡ ಜನ ಬೇಸತ್ತುಹೋಗಿದ್ದಾರೆ. ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ, ಇಲ್ಲಿ ಜೋಶಿ ಮತ್ತೆ ಎಂಪಿಯಾದರೆ ಅದೇ ಗಲಾಟೆ, ಅದೇ ಜಗಳ ಪ್ರಾರಂಭವಾಗಿ ಇಡೀ ಕ್ಷೇತ್ರದ ಶಾಂತಿ, ನೆಮ್ಮದಿಯೇ ಹಾಳಾಗಿಹೋಗುತ್ತದೆಂದು ಜನ ಆತಂಕಗೊಂಡಿದ್ದಾರೆ. ಹಾಗಾಗಿ ಈ ಬಾರಿ ಜೋಶಿಯನ್ನು ಮನೆಗೆ ಕಳುಹಿಸಿ, ಮಂಜುನಾಥ ಕುನ್ನೂರ ಅವರನ್ನು ಪಾರ್ಲಿಮೆಂಟಿಗೆ ಕಳಿಸುವ ಯೋಚನೆಯಲ್ಲಿದ್ದಾರೆ.

ಮಂಜುನಾಥ ಕುನ್ನೂರ ಗೆಲ್ಲುವುದು, ಜೋಶಿ ಸೋಲುವುದು ಹೆಚ್ಚೂ ಕಡಿಮೆ ಇಬ್ಬರಿಗೂ ಮನದಟ್ಟಾಗಿ ಹೋಗಿದೆ. ಆದ್ದರಿಂದಲೇ ಕುನ್ನೂರ ಪಾರ್ಲಿಮೆಂಟಿಗೆ ಹೋಗುವುದಕ್ಕೆ ಸಿದ್ಧತೆ ನಡೆಸಿದ್ದರೆ, ರಾಜಕೀಯವಾಗಿ ನಿರುದ್ಯೋಗಿಯಾಗಲಿರುವ ಪ್ರಹ್ಲಾದ್ ಜೋಶಿ ಈಗಾಗಲೇ "ನನಗೊಂದು ಕೆಲಸ ಕೊಡಿ" ಎಂದು ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಪ್ರಕಟಿಸುವ ಲೋಕ ಶಿಕ್ಷಣ ಸಂಸ್ಥೆಯಲ್ಲಿ ಟ್ರಸ್ಟಿಶಿಪ್ ಗಳಿಸಿದ್ದಾರೆ.

ಹಾಸನ: ಒಕ್ಕಲಿಗರನ್ನು ವಿಭಜಿಸುವ ಬ್ರಾಹ್ಮಣ ಕುತಂತ್ರ ಫೇಲ್!



ಹಾಸನದ ಚುನಾವಣಾ ಒಳರಾಜಕೀಯ ಬಹಳ ...ಸ್ಟಿಂಗ್ ಆದ ತಿರುವು ಪಡೆಯುತ್ತಿದೆ. ಬಹಳ ...ವಾಗಿ RSS ನ ಬ್ರಾಹ್ಮಣ ವಟುಗಳು ಬೆಂಗಳೂರಿನ ...ಕೃಪಾದಲ್ಲಿ ಕೂತು ಯಾವ ಸ್ಕೆಚ್ ಹಾಕಿದ್ದರೋ ... ಈಗ ವರ್ಕ್‌ಔಟ್ ಆಗುತ್ತಿಲ್ಲ.

...ಕ್ಕಲಿಗರಲ್ಲಿ ಮುಳ್ಳೊಕ್ಕಲಿಗರು, ದಾಸ ಒಕ್ಕಲಿಗರೆಂಬ ... ಗಡಗಳಿವೆಯಷ್ಟೇ. ಮಾಜಿ ಪ್ರಧಾನಿ ದೇವೇಗೌಡರು ...ಪ್ಪ ಒಕ್ಕಲಿಗರೆಂತಲೂ ಅವರ ವಿರುದ್ಧ ದಾಸ ...ಗರನ್ನು ಎತ್ತಿಕಟ್ಟಿ ದೇವೇಗೌಡರನ್ನು ಮುಗಿಸಬೇಕೆಂದು ...ಗ ಯಡಿಯೂರಪ್ಪ ಒಂದು ಸ್ಕೆಚ್ ಏನೋ ಹಾಕಿದ್ದರು. ...ತೆ ಆರು ತಿಂಗಳಿಗೊಂದು ಪಕ್ಷ ...ಸುವ ಹನುಮೇಗೌಡರನ್ನು ಎಳೆತಂದು ... ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲಾಗಿದೆ. ...ಹನುಮೇಗೌಡ ದಾಸ ಒಕ್ಕಲಿಗ ...ದನ್ನೇ ಬಿಜೆಪಿಗಳು ಈಗ ದೊಡ್ಡದಾಗಿ ... ಮಾಡುತ್ತಿದ್ದಾರೆ. ಈ ಚೆಡ್ಡಿಗಳ ...ನ ಯಾವ ಕೀಳುಮಟ್ಟಕ್ಕಿಳಿದಿದೆ ... ಒಂದು ಕಡೆ 'ನಾವೆಲ್ಲಾ ಹಿಂದೂ ...ಒಂದು' ಎನ್ನುವುದು, ಮತ್ತೊಂದೆಡೆ ...ಳ್ಳೊಕ್ಕಲಿಗರೇ ಬೇರೆ, ದಾಸೊಕ್ಕಲಿಗರೇ ...ಎಂದು ಒಕ್ಕಲಿಗರಲ್ಲೇ ಒಡಕು ತಂದು ...ರಾಜಕೀಯ ಬೇಳೆ ಬೇಯಿಸಿಕೊಳ್ಳುವ ... ನಡೆಸುವ ಕೆಲಸ ಇಲ್ಲಿ ನಡೆದಿದೆ. ...ಸುರುವಿನಲ್ಲಿ ಈ ವಿಚಾರ ಸ್ವಲ್ಪಮಟ್ಟಿಗೆ ... ಮಾಡುಬಲ್ಲದು ಎನಿಸಿತ್ತಾದರೂ ಈಗ ... ಕ್ಷೇತ್ರದಲ್ಲಿ ಯಾರಿಗೂ ಇದು ದೊಡ್ಡ ಸಂಗತಿ ...ತ್ತಿಲ್ಲ.

...4 ಲಕ್ಷದಷ್ಟು ಮತದಾರರಿರುವ ಹಾಸನದಲ್ಲಿ ಕಳೆದ ...ದೇವೇಗೌಡರು ಒಂದು ಲಕ್ಷ ತೊಂಭತ್ತು ಸಾವಿರ ...ಂದ ಗೆದ್ದಿದ್ದರು. ಆಗ ಚಲಾವಣೆಯಾಗಿದ್ದ 9.12 ...ಮತಗಳಲ್ಲಿ ದೇವೇಗೌಡರಿಗೆ 4.62 ಲಕ್ಷ ಓಟ್ ...ವು. ಕಳೆದ ಈ 5 ವರ್ಷಗಳಲ್ಲಿ ಹಾಸನದ ಮತದಾರರಿಗೆ ದೇವೇಗೌಡರ ವಿರುದ್ಧ ದೂರು ಹೇಳಲು ಏನೂ ಇಲ್ಲ. ದೇವೇಗೌಡ ಹಾಗೂ ರೇವಣ್ಣ ಜೊತೆಗೂಡಿ ಯಾವ ಅಭಿವೃದ್ಧಿ ಕೆಲಸಗಳೂ ಬಾಕಿ ಉಳಿಯದಂತೆ ಮಾಡಿ ಮುಗಿಸಿದ್ದಾರೆ. ರೇವಣ್ಣ ಅಧಿಕಾರಾವಧಿಯಲ್ಲಿ ಸರ್ಕಾರವು ದಾಸ ಒಕ್ಕಲಿಗರಿಗೆ ಸೇರಿದ್ದ ಕೆಲವರ ಜಮೀನನ್ನು ಸ್ವಾಧೀನ ಮಾಡಿಕೊಂಡಿತ್ತೆಂಬ ಆರೋಪ ಅಲ್ಲಲ್ಲಿ ಕೇಳಿಬರುತ್ತಿದೆ.





ವಾಸ್ತವದಲ್ಲಿ ಇದೊಂದು ಅಸಂಬದ್ಧಗಳ ಕಂತೆ. ಜಾತಿ ಬಿರುಗಾಳಿ ಎಬ್ಬಿಸುವ ಕೆಲ ಬ್ರಾಹ್ಮಣ ತಲೆಗಳ ಪಿತೂರಿ ಎಂದು ಒಕ್ಕಲಿಗರೇ ಹೇಳುತ್ತಿದ್ದಾರೆ. ಇದು ಯಾಕೆಂದರೆ ಈ ಆರೋಪಗಳು ಇಷ್ಟಕ್ಕೇ ನಿಲ್ಲುತ್ತಿಲ್ಲ. ದಾಸ ಒಕ್ಕಲ್ಲಿಗರಾಗಿದ್ದ ಹಾಸನ ನಗರಸಭೆಯ ಗಿರಿಜಾ ಶಂಕರ್ ಕೊಲೆ, ವೆಂಕಟರಮಣ ಗೌಡರ ಕೊಲೆ ವಿಚಾರದಲ್ಲಿ ದೇವೇಗೌಡರು ನ್ಯಾಯ ಕೊಡಿಸಲಿಲ್ಲವೆಂತಲೂ ಬಿಜೆಪಿಗಳು ಕೆದಕುತ್ತಿದ್ದಾರೆ. ಇಲ್ಲಿನ ಬಿಜೆಪಿಗಳು ಸಿಡಿಲು ಬಡಿದು ಸತ್ತವರಲ್ಲಿ, ಆಕ್ಸಿಡೆಂಟ್‌ಗಳಲ್ಲಿ ಇದುವರೆಗೂ ಸತ್ತವರ ಪೈಕಿ ದಾಸ ಒಕ್ಕಲಿಗರ ಸಂಖ್ಯೆ ಎಷ್ಟೊಂದು ಲೆಕ್ಕ ಹಾಕಿಲ್ಲ ಹಾಗೂ ಆ ಆರೋಪವನ್ನು ದೇವೇಗೌಡರ ತಲೆ ಮೇಲೆ ಹೊರಿಸಿಲ್ಲ ಎಂಬುದೇ ಪರಮಾಶ್ಚರ್ಯಕರ ಎಂದು ಜನ ಆಡಿಕೊಳ್ಳುತ್ತಿದ್ದಾರೆ.


ಇಷ್ಟರಿಂದಲೇ ಅರ್ಥ ಆಗುವ ಸಂಗತಿ ಏನೆಂದರೆ ಬಿಜೆಪಿಗೆ ಇಲ್ಲಿ ಬೇರೆ ವಿಚಾರಗಳೇ ಇಲ್ಲ ಎಂದು. ಹಾಸನದ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಶ್ರವಣಬೆಳಗೊಳ, ಅರಸೀಕೆರೆ, ಹಾಸನ, ಹೊಳೇನರಸಿಪುರ ಹಾಗೂ ಸಕಲೇಶಪುರದಲ್ಲಿ ಜನತಾದಳ ಶಾಸಕರಿದ್ದಾರೆ. ಉಳಿದ ಕಡೂರು, ಬೇಲೂರು, ಅರಕಲಗೂಡಿನಲ್ಲಿ ಕಾಂಗ್ರೆಸಿಗಳಿದ್ದಾರೆ. ಆದರೆ ಬಿಜೆಪಿಗೆ ಒಬ್ಬಾನೊಬ್ಬ ಶಾಸಕನೂ ಇಲ್ಲ. ಕೈ ಬಳೆ ಮತ್ತು ಕೋಡುಬಳೆ ಪ್ರಿಯ ಶ್ರೀಕಂಠಯ್ಯನಂತ ಗುಜರಿ ಗಾಡಿಗಳೇ ಬಿಜೆಪಿ ಕ್ಯಾಂಪಿನಲ್ಲಿರುವುದು. ಹೀಗಿದ್ದಾಗಲೂ ಮೇಲ್ನೋಟಕ್ಕೆ ಇಲ್ಲಿ ಜೆಡಿಎಸ್‌ನ ದೇವೇಗೌಡ, ಕಾಂಗ್ರೆಸ್‌ನ ಬಿ. ಶಿವರಾಂ ಮತ್ತು ಬಿಜೆಪಿಯ ಹನುಮೇಗೌಡರ ನಡುವೆ ಟ್ರಯಾಂಗ್ಯುಲರ್ ಫೈಟ್ ನಡೆಯುತ್ತಿದೆ ಎಂಬಂತೆ ಬಿಂಬಿಸಲಾಗುತ್ತಿದೆ.

ಅಸೆಂಬ್ಲಿ ಎಲೆಕ್ಷನ್ ನಡೆದಾಗ ಬಿಜೆಪಿ ಹಾಗೂ ಒಕ್ಕಲಿಗರ ಕಡುವೈರಿ ಲಿಂಗಾಯತರ ಯಡಿಯೂರಪ್ಪ ಏನೆಲ್ಲಾ ಲಾಗಾ ಹಾಕಿದರೂ ಹಾಸನದ ಜನ ಬಿಜೆಪಿಯನ್ನು ತಿರಸ್ಕರಿಸಿದ್ದರು. ಆದರೆ ಲೋಕಸಭಾ ಎಲೆಕ್ಷನ್‌ನಲ್ಲಿ ಹೇಗಾದರೂ ಮಾಡಿ ದೇವೇಗೌಡರನ್ನು ತೀರಿಸಿಬಿಡಬೇಕೆಂದು ಬಿಜೆಪಿಗಳು ಹಾತೊರೆಯುತ್ತಿದ್ದಾರೆ.

ಆದರೆ ಅದು ಅಷ್ಟು ಸುಲಭವಲ್ಲ!

ಇಲ್ಲಿ ಬಿಜೆಪಿಗಳ ಲೆಕ್ಕಾಚಾರ ಏನೆಂದರೆ ಲಿಂಗಾಯತರ ಎರಡು ಲಕ್ಷ, ಬ್ರಾಹ್ಮಣ-ಜೈನರ ಮುಕ್ಕಾಲು ಲಕ್ಷದಲ್ಲಿ ಹೆಚ್ಚಿನ ಓಟು ಪಡೆದು ಒಕ್ಕಲಿಗರ ಓಟು ವಿಭಜಿಸಿ 2 ಲಕ್ಷದಷ್ಟಿರುವ ದಾಸ ಒಕ್ಕಲಿಗರ ಪೈಕಿ ಮುಕ್ಕಾಲಂಶ ಹನುಮೇಗೌಡರಿಗೇ ಬಿದ್ದರೂ ದೇವೇಗೌಡರ ಕತೆ ಮುಗಿದೇ ಹೋಗುತ್ತದೆ ಎಂಬುದಾಗಿದೆ.

ಆದರೆ ಎಲೆಕ್ಷನ್ ಅಂದರೆ ಎರಡೆರಡ್ಲ ನಾಲ್ಕು ಎನ್ನುವಷ್ಟು ಸರಳ ಅಲ್ಲವಲ್ಲ. ಈ ಮುಳ್ಳೊಕ್ಕಲಿಗ-ದಾಸ ಒಕ್ಕಲಿಗ ಎಂಬುದು ಒಕ್ಕಲಿಗರ ಪೈಕಿ ಕೇವಲ ಒಳಪಂಗಡಗಳೇ ವಿನಃ ಪರಸ್ಪರ ವೈರಿ ಸಮುದಾಯಗಳಲ್ಲ, ಇವರ ನಡುವೆ ಮದುವೆ, ರಕ್ತ ಸಂಬಂಧ, ವ್ಯಾಪಾರ ವಹಿವಾಟುಗಳೆಲ್ಲಾ ಶತಶತಮಾನಗಳಿಂದಲೂ ಇದೆ. ಬಿಜೆಪಿಗಳು ಸ್ಕೆಚ್ ಹಾಕಿದಷ್ಟು ಸುಲಭವಾಗಿ ಈ ಜಾತಿ ಜಗಳ ಇಲ್ಲಿ ಕೆಲಸ ಮಾಡುತ್ತಿಲ್ಲ. ಇನ್ನು ಒಂದೂ ಮುಕ್ಕಾಲು ಲಕ್ಷದಷ್ಟಿರುವ ಕುರುಬರು ಸಿದ್ದರಾಮಯ್ಯನವರ ಮಾತಿಗೆ ಬೆಲೆ ಕೊಟ್ಟು ಕಾಂಗ್ರೆಸ್‌ನತ್ತ ತಿರುಗಿದರೂ ಅದೂ ಕೂಡ ಹಂಡ್ರೆಡ್ ಪರ್ಸೆಂಟ್ ಇರುವುದಿಲ್ಲ.




ಉದಾಹರಣೆಗೆ ಅರಸೀಕೆರೆಯ ಜೆಡಿಎಸ್ ಶಾಸಕ ಶಿವ ಲಿಂಗೇಗೌಡ ಥರದ ನಾಯಕನಿಗೆ ಕುರುಬರ ಅಖಂಡ ಬೆಂಬಲ ಇದೆ. ಇನ್ನು ವೇಲಾಗಿ ಇದರಿಂದ ಬಿಜೆಪಿಗೆ ಯಾವ ಪ್ರಯೋಜನವೂ ಇಲ್ಲ. ಇಲ್ಲಿ ಕಾಂಗ್ರೆಸ್‌ನ ಪ್ರಭಾವ ಅಷ್ಟಾಗಿ ಕಾಣಿಸದ ಕಾರಣ 2 ಲಕ್ಷದಷ್ಟಿರುವ ಮುಸ್ಲಿಂ-ಕ್ರಿಶ್ಚಿಯನ್ನರು ದೇವೇಗೌಡರತ್ತ ನೋಡುತ್ತಿದ್ದಾರೆ. ಉಳಿದಂತೆ ಒಂದೂವರೆ ಲಕ್ಷ ದಲಿತರ ಮತಗಳು ದಳ-ಕಾಂಗ್ರೆ ನಡುವೆ ಹಂಚಿ ಹೋಗುತ್ತವೆಯೇ ಹೊರತು ಬಿಜೆಪಿಗೆ ಏನೂ ದಕ್ಕುವುದಿಲ್ಲ.

ಹೀಗೆ ಯಾವ ನೆಲೆಯಲ್ಲಿ ನೋಡಿದರೂ ದಳದ ದೇವೇಗೌಡರ ಶಕ್ತಿ ಕ್ಷೀಣಿಸಿಲ್ಲ ಎಂಬುದು ಖಚಿತ.

ಎಚ್.ಡಿ. ರೇವಣ್ಣ ಹಾಗೂ ಪತ್ನಿ ಭವಾನಿ ಹಾಸನದಲ್ಲೇ ನಿಂತು ಇಡೀ ಚುನಾವಣೆಯನ್ನು ನಿರ್ವಹಿಸುತ್ತಿದ್ದಾರೆ.

ಇಲ್ಲಿ ದೇವೇಗೌಡರು ಗೆಲ್ಲುವ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ▶▶▶ 16

ಅಡ್ವಾಣಿಗೂ ಒಂದು ಸೇಡಿದೆ



ಇಡೀ ಇಂಡಿಯಾದಲ್ಲಿ ಹಾಸನ ಕ್ಷೇತ್ರ ಎಷ್ಟು ಪ್ರಾಮುಖ್ಯತೆ ಪಡೆದಿದೆ ಎಂದರೆ ಈ ಬಾರಿ ದೇವೇಗೌಡರನ್ನು ಸೋಲಿಸಲೇಬೇಕೆಂದು ಬಿಜೆಪಿಯ ರಾಷ್ಟ್ರನಾಯಕರೂ ಹಾತೊರೆಯುತ್ತಿದ್ದಾರೆ. ಅದು ಯಾಕೆಂದರೆ ಅಡ್ವಾಣಿ ಪ್ರಧಾನಮಂತ್ರಿಯಾಗಬೇಕೆಂದರೆ ಸೆಕ್ಯುಲರ್ ನೆಲೆಯ ತೃತೀಯ ರಂಗ ದುರ್ಬಲವಾಗಬೇಕು. ಅದಾಗಬೇಕೆಂದರೆ ತೃತೀಯ ರಂಗದ ಚಾಲಕ ಶಕ್ತಿ ದೇವೇಗೌಡ ಸೋಲಬೇಕು.

ಇದು ಬಿಜೆಪಿಗಳ ರಣತಂತ್ರ.

ದೇವೇಗೌಡರ ಬಗ್ಗೆ ಬಿಜೆಪಿ ಬ್ರಾಹ್ಮಣ ನಾಯಕರಿಗೆ ಈಗ ಎಷ್ಟು ಸೇಡಿದೆಯೆಂದರೆ ಒಂದು ಕಾಲದಲ್ಲಿ ಎನ್‌ಡಿಎ ಜೊತೆಗಿದ್ದ ತೆಲುಗುದೇಶಂ, ಎಐಎಡಿಎಂಕೆ, ಟಿಆರ್‌ಎಸ್, ಬಿಜುಜನತಾದಳ ಮುಂತಾದವರನ್ನು ಕಮ್ಯೂನಿಸ್ಟರ ಜೊತೆ ಸೇರಿಸಿ ತೃತೀಯರಂಗಕ್ಕೆ ಚಾಲನೆ ಕೊಟ್ಟಿದ್ದೇ ದೇವೇಗೌಡ. ಕಳೆದ ತಿಂಗಳು ದಾಬಸ್‌ಪೇಟೆಯಲ್ಲಿ ಗೌಡರು ನಡೆಸಿದ ಈ ಸಮಾವೇಶಕ್ಕೆ ದೇಶಾದ್ಯಂತ ಭಾರಿ ಪ್ರಚಾರ ಸಿಕ್ಕಿತ್ತು. ಈ ಸಮಾವೇಶ ನಡೆಸುವ ಮೂಲಕ ಗೌಡರು ಬಿಜೆಪಿಯ ಮೈತ್ರಿಕೂಟದ ಕೋಟೆಯನ್ನೇ ಧ್ವಂಸ ಮಾಡಿದ್ದರು. ಅಂಥ ದೇವೇಗೌಡ ಈ ಬಾರಿ ಪುನಃ ಗೆದ್ದರೆ ನಾಳೆ ರಾಷ್ಟ್ರ ರಾಜಕಾರಣದಲ್ಲಿ ಮತ್ತೆ ಚಲಾವಣೆಗೆ ಬಂದು ಬಿಜೆಪಿಗೆ ಅಧಿಕಾರ ಸಿಗದಂತೆ ಮಾಡುತ್ತಾರೆಂಬ ಭೀತಿ ಅಡ್ವಾಣಿಗಿದೆ. ಹಾಗಾಗಿ ಗೌಡರ ವಿರುದ್ಧ ಪ್ರಚಾರ ನಡೆಸಲು ಖುದ್ದು ಅಡ್ವಾಣಿಯೇ ಹಾಸನಕ್ಕೆ ಕಾಲಿಡುತ್ತಿದ್ದಾರೆ. ಹಾಸನದ ಬಿಜೆಪಿ ಕ್ಯಾಂಡಿಡೇಟ್ ಹನುಮೇಗೌಡ ಪರವಾಗಿ ಬರೀ ಬೆಂಗಳೂರು ಬಳ್ಳಾರಿಯಿಂದ ಮಾತ್ರವಲ್ಲ ದೆಹಲಿಯಿಂದಲೂ ಹಣ ಹರಿದುಬರುತ್ತಿದೆ. ಆದರೆ ಬಿಜೆಪಿಗಳು ಇಷ್ಟೆಲ್ಲಾ ಪಲ್ಟಿ ಹೊಡೆಯುತ್ತಿದ್ದರೂ ಹಾಸನದ ಜನತಾದಳದ ಕೋಟೆ ಗಟ್ಟಿಮುಟ್ಟಾಗಿಯೇ ಇದೆ.

'ಸ್ವಾಮೀ ನನ್ ಕೈಲಾಗಲ್ಲ' ಎಂದನಾ ಹನುಮೇಗೌಡ

ಹಾಸನದ ಬಿಜೆಪಿ ಕ್ಯಾಂಪಿನೊಳಗಿನ ವಿಚಾರಗಳು ಭಲೇ ಜೋಕಾಗಿವೆ.

ಕಳೆದ ವಾರ ಬಬ್ರುವಾಹನನಂತೆ ಹಾಸನಕ್ಕೆ ಓಡೋಡಿ ಬಂದ ಯಡಿಯೂರಪ್ಪ ದೇವೇಗೌಡರನ್ನು ಟೀಕಿಸಿ ಲಿಂಗಾಯತರನ್ನು, ದಾಸ ಒಕ್ಕಲಿಗರನ್ನು ಮಾಲೀಶ್ ಮಾಡಿ ಹೋದರಲ್ಲವೆ.. ಹಾಗೆ ಹೋಗುವ ಮುನ್ನ ಬಿಜೆಪಿ ಅಭ್ಯರ್ಥಿ ಹನುಮೇಗೌಡ ಯಡ್ಡಿ ಜೊತೆ ಸಪರೇಟಾಗಿ ಮಾತಿಗೆ ಕುಳಿತರು. ಆ ಮಾತು ಈ ಮಾತು ಆಡುತ್ತಾ ಆಡುತ್ತಾ ಇದ್ದಕ್ಕಿದ್ದಂತೆ ಬಿಕ್ಕಳಿಸಲು ಶುರು ಮಾಡಿದ ಶ್ರೀಮಾನ್ ಹನುಮೇಗೌಡ ಯಡ್ಡಿಗೆ ಕೈಮುಗಿದು "ಸ್ವಾಮೀ, ನನ್ ಕೈಲಾಗಲ್ಲ, ನನ್ನ ಬಿಟ್‌ಬಿಡಿ" ಎಂದು ಕಣ್ಣೀರಿಟ್ಟರಂತೆ. ಇದಕ್ಕೇನು ಕಾರಣ ಗೊತ್ತೆ?

ಹನುಮೇಗೌಡ ಬರಿಗೈಯಾಗಿದ್ದಾರೆ!

RSS ನಾಯಕರು ನಯಾಪೈಸೆಯನ್ನು ಅವರ ಕೈಗೆ ನೇರವಾಗಿ ಕೊಡುತ್ತಿಲ್ಲ. ಹಾಸನದತ್ತ ಬಿಜೆಪಿಯ ಕೋಟಿಗಟ್ಟಲೆ ಹಣ ಹರಿದುಬರುತ್ತಿದ್ದರೂ ಹನುಮೇಗೌಡರಿಗೆ ಅದರ ವಾಸನೆಯೂ ಸಿಗದಂತೆ ಬಿಜೆಪಿಗಳೇ ನುಂಗಿ ನೀರು ಕುಡಿಯುತ್ತಿರುವ ಬಗ್ಗೆ ಹಾಸನದಲ್ಲಿ ಕತೆಗಳೇ ಹರಡಿಹೋಗಿವೆ.

ಹನುಮೇಗೌಡ ತನ್ನ ಕೈಯಾರೆ ಯಾರಿಗಾದರೂ ಹತ್ತಿಪ್ಪತ್ತು ಸಾವಿರ ಎತ್ತಿ ಕೊಡಬೇಕೆಂದರೂ ಅವರ ಕೈಲಿ ಹಣವಿರದಂತೆ ಒಂದು ಪಿತೂರಿ ನಡೆದಿದೆ.

ದುಡ್ಡು ನುಂಗಿದ ಸಿ.ಟಿ.ರವಿ ಗ್ಯಾಂಗ್



ಹಾಸನದ ಬಿಜೆಪಿ ಎಲೆಕ್ಷನ್ ಖರ್ಚಿನ ವಹಿವಾಟು ಪೂರಾ ಹೊರಗಿನವರ ಕೈಯಲ್ಲಿದೆ. ಅಭ್ಯರ್ಥಿ ಹನುಮೇಗೌಡರಿಗೆ ಒಂದು ಕಾರು, ಕಾರಿಗೆ ನಾಲ್ಕು ಬಾವುಟ ಸಿಕ್ಕಿಸಿ ಬರಿಗೈಲಿ ಹಾಸನದ ಬೀದಿ ಬೀದಿ ಅಲೆಯುವಂತೆ ಹೇಳಿ ದುಡ್ಡನ್ನು ಮಾತ್ರ ಸಿ.ಟಿ. ರವಿ ತನ್ನ ಕೈಲಿಟ್ಟುಕೊಂಡಿದ್ದಾನೆ. ಹನುಮೇಗೌಡರಿಗೆ ಸಾವಿರಾರು ಲೆಕ್ಕದಲ್ಲಿ ಸಿಗುತ್ತಿರುವುದು ಬರೀ ಕರಪತ್ರ ಮಾತ್ರ.

ಕಾರ್ಯಕರ್ತರ ಓಡಾಟಕ್ಕೆ ಸರಿಯಾಗಿ ಹಣ ಸಿಗುತ್ತಿಲ್ಲ ಎಂಬ ಗಲಾಟೆ ಯಾವ ಮಟ್ಟಕ್ಕೆ ಹೋಯಿತೆಂದರೆ ಏಪ್ರಿಲ್ 14ನೇ ತಾರೀಖು 'ಬಿಜೆಪಿ ಭಿನ್ನಮತೀಯರ ಸಭೆ' ಎಂಬ ಹೆಸರಿನಲ್ಲಿ ಕೃಷ್ಣ ಹೋಟೆಲ್‌ನಲ್ಲಿ ಸಭೆಯೇ ನಡೆದುಹೋಯಿತು. ಪ್ರಮುಖ ಬಿಜೆಪಿ ನಾಯಕರಾದ ದಾಸೇಗೌಡ ಉಲ್ಲಳ್ಳಿ ಸತೀಶ್, ಕಮಲ್‌ಕುಮಾರ್, ... ಮುಂತಾದವರು ಅವತ್ತು ಸಿ.ಟಿ. ರವಿಯನ್ನು ಬಾಯಿಗೆ ಬಂದಂತೆ ಬೈಯ್ದಿದ್ದಾರೆ. ಆಗತಾನೇ ಎಲೆಕ್ಷನ್ ... 40 ಲಕ್ಷ ಒಂದೇ ಇದುಗಂಟಿನಲ್ಲಿ ಹಾಸನಕ್ಕೆ ಬಂದಿದ್ದರೂ ರವಿ ಗ್ಯಾಂಗ್ ಕೇವಲ 13 ಲಕ್ಷಕ್ಕೆ ಖರ್ಚು ... ಬಾಕಿ ಹಣ ... ಗಲಾಟೆ ನಡೆಯಿತು. ಈ ರವಿ ಗ್ಯಾಂಗಿನಲ್ಲಿ ಯೋಗೇಂದ್ರನೆಂಬ RSS ... ಸೇರಿ ಲಕ್ಷಾಂತರ ರೂಪಾಯಿ ನುಂಗಿ ನೀರು ಕುಡಿಯುತ್ತಿದ್ದಾರೆ. ... ಹನುಮೇಗೌಡ ... ಬ್ರಾಹ್ಮಣರ ಪಿತೂರಿಯ ಹರಕೆಯ ಕುರಿಯಾಗಿ ಬರಿಗೈಲಿ ಅಲೆಯುತ್ತಿದ್ದಾರೆ.

ಲಿಂಗಾಯತರ ಜಗಳ

ಒಕ್ಕಲಿಗರನ್ನು ಒಡೆದಾಳಲು ಸ್ಕೆಚ್ ಹಾಕಿದ್ದ ಬಿಜೆಪಿಗೆ ಹಾಸನದ ಲಿಂಗಾಯತರನ್ನೇ ನಿಭಾಯಿಸಲು ಆಗುತ್ತಿಲ್ಲ.


ಬಿ.ಬಿ. ಶಿವಪ್ಪ ಹಾಗೂ ಕೋಡಿಮಠ ಇದಕ್ಕೆ ಸಾಕ್ಷಿಯಾಗಿದೆ. ರಾಜ್ಯದ ಹಿರಿಯ ಬಿಜೆಪಿ ಮುಖಂಡ ಶಿವಪ್ಪಗೆ ಬಣಜಿಗ ಲಿಂಗಾಯತ ಯಡ್ಡಿ ಪದೇಪದೇ ಅವಮಾನ ಮಾಡಿದ್ದು ಇಲ್ಲಿನ ಲಿಂಗಾಯತರಿಗೆ ಸಿಟ್ಟು ತರಿಸಿದೆ. ಶಿವಪ್ಪ ಸಹ ಈಗ ಬಿಜೆಪಿ ಪರ ಕೆಲಸ ಮಾಡದೆ ದೂರ ನಿಂತಿದ್ದಾರೆ. ಇನ್ನು ಕೋಡಿಮಠದ ಶಿವಯೋಗಿ ರಾಜೇಂದ್ರ ಸ್ವಾಮಿ 'ಯಡ್ಡಿ ಕುರ್ಚಿ ಗ್ಯಾರಂಟಿಯಿಲ್ಲ' ಎಂದು ಶಾಪ ನೀಡಿಬಿಟ್ಟಿದ್ದಾರೆ. ಇಷ್ಟಕ್ಕೂ ಹಾಸನದ ಲಿಂಗಾಯತರೆಲ್ಲಾ ಒಂದೇ ರೀತಿ ಯೋಚಿಸುತ್ತಿಲ್ಲ. ಇವರ ಪೈಕಿ ನೊಣಬರು, ಗೌಡಲಿಂಗಾಯತರು, ಬಣಜಿಗರು ಕೆಲಭಾಗ ಜಾಸ್ತಿ ಇದ್ದಾರೆ. ಪುಷ್ಪಗಿರಿ ಮಠ, ತಣ್ಣೀರು ಹಳ್ಳಿಯೆಂಬ ಇನ್ನೆರಡು ಚಿಕ್ಕ ಮಠಗಳಿವೆಯಾದರೂ ಇಲ್ಲೂ ಬಣಜಿಗ ಲಿಂಗಾಯತರ ದರ್ಪವೇ ಹೆಚ್ಚಿದೆ. ಇಷ್ಟಕ್ಕೂ ಲಿಂಗಾಯತರು ತಮ್ಮ ಒಳಪಂಗಡದ ಭೇದಭಾವ ಮರೆತು ಬಿಜೆಪಿ ಪರವಾಗಿ ಒಗ್ಗಟ್ಟಾದರೆ ಅದನ್ನು ನೋಡಿಕೊಂಡು ಒಕ್ಕಲಿಗರು ಸುಮ್ಮನಿರುತ್ತಾರಾ?

ಅವರೂ ಸಹ ಮುಳ್ಳೊಕ್ಕಲಿಗ-ದಾಸ ಒಕ್ಕಲಿಗರೆಂಬ ಯಡಿಯೂರಪ್ಪನ ಪಿತೂರಿಗೆ ಬಲಿಯಾಗದೆ ಒಗ್ಗಟ್ಟಾಗುವುದಿಲ್ಲವಾ?

ಹಾಸನದಲ್ಲಿ ಈಗ ಇದೇ ಆಗುತ್ತಿದೆ ದೇವೇಗೌಡರ ಶಕ್ತಿ ... ಇದೇ ಕಾರಣವೂ ಆಗಿದೆ.

ಬ್ರಾಹ್ಮಣ ಬಣಜಿಗ ಲಿಂಗಾಯತರ ವಿರುದ್ಧ ಬಂಡಾಯ!

● ಕುಮಾರ್ ಬುರಡಿಕಟ್ಟಿ



ಕರ್ನಾಟಕ ಕದಲುತ್ತಿದೆ!

ಎಚ್ಚೆತ್ತ ಜಾತಿ ಸಮುದಾಯಗಳ ಕದಲುವಿಕೆ ಇದು.

ಹಿಂದೂತ್ವವಾದಿ ಬಿಜೆಪಿಗಳು ತಾವಾಗಿಯೇ ತಂದುಕೊಳ್ಳುತ್ತಿರುವ ಆಪತ್ತು ಕೂಡ. ಹಾಲಿ ಮುಖ್ಯಮಂತ್ರಿ ಯಡಿಯೂರಪ್ಪನವರ ಸರ್ಕಾರದಲ್ಲಿ ಬ್ರಾಹ್ಮಣಶಾಹಿಗಳು ಮತ್ತು ಬಣಜಿಗ ಲಿಂಗಾಯತರು ಮಿಲಾಕತ್ ಆಗಿ ಅಧಿಕಾರ-ದುಡ್ಡು ಲೂಟಿ ಹೊಡೆಯುತ್ತಿರುವುದು ಇನ್ನುಳಿದ ಜಾತಿ ಜನಾಂಗಗಳ ಕಣ್ಣು ಕೆಂಪಗೆ ಮಾಡಿದೆ. ಈ ಮೇಲ್ಜಾತಿಗಳವರ ದಬ್ಬಾಳಿಕೆ ಅಟ್ಟಹಾಸಗಳನ್ನು ನೋಡಿನೋಡಿ ರೊಚ್ಚಿಗೆದ್ದಿರುವ ಇತರ ಜಾತಿಗಳು ಒಂದೋ ಕಾಂಗ್ರೆಸ್ ಇಲ್ಲಾ ಜೆಡಿಎಸ್ ಕಡೆಗೆ ಧ್ರುವೀಕರಣಗೊಳ್ಳುತ್ತಿವೆ.

1971ರಲ್ಲಿ ದೇವರಾಜ ಅರಸುರವರು ಮೊಟ್ಟಮೊದಲ ಬಾರಿಗೆ ಅವತ್ತಿನ ಲಿಂಗಾಯತರ ಅಟ್ಟಹಾಸದ ವಿರುದ್ಧ ಪ್ರಬಲವಾದ ಪ್ರತಿರೋಧ ತೋರಿ ಸದೆಬಡಿದಿದ್ದರು. ಅವತ್ತು ರಾಜ್ಯದ ಲಿಂಗಾಯತ ನಾಯಕರ ಪೈಕಿ ಬಹುತೇಕರು ಸಂಸ್ಥಾ ಕಾಂಗ್ರೆಸ್ ಸೇರಿ ತಮ್ಮ ಮೇಲ್ವಾಳಿಕೆ ಉಳಿಸಿಕೊಳ್ಳಲು ಪ್ರಯತ್ನಿಸಿದರಾದರೂ ಎಲ್ಲರೂ ಸೋತು ಮೂಲೆಗುಂಪಾಗಿದ್ದರು, ಅದಾದನಂತರ ಲಿಂಗಾಯತರ ವೀರೇಂದ್ರ ಪಾಟೀಲ್ ಮುಖ್ಯಮಂತ್ರಿಯಾಗಿದ್ದರಾದರೂ ಅವರು ಸೌಮ್ಯವ್ಯಕ್ತಿಯಾಗಿದ್ದರು. ಜಾತಿಭಾವನೆ ಕೆರಳಿಸದೆ ಮೇಲ್ಜಾತಿ ಅಹಂಕಾರ ತೋರಿಸದೆ ಎಲ್ಲಾ ಜಾತಿ ಜನಾಂಗಗಳ ವಿಶ್ವಾಸ ಗಳಿಸಿದ್ದರು. ಚಿನ್ನಪ್ಪರೆಡ್ಡಿ ಆಯೋಗದ ಶಿಫಾರಸ್ಸುಗಳು ಹಿಂದುಳಿದ ವರ್ಗಗಳ ಪರ ಇದೆಯೆಂದು ತಿಳಿದಿದ್ದರೂ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅವರ ಪರ ನಿಂತಿದ್ದರು. ಆಗಿನ ಲಿಂಗಾಯತರಲ್ಲಿ ಇವತ್ತಿನ ರೀತಿ ಆಕ್ರಮಣಕಾರಿ ಮನೋಭಾವವಾಗಲೀ, ಅನ್ಯರನ್ನು ತುಳಿದು ಮೆರೆಯಬೇಕೆಂಬ ಹಪಾಹಪಿಯಾಗಲಿ ಇರಲಿಲ್ಲ.

ಆದರೀಗ ಏನಾಗಿದೆ ನೋಡಿ.

ಯಡಿಯೂರಪ್ಪ ಸಿ.ಎಂ. ಆದ ತಕ್ಷಣ ಬಣಜಿಗ ಲಿಂಗಾಯತರೆಲ್ಲಾ ಇಡೀ ಕರ್ನಾಟಕಕ್ಕೆ ತಾನೇ ಪಾಳೇಗಾರರೆಂಬಂತೆ ಮೆರೆಯುತ್ತಿದ್ದಾರೆ. ಇದು ಲಿಂಗಾಯತರೇ ಆಗಿರುವ ಪಂಚಮಸಾಲಿ, ಸಾದರು, ನೊಣಬರು, ಗೌಡ ಲಿಂಗಾಯತರಿಗೆ ಕಿರಿಕಿರಿಯಾಗುತ್ತಿದೆ. ಇದಕ್ಕಿಂತ ಮುಖ್ಯವಾಗಿ ಒಕ್ಕಲಿಗರು, ಕುರುಬರು, ಹೊಲೆಯ-ಮಾದಿಗ, ಗೊಲ್ಲ, ಬಂಟ, ಬಿಲ್ಲವ, ಈಡಿಗ, ನಾಯಕ ಜಾತಿಗಳ ಜನರಲ್ಲಿ ಅಸಹನೆ, ಆತಂಕದ ಭಾವನೆ ಮೂಡಿಸುತ್ತಿದೆ. ಬ್ರಾಹ್ಮಣರ ಆತ್ಮವು ಬಣಜಿಗ ಲಿಂಗಾಯತರ ತಲೆ -ದೇಹದೊಂದಿಗೆ ಕ್ಲೋನಿಂಗ್ ಆಗಿ ಅಧಿಕಾರ ನಡೆಸುತ್ತಿರುವಂತೆ ಇನ್ನಿತರ ಜಾತಿ ಸಮುದಾಯ ಭಾವಿಸಿದೆ.

ಇದರಿಂದಾಗಿ ಕರ್ನಾಟಕ ಸಾಮಾಜಿಕ ಬದುಕಿನಲ್ಲಿ ಹೊಸ ಜಾತಿ ಸಮೀಕರಣ ಏರ್ಪಡುತ್ತಿವೆ. ಅದು ನ್ಯಾಚುರಲ್ ಆಗಿ ಬ್ರಾಹ್ಮಣ-ಲಿಂಗಾಯತರ ವಿರುದ್ಧ ಸದೃಢೀಕರಣಗೊಳ್ಳುತ್ತಿದೆ. ಈ ಕುರಿತ ಒಂದು ವಿಶ್ಲೇಷಣೆ ಇಲ್ಲಿದೆ.

ಬಿಜೆಪಿ ವಿರುದ್ಧ ಪಂಚಮಸಾಲಿ-ಸಾದರ ಗಾಣಿಗರ ಬಂಡಾಯ!

ಬಿಜೆಪಿಯ ವಿರುದ್ಧ ಇಂತಹದ್ದೊಂದು ಬಂಡಾಯ ಹೂಡದೇ ಪಂಚಮಸಾಲಿಗಳಿಗಾಗಲಿ, ಸಾದರಿಗಾಗಲಿ ಬೇರೆ ಮಾರ್ಗವಾದರೂ ಎಲ್ಲಿತ್ತು?

ಕರ್ನಾಟಕದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿದ ಜಾತಿ ಎಂದರೆ ಲಿಂಗಾಯತರು. ಆರು ಕೋಟಿಯಿರುವ ರಾಜ್ಯದ ಜನಸಂಖ್ಯೆಯಲ್ಲಿ ಎರಡು ಕೋಟಿಯಷ್ಟು ಲಿಂಗಾಯತರೇ ಇದ್ದಾರೆ. ಲಿಂಗಾಯತ ಜಾತಿ ಎಂಬುದು ಒಂದೇ ಜಾತಿಯಿಂದ ಕೂಡಿದ ಏಕರೂಪಿ ಸಮುದಾಯವೇನಲ್ಲ, ಅದರೊಳಗಡೆಯೇ ಸುಮಾರು 36 ಉಪಪಂಗಡಗಳಿವೆ. ಅವುಗಳಲ್ಲಿ ಅತಿದೊಡ್ಡ ಉಪಪಂಗಡ ಎಂದರೆ ಪಂಚಮಸಾಲಿ. ಎರಡು ಕೋಟಿಯಷ್ಟು ಲಿಂಗಾಯತರಲ್ಲಿ ಪಂಚಮಸಾಲಿಗಳ ಸಂಖ್ಯೆ ಸುಮಾರು 75 ಲಕ್ಷ. ಇನ್ನು 50 ಲಕ್ಷ ಜನಸಂಖ್ಯೆಯಿರುವ ಸಾದರು ಎರಡನೇ ಸ್ಥಾನದಲ್ಲೂ ಹಾಗೂ ಸುಮಾರು 35 ಲಕ್ಷದಷ್ಟಿರುವ ಗಾಣಿಗರು ಮೂರನೇ ಸ್ಥಾನದಲ್ಲೂ ಇದ್ದಾರೆ.



ಅವರ ದುರಂತ ನೋಡಿ. ಸಂಖ್ಯಾತ್ಮಕವಾಗಿ ಇಷ್ಟೊಂದು ಪ್ರಬಲರಾಗಿರುವ ಪಂಚಮಸಾಲಿಗಳು, ಸಾದರು, ಗಾಣಿಗರು ಎಂದೂ ಅಧಿಕಾರಕ್ಕೇರದಂತೆ ಕೇವಲ 15 ಲಕ್ಷದಷ್ಟಿರುವ ಬಣಜಿಗ ಶೆಟ್ಟರು ವ್ಯವಸ್ಥಿತವಾಗಿ ಸಂಚು ನಡೆಸುತ್ತಾ ಬಂದಿದ್ದಾರೆ. ಪರಿಣಾಮವಾಗಿ ದಶಕಗಳಿಂದ ಬಣಜಿಗ ಶೆಟ್ಟರ ದೌರ್ಜನ್ಯ, ಶೋಷಣೆ, ಅವಮಾನಗಳನ್ನು ಸಹಿಸುವ ದೌರ್ಭಾಗ್ಯ ಇತರೆ ಲಿಂಗಾಯತ ಉಪಜಾತಿಯವರದ್ದಾಗಿದೆ.

ನಿಮಗೆ ನೆನಪಿರಬಹುದು. ಕೊಟ್ಟ ಮಾತಿನಂತೆ ಜೆಡಿಎಸ್ ಪಕ್ಷವು ಬಿಜೆಪಿಗೆ ಅಧಿಕಾರ ಹಸ್ತಾಂತರಿಸಲಿಲ್ಲ, ಇದರಿಂದ ಮುಖ್ಯಮಂತ್ರಿಯಾಗಿ ಅಧಿಕಾರ ಅನುಭವಿಸಬೇಕಿದ್ದ ತನ್ನನ್ನು ಅಧಿಕಾರದಿಂದ ಕೆಳಗಿಳಿಸಿ ಅವಮಾನ ಮಾಡಿದರು ಎಂದು ಬಿ.ಎಸ್.ಯಡಿಯೂರಪ್ಪನೆಂಬ ಲಿಂಗಾಯತ ಹೋದಲ್ಲಿ, ಬಂದಲ್ಲಿ ಅತ್ತೂ ಕರೆದು ರಾಜ್ಯಾದ್ಯಂತ ದೊಡ್ಡ ಹುಯಿಲೆಬ್ಬಿಸಿಬಿಟ್ಟರು. ಸಹಜವಾಗಿ ಇದು ಲಿಂಗಾಯತರ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿತ್ತು, ತಮ್ಮ ಜಾತಿಯವನೊಬ್ಬನನ್ನು ಅಧಿಕಾರದಿಂದ ಕೆಳಗಿಳಿಸಿದ್ದು ಕೇವಲ ಯಡಿಯೂರಪ್ಪನಿಗೆ ಮಾಡಿದ ಅವಮಾನವಲ್ಲ, ಇಡೀ ಲಿಂಗಾಯತರಿಗೆ ಮಾಡಿದ ಅವಮಾನ ಎಂಬಂತೆ ಲಿಂಗಾಯತರೆಲ್ಲಾ ಭಾವುಕರಾದರು. ವಿಧಾನಸಭೆ ವಿಸರ್ಜನೆಯಾಗಿ ಮತ್ತೆ ಚುನಾವಣೆಗಳು ಘೋಷಣೆಯಾದಾಗ ಮಾತಿಗೆ ತಪ್ಪಿದ ಜೆಡಿಎಸ್‌ಗೆ ಪಾಠ ಕಲಿಸಿ ತಮ್ಮ ಜಾತಿಯವನೊಬ್ಬನನ್ನು ಮತ್ತೆ ಮುಖ್ಯಮಂತ್ರಿ ಮಾಡಿಯೇ ತೀರಬೇಕೆಂದು ಇಡೀ ಲಿಂಗಾಯತ ಸಮುದಾಯ ಪಣತೊಟ್ಟಿತ್ತು. ಯಡಿಯೂರಪ್ಪನವರನ್ನು ಈ ಒಂದೇ ಉದ್ದೇಶಕ್ಕಾಗಿ ಲಿಂಗಾಯತರೊಳಗಿರುವ ಪಂಚಮಸಾಲಿಗಳು, ಸಾದರು, ಗಾಣಿಗರು ತಮ್ಮ ಮೇಲೆ ತಮ್ಮದೇ ಜಾತಿಯ ಇನ್ನೊಂದು ಒಳಪಂಗಡವಾದ ಬಣಜಿಗರು ಮಾಡುತ್ತಿರುವ ದೌರ್ಜನ್ಯ ಅವಮಾನಗಳನ್ನೆಲ್ಲಾ ಮರೆತು, ತಮ್ಮ ನಡುವಿನ ಭಿನ್ನಾಭಿಪ್ರಾಯ ಮತ್ತು ವಿರಸಗಳೆಲ್ಲವನ್ನೂ ಬದಿಗಿಟ್ಟು ಹೋರಾಡಿದ್ದರು. ಇದೇನು ಸಾಮಾನ್ಯ ನಿರ್ಧಾರವಾಗಿರಲಿಲ್ಲ, ಚಾರಿತ್ರಿಕವಾಗಿ ನೂರಾರು ವರ್ಷಗಳಿಂದ ಬಣಜಿಗ ಶೆಟ್ಟರು ತಮ್ಮ ಮೇಲೆ ಹೇಳತೀರದ ದೌರ್ಜನ್ಯ ನಡೆಸಿದ್ದರೂ, ತಮಗೆ ಮಾಡಬಾರದ ಅಪಮಾನ ಮಾಡಿದ್ದರೂ ಅದನ್ನೆಲ್ಲಾ ಯಡಿಯೂರಪ್ಪನಿಗಾಗಿ ಅವರು ಮರೆತಿದ್ದರು. ಪ್ರಾಯಶಃ ಲಿಂಗಾಯತ ಸಮುದಾಯದ ಚರಿತ್ರೆಯಲ್ಲಿಯೇ ಅದರ ಒಳಪಂಗಡಗಳೆಲ್ಲಾ ಇಷ್ಟೊಂದು ಒಗ್ಗಟ್ಟು ಪ್ರದರ್ಶಿಸಿದ್ದು ಇದೇ ಮೊದಲಿರಬೇಕು. ಏಕೆಂದರೆ, ಚುನಾವಣೆ ಅವರಿಗೆ ಒಂದು ಸಾಮಾನ್ಯ ರಾಜಕೀಯ ಮಾತ್ರವಾಗಿರಲಿಲ್ಲ; ಸ್ವಾಭಿಮಾನದ ಪ್ರಶ್ನೆಯಾಗಿತ್ತು; ತಮ್ಮ ಗುರಿ ಸಾಧನೆಯಲ್ಲಿ ಅವರು ಕೊನೆಗೂ ಯಶಸ್ವಿಯಾದರು. ಬಿ.ಎಸ್.ಯಡಿಯೂರಪ್ಪ ಎಂಬ ಲಿಂಗಾವಂತ ಮುಖ್ಯಮಂತ್ರಿಯಾದರು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಲಿಂಗಾಯತರಲ್ಲೇ ಬಹುದೊಡ್ಡ ಒಳಪಂಗಡಗಳಾದ ಪಂಚಮಸಾಲಿಗಳು, ಸಾದರು, ಗಾಣಿಗರು ಬಿಜೆಪಿಯ ಬೆನ್ನಿಗೆ ನಿಂತಿದ್ದರಿಂದಲೇ ಬಣಜಿಗ ಲಿಂಗಾಯತ ಮುಖ್ಯಮಂತ್ರಿ ಆಗಿದ್ದಾರೆ, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೇರಿದೆ.


ಕನಿಷ್ಠ ಈ ಕಾರಣಕ್ಕಾದರೂ ಬಿಜೆಪಿ ಮತ್ತು ಯಡಿಯೂರಪ್ಪ ಪಂಚಮಸಾಲಿ, ಸಾದರ, ಗಾಣಿಗ ಲಿಂಗಾಯತರಿಗೆ ಚಿರಋಣಿಯಾಗಿರಬೇಕಿತ್ತು. ತನ್ನನ್ನು ಗೆಲ್ಲಿಸಿದ ಈ ಸಮುದಾಯಗಳ ಏಳಿಗೆಗಾಗಿ ಶ್ರಮಿಸಬೇಕಿತ್ತು. ಅವರ ಮೇಲೆ ಬೆರಳೆಣಿಕೆಯಷ್ಟಿರುವ ಬಣಜಿಗರು ಮಾಡುತ್ತಿರುವ ಅವಮಾನ, ದೌರ್ಜನ್ಯ ಶೋಷಣೆಗಳನ್ನು ನಿಲ್ಲಿಸುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಿತ್ತು. ಆದರೆ 'ಏರಿದ ಏಣಿಯನ್ನು ಒದೆಯುವ' ಛಾಯಮಾನದ ಬಿಜೆಪಿ ಅಧಿಕಾರಕ್ಕೇರಿದ ತಕ್ಷಣ ಈ ಮೂರೂ ಪಂಗಡಗಳನ್ನು ತುಳಿಯಲು ಪ್ರಾರಂಭಿಸಿತು. ಎಂದಿನಂತೆ ಬಣಜಿಗರಿಗೆ ಅತ್ಯುತ್ತಮ ಸ್ಥಾನಮಾನಗಳನ್ನು, ಅಧಿಕಾರಗಳನ್ನು, ಮಂತ್ರಿ ಪದವಿಗಳನ್ನು ನೀಡುತ್ತಾ ಮತ್ತೆ ಅವರನ್ನು ಪಂಚಮಸಾಲಿ, ಸಾದರ, ಗಾಣಿಗರ ತಲೆಯ ಮೇಲೆ ಕೂರಿಸಲಾರಂಭಿಸಿತು. ಇದು ರಂಜನೆಗಾಗಿ ಹೇಳುತ್ತಿರುವ ಕತೆಯೇನಲ್ಲ, ಕೆಲವು ಉದಾಹರಣೆಗಳನ್ನು ನೋಡಿ.

ಈ ಮೋಸ ನಿನ್ನೆಮೊನ್ನೆಯದಲ್ಲ!

ಲಿಂಗಾಯತರಲ್ಲಿ ಬಹುಸಂಖ್ಯಾತ ಪಂಚಮಸಾಲಿಗಳ ಮೇಲೆ, ಸಾದರ ಮೇಲೆ, ಗಾಣಿಗರ ಮೇಲೆ ಬೆರಳೆಣಿಕೆಯಷ್ಟಿರುವ ಬಣಜಿಗ ಶೆಟ್ಟರು ನಡೆಸುತ್ತಿರುವ ಈ ದೌರ್ಜನ್ಯ ನಿನ್ನೆ ಮೊನ್ನೆ ಪ್ರಾರಂಭವಾಗಿದ್ದೇನಲ್ಲ. ಚಾರಿತ್ರಿಕವಾಗಿ ನೋಡಿದರೆ 'ಹಿಂದೂಗಳೆಲ್ಲಾ ಒಂದು' ಎನ್ನುತ್ತಲೇ ಇಡೀ ಸಮಾಜದಲ್ಲಿ ಶೂದ್ರ, ದಲಿತ ಸಮುದಾಯಗಳನ್ನು ಬ್ರಾಹ್ಮಣಶಾಹಿಗಳು ಆಳುತ್ತಿರುವಂತೆಯೇ 'ಲಿಂಗಾಯತರೆಲ್ಲಾ ಒಂದು' ಎನ್ನುತ್ತಲೇ ಇಡೀ ಲಿಂಗಾಯತರನ್ನು ಬಣಜಿಗ ಶೆಟ್ಟರು ಆಳುತ್ತಿದ್ದಾರೆ. ಇಲ್ಲಿಯತನಕ ಕರ್ನಾಟಕದ ಮುಖ್ಯಮಂತ್ರಿಯಾದವರ ಪಟ್ಟಿಯನ್ನು ತೆರೆದು ನೋಡಿದರೂ ಬಣಜಿಗ ಶೆಟ್ಟರ ಪ್ರಾಬಲ್ಯ ಅರ್ಥವಾಗುತ್ತದೆ.


ಇದನ್ನೆಲ್ಲಾ ಅಭ್ಯಸಿಸಿದ ನಂತರ ಬಿಜೆಪಿಯು ಮೊದಲು ಬಣಜಿಗ ಸಮುದಾಯವನ್ನು ಗೆದ್ದುಕೊಂಡರೆ ಇಡೀ ಲಿಂಗಾಯತ ಸಮುದಾಯವು ತನ್ನ ತೆಕ್ಕೆಗೆ ಬರುತ್ತದೆಂದು ಅಂದಾಜಿಸಿ ಕಾರ್ಯೋನ್ಮುಖವಾಯಿತು. ಈ ತಂತ್ರಕ್ಕೆ ಮೊದಲು ಮಣೆ ಹಾಕಿದವರು ಜಗದೀಶ್ ಶೆಟ್ಟರ್ ಎಂಬ ಬಣಜಿಗ ಲಿಂಗವಂತ. 2004ರಿಂದಾಚೆಗೆ ಬಿಜೆಪಿಯಲ್ಲಿ ಧ್ರುವೀಕರಣ ಪ್ರಾರಂಭವಾಯಿತು. ಬಾದಾಮಿಯ ಬಣಜಿಗ ಎಂ.ಕೆ ಪಟ್ಟಣಶೆಟ್ಟಿಯೊಂದಿಗೆ ಗಾಣಿಗ ಗದ್ದಿಗೌಡ ಪ್ರವೇಶ ಮಾಡಿದ್ದೇ ತಡ, ಉತ್ತರ ಕರ್ನಾಟಕದ ಲಿಂಗಾಯತರು ಬಿಜೆಪಿಯತ್ತ ವಾಲತೊಡಗಿದರು. ಬಣಜಿಗ ಸಮುದಾಯದ ಮೇಲೆ ಬಿಜೆಪಿಗೆ ಕಂಟ್ರೋಲ್ ಸಿಕ್ಕದ್ದು ಇಡೀ ಲಿಂಗಾಯತ ಸಮುದಾಯದ ಮೇಲೆ ಕಂಟ್ರೋಲ್ ಸಿಕ್ಕಂತಾಗಿತ್ತು. ಅದನ್ನು ವ್ಯವಸ್ಥಿತವಾಗಿ ಉಳಿಸಿ, ಬೆಳೆಸಿಕೊಂಡು ಹೋಗುವುದಕ್ಕಾಗಿ ಬಣಜಿಗರಿಗೇ ಪ್ರಾಶಸ್ತ್ಯ ನೀಡುತ್ತಾ ಬರಲಾಯಿತು. ಇಲ್ಲಿಯ ತನಕ ಬಿಜೆಪಿಯ ಲಿಂಗಾಯತ ಕೋಟಾದಡಿಯಲ್ಲಿ ಅತೀ ಹೆಚ್ಚು ಟಿಕೆಟ್ ಪಡೆದವರು ಬಣಜಿಗರೆ. ಇದರ ಹಿಂದೆ ಜಗದೀಶ್ ಶೆಟ್ಟರ್‌ನ ಕೃಪೆ ಎಷ್ಟಿದೆಯೋ ಅದಕ್ಕಿಂತ ಹೆಚ್ಚಾಗಿ ಬಿಜೆಪಿಯ ಬ್ರಾಹ್ಮಣ್ಯದ ತಂತ್ರವಿದೆ.

ಹೀಗೆ ಬಣಜಿಗರು ತಶತಮಾನಗಳಿಂದಲೂ ಪಂಚಮಸಾಲಿಗಳ, ಸಾದರ ಮೇಲ ಆಧಿಪತ್ಯ ಸಾಧಿಸುವುದಕ್ಕೆ ಪಂಚಮಸಾಲಿಗಳ ಮೌಢ್ಯ ಒಂದು ಕಾರಣವಾದರೆ ಆ ಸಮುದಾಯದಲ್ಲಿ ಜಾಗೃತಿ ಮೂಡಿಸಬಲ್ಲ ನಾಯಕತ್ವ ಇಲ್ಲದಿರುವುದು ಇನ್ನೊಂದು ಕಾರಣ. ಈ ಕೊರತೆಯೇ ವಾಸ್ತವದಲ್ಲಿ ಅವರನ್ನು ಅನ್ಯಾಯದ ವಿರುದ್ಧ ಮೌನಿಗಳನ್ನಾಗಿ ಮಾಡಿದೆ. ಬಹಳ ದಿನಗಳ ನಂತರ ಶಿವಶಂಕ್ರಪ್ಪ ಕಾಶಪ್ಪನವರ್ ಎಂಬ ದಿಟ್ಟ, ಹುಂಬ ನಾಯಕನಾಗಿ ಅವತರಿಸಿದ ನಂತರವೇ ಪಂಚಮಸಾಲಿಗಳಿಗೆ ರಾಜಕೀಯವಾಗಿ ಒಂದಿಷ್ಟು ಚಾಲನೆ ಸಿಕ್ಕಿದ್ದು. ಕಾಶಪ್ಪನವರ್ ಪಂಚಮಸಾಲಿಗಳಿಗೆ ಆಗುತ್ತಿರುವ ಅನ್ಯಾಯಗಳ ವಿರುದ್ಧ ಪಂಚಮಸಾಲಿಗಳ ರಾಜ್ಯ ಸಂಘಟನೆಯನ್ನು ಕಟ್ಟಿ ಹೋರಾಡಿದ್ದರು. ಈಗ ಅವರೂ ಮರಣ ಹೊಂದಿದ್ದಾರೆ.



ಈ ಹಿಂದೆ ಭೀಮಣ್ಣ ಖಂಡ್ರೆ, ವಿಜಯ್ ಸಂಕೇಶ್ವರ್, ಜಗದೀಶ್ ಶೆಟ್ಟರ್‌ರಂಥ ಬಣಜಿಗರೆಲ್ಲಾ ಸೇರಿಕೊಂಡು ಎಲ್ಲಾ ಲಿಂಗಾಯತ ಒಳಪಂಗಡಗಳನ್ನೂ ಸೇರಿಸಿ ರಾಜ್ಯ ಮಟ್ಟದಲ್ಲಿ ಒಂದು ಐಕ್ಯ ಲಿಂಗಾಯತ ಸಂಘಟನೆಯನ್ನು ಕಟ್ಟಿ ಅದಕ್ಕೆ ಅಧ್ಯಕ್ಷರಿಂದ ಹಿಡಿದು ಜಿಲ್ಲಾ ಮಟ್ಟದ ನಾಯಕತ್ವದ ತನಕ ಎಲ್ಲಾ ಕಡೆಯೂ ಬಣಜಿಗ ಲಿಂಗಾಯತರನ್ನು ತುಂಬುವ ಪಿತೂರಿ ನಡೆಸಿದ್ದರು. ಆ ಸಮಯದಲ್ಲಿ ಇದೇ ಕಾಶಪ್ಪನವರ್ ತಾನೇ ಪಂಚಮಸಾಲಿಗಳ ಅಧ್ಯಕ್ಷನೆಂದು ಘೋಷಿಸಿಕೊಂಡು "ಕಿತ್ತೂರು ಚೆನ್ನಮ್ಮಳ ಸಂಸ್ಥಾನವನ್ನು ಹಾಳುಗೆಡವಿದ ಮಲ್ಲಪ್ಪ ಶೆಟ್ಟಿ ಕುಲದಿಂದ (ಬಣಜಿಗ) ದೂರ ಉಳಿಯಿರಿ, ಅವರೊಂದಿಗೆ ನೆಂಟಸ್ತಿಕೆ ಬೆಳೆಸಬೇಡಿ" ಎಂದು ಹೇಳುತ್ತಾ ರಾಜ್ಯಾದ್ಯಂತ ಪಂಚಮಸಾಲಿಗಳನ್ನು ಸಂಘಟಿಸಲು ಓಡಾಡಿದರು. ಪ್ರತೀ ಊರಿನಲ್ಲಿ ರಾಣಿ ಚೆನ್ನಮ್ಮಳ ಮಹಿಳಾ ಬ್ಯಾಂಕ್ ಸ್ಥಾಪಿಸುವ ಕೆಲಸಕ್ಕೂ ಕೈ ಹಾಕಿದರು. ಹೀಗೆ ಪಂಚಮಸಾಲಿಗಳನ್ನು ಸಂಘಟಿಸುತ್ತಲೇ ಕಾಶಪ್ಪನವರ್ ಮರಣ ಹೊಂದಿದರು.

ತದನಂತರದಲ್ಲಿ ಬಂದ ಜಮಖಂಡಿಯ ಸಿದ್ದು ಸವದಿ, ಬೆಳಗಿಯ ಮುರಗೇಶ್ ನಿರಾಣಿ, ಬಿಜಾಪುರದ ಬಸನಗೌಡ ಪಾಟೀಲ್ ಯತ್ನಾಳ್ ಮುಂತಾದ ಪಂಚಮಸಾಲಿಗರು ಕಾಶಪ್ಪನವರ ಕೆಲಸವನ್ನು ಮುಂದುವರೆಸದೇ ಬಿಜೆಪಿಯ ಕಮಲದ ಕೆಳಗೆ ಕೆಸರು ಮೆತ್ತಿಕೊಂಡು ಕುಳಿತುಬಿಟ್ಟರು. ಇವರ ನಿರ್ಲಕ್ಷ್ಯತನದ ಪರಿಣಾಮವಾಗಿ ಬಿಜೆಪಿಯಲ್ಲಿ ಬಣಜಿಗರ ಪ್ರಾಬಲ್ಯ ಹೆಚ್ಚಾಯಿತು. ಬಾದಾಮಿಯ ಪಟ್ಟಣಶೆಟ್ಟಿ, ಬಿಜಾಪುರದ ಅಪ್ಪು ಪಟ್ಟಣಶೆಟ್ಟಿ, ಸಿಂದಗಿಯ ಅಶೋಕ ಶಾಬಾದಿ, ರಾಯದುರ್ಗದ ಮಹಾದೇವ ಯಾದವಾಡ, ಬೈಲಹೊಂಗಲದ ಮೆಟಗುಡ್ಡ, ಕಿತ್ತೂರಿನ ಸುರೇಶ್ ಮಾರಿಹಾಳ. ಹಾನಗಲ್‌ನ ಸಿ.ಎಂ. ಉದಾಸಿ, ಶಿಗ್ಗಾಂವ್‌ನ ರಾಜಶೇಖರ್ ಸಿಂಧೂರ, ಬಾಲ್ಕಿಯ ಪ್ರಕಾಶ್ ಖಂಡ್ರೆ, ಹುಬ್ಬಳ್ಳಿಯ ಜಗದೀಶ್ ಶೆಟ್ಟರ್, ಅರಭಾವಿಯ ವಿ.ಎಸ್. ಕೌಜಲಗಿ, ಬೆಳಗಾಂವ್‌ನ ಸುರೇಶ್ ಅಂಗಡಿ – ಹೀಗೆ ಬಣಜಿಗ ಶೆಟ್ಟರ ಸಮುದಾಯದಿಂದ ಶಾಸಕರಾದವರ, ಮಂತ್ರಿಯಾದವರ, ಸಂಸದರಾದವರ ಸ್ಪೀಕರ್ ಆದವರ ಪಟ್ಟಿ ಬೆಳೆಯುತ್ತಲೇ ಹೋಯಿತು.



ಸಾದರಿಗೂ ಮೋಸ

ಇನ್ನು ಸಾದರ ಕತೆಯೂ ಇದಕ್ಕಿಂತ ಭಿನ್ನವಾಗಿಯೇನಿಲ್ಲ. ಸುಮಾರು ಐವತ್ತು ಲಕ್ಷದಷ್ಟಿರುವ ಸಾದರು ಲಿಂಗಾಯತರಲ್ಲೇ ಎರಡನೇ ಅತಿದೊಡ್ಡ ಒಳಪಂಗಡ. ಈ ಬಿಜೆಪಿಯನ್ನು ಅಧಿಕಾರಕ್ಕೇರಿಸುವಲ್ಲಿ, ಯಡಿಯೂರಪ್ಪನನ್ನು ಮುಖ್ಯಮಂತ್ರಿ ಮಾಡುವಲ್ಲಿ ಸಾದರ ಪಾತ್ರವೂ ದೊಡ್ಡದಿದೆ. ಸಾದರ ಸಮುದಾಯದ ಬೃಹನ್ಮಠವಾಗಿರುವ ಸಿರಿಗೆರೆ ...ಠ ಮತ್ತದರ ಮಠಾಧೀಶ ಜಗದ್ಗುರು ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಗಳು ಬಿಜೆಪಿಯ ಬೆನ್ನಿಗೆ ನಿಂತು ಬಿಜೆಪಿಯ ಕಾರ್ಯಕರ್ತರಂತೆ ಪ್ರಚಾರ ಮಾಡಿದ್ದರಿಂದ ...ೀ ಸಾದರ ಸಮುದಾಯವೂ ಸಾಲಿಡ್ಡಾಗಿ ಬಿಜೆಪಿಗೆ ಓಟು ಹಾಕಿತ್ತು. ಅದಕ್ಕಾದರೂ ಬಿಜೆಪಿ ಮತ್ತು ಯಡಿಯೂರಪ್ಪ ಸಾದರಿಗೆ ಚಿರಋಣಿಯಾಗಿರಬೇಕಿತ್ತು. ಆದರೆ ...ಾಡಿದ್ದೇನು? ಈಗಾಗಲೇ ಹೇಳಿರುವಂತೆ ಬಿಜೆಪಿಯದ್ದು ಏರಿದ ಏಣಿ ಒದೆಯುವ ಕೀಚಕ ಸಂಸ್ಕೃತಿ. ಅದರದ್ದು ಉಪಕಾರ ಮಾಡಿದವರ ಬೆನ್ನಿಗೆ ಚೂರಿ ಇರಿಯುವ ...ಯಮಾನ. ಪಂಚಮಸಾಲಿಗಳಿಗೆ ಮಾಡಿದ ಮೋಸವನ್ನೇ ಅದು ಸಾದರಿಗೂ ಮಾಡಿತು.

ಒಟ್ಟಾರೆ ಸಾದರ ಸಂಖ್ಯೆಯನ್ನು ಲೆಕ್ಕಹಾಕಿದರೆ ಯಡಿಯೂರಪ್ಪನವರ ಮಂತ್ರಿಮಂಡಲದಲ್ಲಿ ಕನಿಷ್ಠವೆಂದರೂ ಐದು ಖಾತೆಗಳನ್ನು ಸಾದರಿಗೆ ಕೊಡಬೇಕಿತ್ತು. ಆದರೆ ...ಟ್ಟಿದ್ದೆಷ್ಟು? ಕೇವಲ ಒಂದು, ಬಸವರಾಜ್ ಬೊಮ್ಮಾಯಿಗೆ ಮಾತ್ರ. ಅದೂ ದೊಡ್ಡ ಖಾತೆಯೇನಲ್ಲ, ನೀರಾವರಿಯಂಥ ಸಾಮಾನ್ಯ ಖಾತೆ. ನಂತರ ಲೋಕಸಭಾ ...ನಾವಣೆಯಲ್ಲಾದರೂ ಸಾದರಿಗೆ ಟಿಕೆಟ್ ಕೊಡಬಹುದೆಂದು ಪಂಚಮಸಾಲಿಗಳಂತೆ ಸಾದರೂ ಚಾತಕಪಕ್ಷಿಗಳಂತೆ ಕಾಯ್ದರು. ಆದರೆ ಅಲ್ಲೂ ಅವರಿಗೆ ಮೋಸ ಕಾದಿತ್ತು. ...ಪ್ಪಳದ ಟಿಕೆಟ್ಟನ್ನು ಶಿವರಾಮೇಗೌಡರಿಗೆ ಕೊಟ್ಟು ಪಂಚಮಸಾಲಿಗಳನ್ನು ಸುಮ್ಮನಿರಿಸಿದಂತೆ ದಾವಣಗೆರೆಯ ಟಿಕೆಟ್ಟನ್ನು ಜಿ.ಎಂ.ಸಿದ್ದೇಶ್‌ಗೆ ಕೊಟ್ಟು ಸಾದರ ಮೂಗಿಗೆ ...ಪ್ಪ ಸವರಿದರು. ಈಗ ಪ್ರಾಯಶಃ ಸಾದರಿಗೂ ಎಚ್ಚರವಾದಂತಿದೆ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಪ್ರತೀ ಬಾರಿ ಬಿಜೆಪಿ ಪರವಾಗಿ ಮಾತನಾಡುತ್ತಿದ್ದವರು ... ಬಾರಿ ಕಾಂಗ್ರೆಸ್ ಪರವಾಗಿ ಮಾತನಾಡಲಾರಂಭಿಸಿದ್ದಾರೆ. ಸಿರಿಗೆರೆಮಠ ಪ್ರತೀ ವರ್ಷ ನಡೆಸುವ 'ತರಳಬಾಳು ಹುಣ್ಣಿಮೆ' ಧಾರ್ಮಿಕ ಆಚರಣೆಯಲ್ಲಿ ಯಾವಾಗಲೂ ...ಜೆಪಿಗಳೇ ಮಿಂಚುತ್ತಿದ್ದರು. ಆದರೆ ಕಳೆದ ಆಚರಣೆಯಲ್ಲಿ ಕಾಂಗ್ರೆಸ್ ಲೋಕಸಭಾ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರೇ ಉಸ್ತುವಾರಿ ವಹಿಸಿಕೊಂಡಿದ್ದರು. ...ಯಶಃ ಇದು ಬಿಜೆಪಿ ಮತ್ತು ಯಡಿಯೂರಪ್ಪ ಸಾದರನ್ನು ಕಡೆಗಣಿಸುತ್ತಿರುವುದಕ್ಕೆ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಕೊಡುತ್ತಿರುವ ತಿರುಗೇಟು.


ಮತ್ತೊಂದೆಡೆ ಅತ್ತ ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲೂ ಸಾದರು ಬಂಡಾಯ ಎದ್ದಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶಿಕಾರಿಪುರದಲ್ಲಿ ಯಡಿಯೂರಪ್ಪನವರ ...ುದ್ಧ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪರಂತಹ ಹಳೆ ಹುಲಿ ಸ್ಪರ್ಧಿಸಿದ್ದರೂ 'ಯಡಿಯೂರಪ್ಪ ನಮ್ಮವನು' ಎಂದುಕೊಂಡು ಇಡೀ ಸಾದರ ಸಮುದಾಯ ...ದ್ದಿಗೆ ಓಟು ಗುದ್ದಿತ್ತು. ಬಿಜೆಪಿ ಮತ್ತು ಯಡಿಯೂರಪ್ಪ ಸಾದರಿಗೆ ಮಾಡಿದ ಮೋಸದಿಂದಾಗಿ ಈ ಬಾರಿ ಅವರೆಲ್ಲಾ ತಿರುಗಿಬದ್ದಿದ್ದಾರೆ. ಶಿವಮೊಗ್ಗ ಕ್ಷೇತ್ರದಿಂದ ...ಡಿಯೂರಪ್ಪನವರ ಮಗ ಬಿ.ವೈ.ರಾಘವೇಂದ್ರನೇ ಬಿಜೆಪಿಯ ಅಭ್ಯರ್ಥಿಯಾಗಿರುವುದರಿಂದ ತಮ್ಮ ಸಿಟ್ಟನ್ನೆಲ್ಲಾ ಅವನ ಮೇಲೆ ತೀರಿಸಿಕೊಳ್ಳುವುದಕ್ಕೆ ಒಂದು ಅವಕಾಶ ...ರೆತಂತಾಗಿದೆ. ಇದು ಕೇವಲ ಶಿವಮೊಗ್ಗ ಕ್ಷೇತ್ರದ ಕತೆಯಲ್ಲ, ದಾವಣಗೆರೆ, ಹಾವೇರಿ, ಬೆಳಗಾಂ ಮತ್ತು ಧಾರವಾಡ ಕ್ಷೇತ್ರಗಳಲ್ಲೂ ಸಾದರು ನಿರ್ಣಾಯಕರಾಗಿದ್ದಾರೆ. ...ಮ್ಮಂದ ಓಟು ಪಡೆದು ತಮಗೇ ಮೋಸ ಮಾಡುತ್ತಿರುವ ಬಿಜೆಪಿಗೆ ಪಾಠ ಕಲಿಸುವುದಕ್ಕೆ ಅವರೆಲ್ಲಾ ಸಿದ್ಧರಾಗಿದ್ದಾರೆ. ■

ಗಾಣಿಗರ ಕತೆಯೂ ಅದೇ!

ಸುಮಾರು ಮೂವತ್ತೈದು ಲಕ್ಷದಷ್ಟಿರುವ ಗಾಣಿಗರು ಲಿಂಗಾಯತರಲ್ಲಿ ಮೂರನೇ ಅತಿದೊಡ್ಡ ಒಳಪಂಗಡ. ಲಿಂಗಾಯತನೊಬ್ಬ ಮುಖ್ಯಮಂತ್ರಿಯಾಗಲಿ ಎಂದು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸಿದ್ದರಲ್ಲಿ ಗಾಣಿಗರ ಪಾತ್ರವೂ ದೊಡ್ಡದಿದೆ. ಆದರೆ ಪಂಚಮಸಾಲಿಗಳಿಗೆ, ಸಾದರಿಗೆ ಮಾಡಿರುವಂತೆ ಗಾಣಿಗರ ಬೆನ್ನಿಗೂ ಬಿಜೆಪಿ ಚೂರಿ ಹಾಕಿದೆ.



ಜನಸಂಖ್ಯೆಯನ್ನು ಲೆಕ್ಕ ಹಾಕಿದರೆ ಕಳೆದ ವಿಧಾನಸಭೆಯಲ್ಲಿ ಗಾಣಿಗರಿಗೆ ಏನಿಲ್ಲವೆಂದರೂ ಆರು ಟಿಕೆಟ್ಟುಗಳನ್ನು ಕೊಡಬೇಕಿತ್ತು. ಆದರೆ ಕೊಟ್ಟಿದ್ದು ಕೇವಲ ಮೂರು. ಲಕ್ಷ್ಮಣ್ ಸವದಿ, ಎಸ್.ಕೆ.ಬೆಳ್ಳುಬ್ಬಿ ಮತ್ತು ರಮೇಶ್ ಭೂಸನೂರು. ಆ ಮೂವರೂ ಗೆದ್ದುಬಂದರು. ಹೋಗಲಿ ಟಿಕೆಟ್ ಅಂತೂ ಕೊಡಲಿಲ್ಲ, ಗೆದ್ದು ಬಂದಾದ ಮೇಲೆ ಮೂವರಿಗೂ ಮಂತ್ರಿ ಪದವಿಯನ್ನಾದರೂ ಕೊಡಬೇಕಿತ್ತು. ಲಕ್ಷ್ಮಣ್ ಸವದಿಗೆ ಸಹಕಾರಿ ಇಲಾಖೆಯನ್ನೂ, ಎಸ್.ಕೆ.ಬೆಳ್ಳುಬ್ಬಿಗೆ ತೋಟಗಾರಿಕೆ ಇಲಾಖೆಯನ್ನು ಕೊಟ್ಟು ರಮೇಶ್ ಭೂಸನೂರರಿಗೆ ಕೈ ಎತ್ತಿದರು. ಆಮೇಲೆ, ಉಮೇಶ್ ಕತ್ತಿ ಎಂಬ ಬಣಜಿಗ ಬಿಜೆಪಿಗೆ ಎಂಟ್ರಿಯಾಗುತ್ತಿದ್ದಂತೆಯೇ ಸೌಮ್ಯ ರಾಜಕಾರಣಿಯಾಗಿದ್ದ ಬೆಳ್ಳುಬ್ಬಿಯವರಿಂದ ತೋಟಗಾರಿಕಾ ಇಲಾಖೆಯ ಮಂತ್ರಿಗಿರಿಯನ್ನು ಕಸಿದುಕೊಂಡು ಕತ್ತಿಯ ಹಾದಕ್ಕಿಟ್ಟರು.



ವಾಸ್ತವದಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಗಾಣಿಗರಿಗೆ ಕೇವಲ ಮೂರು ಟಿಕೆಟ್ ಕೊಟ್ಟಾಗಲೇ ಗಾಣಿಗರು ಬಿಜೆಪಿಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು. ನಂತರ ಬಣಜಿಗ ಉಮೇಶ್ ಕತ್ತಿಗಾಗಿ ಗಾಣಿಗ ಬೆಳ್ಳುಬ್ಬಿಯನ್ನು ಬಲಿಕೊಟ್ಟಾಗಲಂತೂ ಕತ್ತಿಮಸೆಯಲಾರಂಭಿಸಿದರು. ಆದರೆ, ಏನು ಮಾಡೋದು? ಅವರೆಲ್ಲಾ ಬಿಜೆಪಿಗೆ ಓಟು ಕೊಟ್ಟು ತಪ್ಪು ಮಾಡಿಯಾಗಿತ್ತು. ಕನಿಷ್ಠ ಬರುವ ಲೋಕಸಭಾ ಚುನಾವಣೆಯಲ್ಲಾದರೂ ತಮಗೆ ಸರಿಯಾದ ಪ್ರಾತಿನಿಧ್ಯ ದೊರೆಯುತ್ತೆ ಎಂದು ಪಂಚಮಸಾಲಿಗಳಂತೆ, ಸಾದರಂತೆ ಗಾಣಿಗರೂ ನಿರೀಕ್ಷೆಯಿಟ್ಟುಕೊಂಡಿದ್ದರು. ಆದರೆ ಆಗಿದ್ದೇನು? ಗದ್ದಿಗೌಡರಿಗೆ (ಬಾಗಲಕೋಟೆ) ಮಾತ್ರವೇ ಟಿಕೆಟ್ ಕೊಟ್ಟು ಮೂಗಿಗೆ ತುಪ್ಪ ಸವರಿದರು.

ಈಗ ಪ್ರಾಯಶಃ ಗಾಣಿಗರೂ ಎಚ್ಚೆತ್ತುಕೊಂಡಂತಿದೆ. ಬಿಜೆಪಿ ತಮಗೆ ಮಾಡಿರುವ ಅನ್ಯಾಯಕ್ಕೆ ತಕ್ಕ ಸೇಡು ತೀರಿಸಿಕೊಳ್ಳಲು ಈ ಲೋಕಸಭಾ ಚುನಾವಣೆ ಅವರಿಗೊಂದು ಅವಕಾಶವಾಗಿ ಬಂದಿದೆ. ಅದನ್ನವರು ಚೆನ್ನಾಗಿಯೇ ಬಳಸಿಕೊಳ್ಳಲಿದ್ದಾರೆ. "ಗಾಣಿಗರಿಗೆ ಅನ್ಯಾಯ ಮಾಡಿದ ಬಿಜೆಪಿಯನ್ನು ಸೋಲಿಸಿ" ಎಂದು ಆ ಸಮುದಾಯದ ನಾಯಕರು ಈಗಾಗಲೇ ತಮ್ಮ ಜಾತಿಯ ಜನರಿಗೆ ಫರ್ಮಾನು ಹೊರಡಿಸಿದ್ದಾರೆ. 'ಅಖಿಲ ಭಾರತ ಗಾಣಿಗ ಸಮಾಜ' ಎಂಬ ಗಾಣಿಗರ ಸಂಘಟನೆಯು ಇಲ್ಲಿಯತನಕ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಕೂಡ ಗಾಣಿಗನೇ ಎಂಬ ಭ್ರಮೆಯಲ್ಲಿ ಬಿಜೆಪಿ ಬೆಳ್ಳುಬ್ಬಿಗೆ ಮಾಡಿದ ಅನ್ಯಾಯವನ್ನು ನುಂಗಿಕೊಂಡಿತ್ತು. ಈಗ ಆ ಸಂಘಟನೆಯೊಳಗೂ ತಮ್ಮ ಸಮುದಾಯಕ್ಕೆ ಬಿಜೆಪಿ ಮಾಡುತ್ತಿರುವ ಅನ್ಯಾಯದ ವಿರುದ್ಧ ಬಂಡಾಯ ಭುಗಿಲೇಳುತ್ತಿದೆ. ■

ಪಂಚಮಸಾಲಿಗಳ ಬೆನ್ನಿಗೆ ಚೂರಿ



...ಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ...ಎಮ್ಮೆಲ್ಲೆಗಳಲ್ಲಿ 14 ಜನ ಪಂಚಮಸಾಲಿಗಳೆ. ಇಡೀ ...ನಸಭೆಯನ್ನು ಜಾಲಾಡಿ ನೋಡಿ. ಬೇರಾವ ...ದಿಂದಲೂ ಇಷ್ಟೊಂದು ಎಮ್ಮೆಲ್ಲೆಗಳು ಗೆದ್ದು ಬಂದಿರುವ ...ದಾಹರಣೆಗಳಿಲ್ಲ. ಈಗ ನ್ಯಾಯವಾಗಿ ನೋಡಿ. ಯಡಿಯೂರಪ್ಪ ...ಖ್ಯಮಂತ್ರಿಯಾಗಲಿ ಎಂಬ ಒಂದೇ ಕಾರಣಕ್ಕೆ ತಮ್ಮ ...ನ ದೌರ್ಜನ್ಯಗಳನ್ನೆಲ್ಲಾ ಮರೆತು ಬಿಜೆಪಿಗೆ ಸಾಲಿಡ್ಡಾಗಿ ... ಹಾಕಿದ್ದಕ್ಕಾಗಿ, ಚುನಾವಣೆಯಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ...ಲ್ಲೆಗಳು ಗೆದ್ದುಬಂದಿದ್ದಕ್ಕಾಗಿ ಪಂಚಮಸಾಲಿಗಳಿಗೆ ಏನಿಲ್ಲವೆಂದರೂ ... ಮಂತ್ರಿ ಪದವಿಗಳು ಸಿಗಬೇಕಿತ್ತು. ಆದರೆ, ಬಣಜಿಗ ಶೆಟ್ಟರ ...ಂಬೆಯಾಗಿರುವ ಬಿಜೆಪಿ ಮತ್ತು ಬಣಜಿಗ ಯಡಿಯೂರಪ್ಪ ಕೊಟ್ಟಿದ್ದೆಷ್ಟು ...? ಕೇವಲ ಒಂದೇ ಒಂದು! ಅದೂ ಮುರುಗೇಶ್ ನಿರಾಣಿ ಎಂಬ ...ತಿಭ್ರಷ್ಟನಿಗೆ!!

...ದರಿಂದ ಪಂಚಮಸಾಲಿ ಎಮ್ಮೆಲ್ಲೆಗಳಿಗೆ, ಆ ಪಂಗಡದ ನಾಯಕರಿಗೆ ... ಜನಸಾಮಾನ್ಯರಿಗೆ ನಿರಾಶೆ, ಬೇಸರವಾಗಿದ್ದು ನಿಜ. ಆದರೆ, ಇಂದಲ್ಲ ...ಬಿಜೆಪಿ ಈ ತಪ್ಪನ್ನು ತಿದ್ದಿಕೊಳ್ಳುತ್ತೆ ತಮಗೆ ಸೂಕ್ತ ಪ್ರಾತಿನಿಧ್ಯ ನೀಡುತ್ತೆ ... ಅವರು ಆಶಾಭಾವನೆ ಹೊಂದಿದ್ದರು. ಬರುವ ಲೋಕಸಭಾ ...ವಣೆಯಲ್ಲಾದರೂ ಬಿಜೆಪಿ ಪಂಚಮಸಾಲಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ... ಕೊಟ್ಟು ಆಗಿರುವ ತಪ್ಪನ್ನು ತಿದ್ದಿಕೊಳ್ಳುತ್ತದೆ ಎಂದು ನಿರೀಕ್ಷಿಸಿದ್ದರು. ... ಆಗಿದ್ದೇನು? ಒಬ್ಬನೇ ಒಬ್ಬ ಪಂಚಮಸಾಲಿಗೆ ಟಿಕೆಟ್ ಕೊಡಲಿಲ್ಲ. ಈ ...ವ ಅವಮಾನವನ್ನು ಪ್ರಾಯಶಃ ಪಂಚಮಸಾಲಿಗಳಿಗೆ ಹಿಂದೆಂದೂ ... ಮಾಡಿರಲಿಲ್ಲವೇನೋ? ಯಡ್ಡಿ ಮತ್ತು ಮತ್ತು ಬಿಜೆಪಿ ಅದನ್ನು ...ದರು.

ಪಂಚಮಸಾಲಿಗಳು ಎಷ್ಟೂ ಅಂತ ಸಹಿಸಿಕೊಂಡಿರುತ್ತಾರೆ. ಅವರಿಗಿದ್ದ ಕೊನೆಯ ಒಂದು ನಿರೀಕ್ಷೆಯನ್ನೂ ಯಡ್ಡಿ ಈ ರೀತಿ ಕಾಲಕಸದಂತೆ ತುಳಿದ ಮೇಲಂತೂ ಅವರ ಸಹನೆಯ ಕಟ್ಟೆ ಒಡೆದುಹೋಯಿತು. ಬಿಜೆಪಿ ಅವರನ್ನು ಟಿಶ್ಯೂ ಪೇಪರ್‌ನಂತೆ ಬಳಸಿ ಬಿಸಾಡುತ್ತಿರುವುದರ ವಿರುದ್ಧ ಎಲ್ಲಾ ಪಂಚಮಸಾಲಿ ನಾಯಕರು ಬಂಡಾಯವೆದ್ದರು. ಅದರಲ್ಲೂ ವಿಶೇಷವಾಗಿ ಪಂಚಮಸಾಲಿ ಸಮುದಾಯದ ಬೃಹನ್ಮಠ ಕೂಡಲಸಂಗಮದ ಪಂಚಮಸಾಲಿ ಪೀಠದ ಜಯಬಸವ ಮೃತ್ಯುಂಜಯ ಸ್ವಾಮಿಗಳು ಬಹಿರಂಗವಾಗಿ ಬಂಡಾಯವೆದ್ದ ಮೇಲೆ ಕೊಪ್ಪಳ ಲೋಕಸಭಾ ಕ್ಷೇತ್ರದ ಟಿಕೆಟ್‌ಅನ್ನು ಪಂಚಮಸಾಲಿ ಸಮುದಾಯದ ಶಿವರಾಮೇಗೌಡರಿಗೆ ಕೊಟ್ಟರು. ಇದು ಮೂಗಿಗೆ ತುಪ್ಪ ಸವರುವುದಕ್ಕೆ ಮಾಡಿದ ತಂತ್ರವಲ್ಲದೇ ಮತ್ತೇನಲ್ಲ. ಅದೇ ಸಮಯದಲ್ಲಿ ಬೆರಳೆಣಿಕೆಯಷ್ಟಿರುವ ಬಣಜಿಗ ಶೆಟ್ಟರಿಗೆ ಏಳು ಲೋಕಸಭಾ ಟಿಕೆಟ್ ಕೊಟ್ಟಿದ್ದಾರೆ!

ಇದನ್ನೆಲ್ಲಾ ಅರ್ಥ ಮಾಡಿಕೊಳ್ಳದಷ್ಟು ದಡ್ಡರಲ್ಲ ಪಂಚಮಸಾಲಿಗಳು. ಬಿಜೆಪಿಯಲ್ಲಿ ಪಂಚಮಸಾಲಿಗಳನ್ನು ಎಷ್ಟು ಹೀನಾಯವಾಗಿ ನಡೆಸಿಕೊಳ್ಳಲಾಗುತ್ತದೆ ಎಂಬುದನ್ನು ಖುದ್ದು ಅನುಭವಿಸಿದ ಮಂಜುನಾಥ ಕುನ್ನೂರ ಈಗ ಬಿಜೆಪಿ ಬಿಟ್ಟು ಕಾಂಗ್ರೆಸ್ಸಿಗೆ ಮರಳಿ ಧಾರವಾಡ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಇನ್ನು ಬಸನಗೌಡ ಯತ್ನಾಳ್, ಶಿವಣ್ಣರಂಥವರು ಬಿಜೆಪಿಯೊಳಗೇ ಇದ್ದುಕೊಂಡು ಬಣಜಿಗ ಶೆಟ್ಟರ ದೌರ್ಜನ್ಯದ ವಿರುದ್ಧ ಗುದ್ದಾಡುತ್ತಿದ್ದಾರೆ. ಆದರೆ ಅವರ ಹೋರಾಟಕ್ಕೆ ಇಲ್ಲಿಯತನಕ ಕವಡೆ ಕಾಸಿನ ಕಿಮ್ಮತ್ತು ಸಿಕ್ಕಿಲ್ಲ. ■



...ಣಜಿಗ ಶೆಟ್ಟರಿಗೆ ರತ್ನಗಂಬಳಿ!

...ನ್ನೊಂದೆಡೆ ನೋಡಿ. ರಾಜ್ಯದಲ್ಲಿ ಬಣಜಿಗ ಶೆಟ್ಟರ ...ಂಖ್ಯೆಯಿರುವುದು ಕೇವಲ 15 ಲಕ್ಷ. ಅವರ ...ಖ್ಯೆಗನುಗುಣವಾಗಿ ನೋಡುವುದಾದರೆ ಕಳೆದ ...ಸಭಾ ಚುನಾವಣೆಯಲ್ಲಿ ಅವರಿಗೆ ಹೆಚ್ಚೆಂದರೆ ...ದು ಟಿಕೆಟ್ ಕೊಡಬೇಕಿತ್ತು. ಆದರೆ, ಬಿಜೆಪಿ ಅವರಿಗೆ ... ಟಿಕೆಟ್ಟುಗಳನ್ನು ಕೊಟ್ಟಿತ್ತು! ಅದರಲ್ಲಿ 11 ಜನ ... ಬಂದರು. ಅವರಲ್ಲಿ ಸಿ.ಎಂ.ಉದಾಸಿ, ಉಮೇಶ್ ...ನ್ನು ಮಿನಿಸ್ಟ್ರು ಮಾಡಿದರೆ ಜಗದೀಶ್ ಶೆಟ್ಟರ್‌ನನ್ನು ... ಮಾಡಿದರು. ನೋಡಿರಲಿ, ಅತೀ ಹೆಚ್ಚು ಜನಸಂಖ್ಯೆ ...ದಿರುವ ಪಂಚಮಸಾಲಿಗಳಿಗೆ, ಸಾದರಿಗೆ, ...ಗರಿಗೆ ಕೇವಲ ಒಂದೊಂದು ಮಂತ್ರಿಗಿರಿ ...ದ್ದಾರೆ.

ಈಗ ನಡೆಯುತ್ತಿರುವ ಲೋಕಸಭಾ ಚುನಾವಣೆಯಲ್ಲೂ ಬಣಜಿಗ ಶೆಟ್ಟರಿಗೆ ರತ್ನಗಂಬಳಿ ಹಾಸಲಾಗಿದೆ. ಅವರ ಜನಸಂಖ್ಯೆಯನ್ನು ಲೆಕ್ಕ ಹಾಕಿದರೆ ಹೆಚ್ಚೆಂದರೆ ಒಂದೇ ಒಂದು ಟಿಕೆಟ್ ಕೊಡಬೇಕಿತ್ತು. ಆದರೆ ಐದು ಜನರಿಗೆ ಕೊಟ್ಟಿದ್ದಾರೆ - ಹಾವೇರಿಯಲ್ಲಿ ಕುತಂತ್ರಿ ಸಿ.ಎಂ.ಉದಾಸಿಯ ಪುತ್ರ ಶಿವಕುಮಾರ್ ಉದಾಸಿ, ಬೆಳಗಾವಿಯಲ್ಲಿ ಕನ್ನಡ ದ್ರೋಹಿ ಸುರೇಶ್ ಅಂಗಡಿ, ಬೀದರ್‌ನಲ್ಲಿ ಅಮಾಯಕ ಬಡ ರೈತರನ್ನು ಗೋಳು ಹೊಯ್ದುಕೊಳ್ಳುತ್ತಿರುವ ಗುರುಪಾದಪ್ಪ ನಾಗಮಾರಪಳ್ಳಿ, ಆಪರೇಷನ್ ಕಮಲದಲ್ಲಿ ತನ್ನನ್ನೇ ತರಕಾರಿಯಂತೆ ಮಾರಿಕೊಂಡ ರಮೇಶ್ ಕತ್ತಿ ಮತ್ತು ಶಿಕಾರಿಪುರ ಕೊಳ್ಳೆ ಹೊಡೆದ ಯಡ್ಡಿ ಪುತ್ರ ರಾಘವೇಂದ್ರ.

ಪಂಚಮಸಾಲಿಗಳು, ಸಾದರು, ಗಾಣಿಗರು ಎಲ್ಲಿಯ ತನಕ ಅಂತ ಬಣಜಿಗರ ಈ ದೌರ್ಜನ್ಯ ಅವಮಾನ, ಅನ್ಯಾಯವನ್ನು ಸಹಿಸಿಕೊಂಡಿರುತ್ತಾರೆ? ಈಗ ಅವರಲ್ಲಿಯೂ ಒಂದಿಷ್ಟು ಜಾಗೃತಿ ಮೂಡಿದೆ. ಹಣ ಕೊಡೋದಕ್ಕೆ, ಪಲ್ಲಕ್ಕಿ ಹೊರೋದಕ್ಕೆ, ಚಾಕರಿ ಮಾಡುವುದಕ್ಕೆ, ಓಟು ಹಾಕುವುದಕ್ಕೆ - ಹೀಗೆ ಎಲ್ಲದಕ್ಕೂ ಪಂಚಮಸಾಲಿಗಳು ಮತ್ತು ಸಾದರು ಬೇಕೆ ಬೇಕು. ಆದರೆ ಅಧಿಕಾರಕ್ಕೆ ಮಾತ್ರ ಬೇಡ ಎಂದರೆ ಹೇಗೆ ಎಂಬ ಪ್ರಶ್ನೆ ಅವರನ್ನೂ ಈಗ ಕಾಡುತ್ತಿದೆ. ತಾವು ಬಿಜೆಪಿಯಲ್ಲಿ ಮುಂದುವರೆದರೆ ಬಣಜಿಗರು ನಿರಂತರವಾಗಿ ಅನ್ಯಾಯ ಮಾಡುತ್ತಲೇ ಇರುತ್ತಾರೆ, ತಮ್ಮ ರಾಜಕೀಯ ಭವಿಷ್ಯ ಕತ್ತಲಾಗುತ್ತದೆ ಎಂದರಿತು ಪಂಚಮಸಾಲಿ ಮತ್ತು ಸಾದರ ನಾಯಕರು ಸಾಮೂಹಿಕವಾಗಿ ಜೆಡಿಎಸ್, ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ. ಈಗಾಗಲೇ ಮಂಜುನಾಥ ಕುನ್ನೂರ [illegible] ಕಾಂಗ್ರೆಸ್ ಪಾಳೆಯ ಸೇರಿ ಅವರಿಗೆಲ್ಲಾ ದಾರಿ ತೋರಿಸಿಯಾಗಿದೆ. ಬಸನಗೌಡ ಪಾಟೀಲ್ ಯತ್ನಾಳ್ ಬಿಜೆಪಿಯೊಳಗೇ ಗುದ್ದಾಡುತ್ತಿದ್ದಾರಾದರೂ ಅವರ ಮಾತಿಗೆ ಕವಡೆ ಕಾಸಿನ ಕಿಮ್ಮತ್ತು ಸಿಗುತ್ತಿಲ್ಲವಾದ್ದರಿಂದ ಅವರೂ ಮುಂದೊಂದು ದಿನ ಅಲ್ಲಿಂದ ಹೊರನಡೆಯಲಿದ್ದಾರೆ. ಸಿರಿಗೆರೆಯ ಶಿವಮೂರ್ತಿ ಶಿವಾಚಾರ್ಯ ಎಂಬ ಸಾದರ ಸ್ವಾಮಿ, ಜಯಬಸವ ಮೃತ್ಯುಂಜಯ ಎಂಬ ಪಂಚಮಸಾಲಿ ಸ್ವಾಮಿಗಳಿಗೂ ಬಿಜೆಪಿ ತಮ್ಮ ಸಮುದಾಯಗಳಿಗೆ ಮಾಡುತ್ತಿರುವ ಅನ್ಯಾಯದ ಅರಿವಾಗಿದ್ದರಿಂದ ಅವರೂ ದೂರ ಸರಿಯುತ್ತಿದ್ದಾರೆ. ಇಲ್ಲಿಯ ತನಕ ಬಿಜೆಪಿಯೆಂದರೆ ಲಿಂಗಾಯತರ ಪಕ್ಷ ಎಂದು ಬಿಂಬಿತವಾಗಿತ್ತು. ಈಗ ಅದು ಬಣಜಿಗರ ಪಕ್ಷ ಮಾತ್ರ ಎಂದು ಬಿಂಬಿತವಾಗುತ್ತಿದೆ. ಇಡೀ ಕರ್ನಾಟಕದಲ್ಲಿ, ಅದರಲ್ಲೂ ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕದಲ್ಲಿ ಪಂಚಮಸಾಲಿಗಳು ಮತ್ತು ಸಾದರು ನಿರ್ಣಾಯಕರು. ಕಳೆದ ಬಾರಿ ಅವರು ಒಗ್ಗಟ್ಟಿನಿಂದ ಬಿಜೆಪಿಯ ಬೆನ್ನಿಗೆ ನಿಂತು, [illegible] ತಮ್ಮ ಬೆನ್ನಿಗೆ ಚೂರಿ ಇರಿಸಿಕೊಂಡಿದ್ದರು. ಈಗ ಅದೇ ಒಗ್ಗಟ್ಟಿನಿಂದ ಬಿಜೆಪಿಯನ್ನು ಮಣಿಸಲು ಮುಂದಾಗುತ್ತಿದ್ದಾರೆ. ಈ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೆಲಕಚ್ಚುವುದಕ್ಕೆ ಇದಕ್ಕಿಂತ ಜಾಸ್ತಿ ಬೇಕೆ? ■



ಬಿಜೆಪಿ ವಿರುದ್ಧ ಮಾದಿಗರ ಸೇಡು!

ಸುಮಾರು 85 ಲಕ್ಷದಷ್ಟು ಜನಸಂಖ್ಯೆ ಇರುವ ಮಾದಿಗ ಸಮುದಾಯ ಈ ಬಾರಿ ಬಿಜೆಪಿ ವಿರುದ್ಧ ನಿಂತಿದೆ.

ಒಳಮೀಸಲಾತಿ ವಿಚಾರದಲ್ಲಿ ನಂಬಿಕೆ ದ್ರೋಹ ಮಾಡಿದ್ದೇ ಇದಕ್ಕೆ ಪ್ರಮುಖ ಕಾರಣ. ಜೊತೆಗೆ ಬಿಜೆಪಿ ಅಂದರೆ ಬ್ರಾಹ್ಮಣಶಾಹಿ ಮೌಲ್ಯಗಳ ಪಕ್ಷ ಎಂಬುದೂ ಈ ಸಮುದಾಯದ ಹೋರಾಟನಿರತ ನಾಯಕತ್ವಕ್ಕೆ ಮನವರಿಕೆಯಾಗಿರುವುದೂ ಇನ್ನೊಂದು ಕಾರಣವಾಗಿದೆ.

ಕರ್ನಾಟಕದ ಸರಿಸುಮಾರು 130 ಅಸೆಂಬ್ಲಿ ಕ್ಷೇತ್ರಗಳಲ್ಲಿ ಇಪ್ಪತ್ತರಿಂದ ನಲ್ವತ್ತು ಸಾವಿರದಷ್ಟು ಮತದಾರರನ್ನು ಮಾದಿಗ ಸಮುದಾಯ ಹೊಂದಿದೆ. ಈ ಬಾರಿ ಹದಿನೇಳು ಪಾರ್ಲಿಮೆಂಟ್ ಕ್ಷೇತ್ರಗಳಲ್ಲಿ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ. ಬಿಜಾಪುರ, ಗುಲ್ಬರ್ಗಾ, ಬಾಗಲಕೋಟೆ, ಬೆಳಗಾಂ ಚಿಕ್ಕೋಡಿ, ಧಾರವಾಡ, ಹಾವೇರಿ, ಬಳ್ಳಾರಿ, ಶಿವಮೊಗ್ಗ, ರಾಯಚೂರಿನಲ್ಲಿ ಮಾದಿಗ ಸಂಘಟನೆಯು ಪ್ರಬಲವಾಗಿದೆ.

ಇಷ್ಟಕ್ಕೂ ಬಿಜೆಪಿ ವಿರುದ್ಧ ಮಾದಿಗರು ತಿರುಗಿ ಬೀಳಲು ಹಲವಾರು ಕಾರಣಗಳಿವೆ. ಒಳಮೀಸಲಾತಿ ವಿಚಾರ ಅದರಲ್ಲೊಂದು. 1999ರ ಸುಮಾರಿಗೆ ಪಕ್ಕದ ಆಂಧ್ರದಲ್ಲಿ ಮಾದಿಗರು ಒಳಮೀಸಲಾತಿಗೆ ಒತ್ತಾಯಿಸಿ ಹೋರಾಟ ಶುರು ಮಾಡಿದಾಗ ಕರ್ನಾಟಕದಲ್ಲೂ ಮಾದಿಗರು ಎಚ್ಚೆತ್ತಿದ್ದರು. ಮಾದಿಗ ಮೀಸಲಾತಿ ಹೋರಾಟ ಸಮಿತಿ ರಚಿಸಿಕೊಂಡು ಜನರನ್ನೂ ಸಂಘಟಿಸಿದರು. ಆದರೆ ಆಗ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ಮಾದಿಗರ ಬೇಡಿಕೆಗಳನ್ನು ನಿರ್ಲಕ್ಷಿಸಿಬಿಟ್ಟರು. ಇದರಿಂದ ಸಿಟ್ಟಿಗೆದ್ದು 2004ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಮಾದಿಗರು ಕಾಂಗ್ರೆಸ್ ವಿರುದ್ಧ ಕೆಲಸ ಮಾಡಿ ಸೋಲಿಸಿದರು.

ನಂತರ 2008ರಲ್ಲಂತೂ ನೇರವಾಗಿ ಬಿಜೆಪಿ ಪರ ನಿಲುವು ತಾಳಿದ್ದರು. 'ಹಿಂದಿನ ಮಾದಿಗರ ನೋವೇ ಮುಂದಿನ ಕಾಂಗ್ರೆಸ್‌ಗೆ ಸಾವು' ಎಂಬ ಮಾದಿಗರ ಘೋಷಣೆ ಕೆಲಸ ಮಾಡಿತ್ತು, ಕಾಂಗ್ರೆಸ್ ಮಣ್ಣುಮುಕ್ಕಿತ್ತು.

ಆದರೆ ಒಂದೇ ವರ್ಷದಲ್ಲಿ ಮತ್ತೆ ಪರಿಸ್ಥಿತಿ ಬದಲಾಗಿದೆ. ಯಡಿಯೂರಪ್ಪ ಒಳಮೀಸಲಾತಿಗೆ ಸಂಬಂಧಿಸಿದ ಆಯೋಗಕ್ಕೆ ಅನುದಾನ ನೀಡದೆ ವಂಚಿಸಿರುವುದು ಮಾದಿಗರ ಕೋಪಕ್ಕೆ ಕಾರಣವಾಗಿದೆ. ಇದರ ಜೊತೆಗೆ ಪರಿಶಿಷ್ಟಜಾತಿಯವರ ಪೈಕಿ ಕೇವಲ ಬೋವಿ ಹಾಗೂ ಲಂಬಾಣಿ ನಾಯಕರಿಗೆ ಮಾತ್ರ ಮಣೆ ಹಾಕುವ ಬಿಜೆಪಿಗಳ ಪಿತೂರಿ ಸಹ ಅವರನ್ನು ಕೆರಳಿಸಿದೆ. ಹಾಲಿ ಯಡ್ಡಿ ಸಂಪುಟದಲ್ಲಿರುವ ಅರವಿಂದ ಲಿಂಬಾವಳಿ, ಗೂಳಿಹಟ್ಟಿ ಶೇಖರ್, ವೆಂಕಟರಮಣಪ್ಪ, ಶಿವರಾಜ ತಂಗಡಗಿ ಪೈಕಿ ಯಾರೂ ಮಾದಿಗರಲ್ಲ.

ಇದರೊಂದಿಗೆ ಬಿಜೆಪಿಯೊಳಗೆ ಬ್ರಾಹ್ಮಣಶಾಹಿ, ಮನುವಾದಿ ಸಿದ್ಧಾಂತ ದಿನೇದಿನೇ ಜಾಸ್ತಿಯಾಗುತ್ತಿರುವುದೂ ಮಾದಿಗರಲ್ಲಿ ಭಯ ಹುಟ್ಟಿಸಿದೆ. ಇದೆಲ್ಲ ಸೇರಿಕೊಂಡು ಈ ಬಾರಿ ಕರ್ನಾಟಕದಾದ್ಯಂತ ಮಾದಿಗ ಜನಾಂಗದವರು ಬಿಜೆಪಿಯ ವಿರುದ್ಧ ಮತ ಚಲಾಯಿಸುವ ಪ್ರಚಾರ ಕಾರ್ಯ ನಡೆಸುತ್ತಿದ್ದಾರೆ. ಮಾದಿಗ ಸಂಘಟನೆಯ ರಾಜ್ಯ ನಾಯಕರಾದ ಎಸ್. ಮಾರೆಪ್ಪ ಶಿವಮೊಗ್ಗ ಕೇಶವಮೂರ್ತಿ, ಬೆಳಗಾವಿಯ ಎಂ.ವಿ. ಮೂಗನೂರ್ ಮುತ್ತಣ್ಣ ಬೆನ್ನೂರು ಇದೇ ಅಜೆಂಡಾದಂತೆ ರಾಜ್ಯಾದ್ಯಂತ ಪ್ರಚಾರ ಕಾರ್ಯ ನಡೆಸುತ್ತಿದ್ದಾರೆ. ಬಿಜೆಪಿಗಿದು ನಿಜವಾದ ಪೆಟ್ಟು.

ಬಿಜೆಪಿಗೆ ಅಂಬೇಡ್ಕರ್ ಬಗ್ಗೆ ದ್ವೇಷ ಯಾಕೆ?



[illegible] ಮೂರು [illegible] ಯಾವರೂ ಡಾ. ಅಂಬೇಡ್ಕರ್ [illegible] ಅವಮಾನ ಮಾಡಿದರ [illegible] ಜೀರ್ಣವಾಗುವುದಿಲ್ಲವೇನೋ!


[illegible] ಆರೆಸ್ಸೆಸ್–ಎಬಿವಿಪಿ–ಬಿಜೆಪಿ ಇವರೆಲ್ಲರಿಗೂ ಸಾಮಾಜಿಕ [illegible] ಆಕ್ರೆಯಗಳ [illegible]

[illegible] ಬಿಜೆಪಿಗರು ಹಾಗೂ [illegible] ಯಡಿಯೂರಪ್ಪ ಮೊದಲ ಬಾರಿಗೆ ಉಪಮುಖ್ಯಮಂತ್ರಿಯಾದಾಗಲೇ [illegible] ಫೋಟೋ ತೆಗೆಸಿ ಹೊರಗೆಸೆದರು.

ಈಗ ಬಿಜೆಪಿ ಶಾಸಕ [illegible] ಅಂಬೇಡ್ಕರ್ [illegible] ಬರಯಲಿ [illegible]

[illegible]

ಬಿಜೆಪಿ ವಂಚನೆ: ಎಚ್ಚೆತ್ತ ಬಿಲ್ಲವರು




ಎಚ್ಚೆತ್ತ ಜಾತಿಗಳು

ಕೆಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡುವ ಜಾಯಮಾನದ ಹಿಂದೂತ್ವವಾದಿ ಬಿಜೆಪಿ ನಾಯಕರಿಗೆ ಈ ಸಲದ ಚುನಾವಣೆಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಬಿಲ್ಲವ ಸಮುದಾಯದ ಮತದಾರರು ಸರಿಯಾದ ಪಾಠ ಕಲಿಸಲು ನಿರ್ಧರಿಸಿದ್ದಾರೆ. ಇಲ್ಲಿಯವರೆಗೆ ಈ ಭಾಗದಲ್ಲಿ ಬಿಜೆಪಿ, ಆರೆಸ್ಸೆಸ್‌ಗಳೇನಾದರೂ ನೆಲೆಯನ್ನು ಪಡೆದುಕೊಂಡಿವೆಯೆಂದರೆ ಅದು ಇಲ್ಲಿನ ಬಹುಸಂಖ್ಯಾತ ಬಿಲ್ಲವ ಸಮುದಾಯದ ಜನರ ಬೆವರು, ರಕ್ತ ಮತ್ತು ಮತಗಳನ್ನು ಆಧರಿಸಿಯೇ.

ಮಿಲಿಟೆಂಟ್ ಸ್ವಭಾವದ ಬಿಲ್ಲವ ಹುಡುಗರಿಗೆ ಸಣ್ಣಪುಟ್ಟ ಸ್ಥಾನಮಾನಗಳ ಆಮಿಷ ತೋರಿಸಿ, ಎಮೋಷನಲ್ ಅತ್ಯಾಚಾರಕ್ಕೊಳಪಡಿಸಿ, ಇತರೆ ಧರ್ಮಗಳ ಅಮಾಯಕರ ಮೇಲೆ ಛೂಬಿಟ್ಟು ತಾವು ಮಾತ್ರ ಎಲ್ಲಾ ಅಧಿಕಾರ ಪಡೆದು ಸಂತೋಷವಾಗಿದ್ದ ಹಿಂದೂತ್ವವಾದಿಗಳ ಕುತಂತ್ರ ಈಗ ಬಿಲ್ಲವ ತರುಣರಿಗೆ ಅರ್ಥವಾಗಿದೆ. ತಮ್ಮನ್ನು ಊಟದ ಎಲೆಯಾಗಿ ಬಳಸಿಕೊಂಡು ಬಿಸಾಡಿರುವ ಬಿಜೆಪಿಯ ದ್ರೋಹ, ವಂಚನೆಗಳು ಹಿಂದುಳಿದ ಸಮುದಾಯದ ಬಿಲ್ಲವರಿಗೆ ನಿಧಾನವಾಗಿಯಾದರೂ ಮನದಟ್ಟಾಗಿದೆ.

ನೂರಾರು ವರ್ಷಗಳಿಂದಲೂ ತೀವ್ರ ಬಡತನ, ಅನಕ್ಷರತೆ ಸಾಲ–ಸೋಲಗಳಲ್ಲಿಯೇ ಬಳಲಿಬೆಂಡಾಗಿದ್ದ ಬಿಲ್ಲವ ಸಮೂಹ ಒಂದು ಹಂತದಲ್ಲಿ ಬಿಜೆಪಿ ಪಕ್ಷದ ಮೂಲಕ ತಮ್ಮ ಬದುಕು ಹಸನಾಗುತ್ತದೆ ಎಂದು ಕನಸು ಕಂಡಿದ್ದುಂಟು. ತಮ್ಮ ಸಮುದಾಯದ ಕೆಲವರಾದರೂ ರಾಜ್ಯಮಟ್ಟದ, ರಾಷ್ಟ್ರಮಟ್ಟದ ನಾಯಕರಾಗಿ ತಮ್ಮ ಪ್ರತಿನಿಧಿಗಳಾಗಲು ಈ ಬಿಜೆಪಿ ಅವಕಾಶ ಮಾಡಿಕೊಡುತ್ತದೆ ಎಂದೂ ಅವರು ನಂಬಿದ್ದುಂಟು. ಆ ಕಾರಣಕ್ಕಾಗಿಯೇ ಬಿಲ್ಲವರ ಹತ್ತಾರು ತರುಣರು ಬಿಜೆಪಿಗಾಗಿ ಹಲವಾರು ವೈರಿಗಳನ್ನು ಸೃಷ್ಟಿಸಿಕೊಂಡರು. ಬಿಜೆಪಿ ನಾಯಕರು ಹೇಳಿದ್ದಕ್ಕೆಲ್ಲ ಓಗೊಟ್ಟರು. ಅವರು ಬನ್ನಿ ಎಂದು ಕರೆದೆಡೆಗೆ ಹೋದರು, ನಿಲ್ಲಿ ಒಂದೆಡೆ ನಿಂತರು. ಬಡಿದಾಡಿ ಎಂದರೆ ಬಡಿದಾಡಿದರು. ಪರಿಣಾಮ ಏನಾಯಿತು?

ನೂರಾರು ಬಿಲ್ಲವ ತರುಣರು ಮೈಮೇಲೆ ಕೇಸುಗಳನ್ನು



ಎಳೆದುಕೊಂಡು ಕೋರ್ಟು ಕಚೇರಿ ಎಂದೆಲ್ಲಾ ಅಲೆಯುವಂತಾಯಿತು. ತಾವು ದುಡಿದಿದ್ದೆಲ್ಲವೂ ಈ ಅಲೆದಾಟಕ್ಕೇ ಸುರಿಯುವಂತಾಯಿತು. ಇತರೆ ಧರ್ಮದ ಅಮಾಯಕರೊಡನೆ ಕಾರಣವಿಲ್ಲದೆ ಹಗೆತನ ಕಟ್ಟಿಕೊಳ್ಳುವಂತಾಯಿತು. ಕ್ಯಾಂಡಲ್ ಸಂತು, ಪುಳಲಿ ಅನಂತು, ಪ್ರೇಮ್, ದಿನೇಶ್ ಮೂಲ್ಕಿ, ಸುಧಾಕರ ಪೂಜಾರಿ, ಉದಯ ಪೂಜಾರಿ ಮುಂತಾದ ಹುಡುಗರು ಬಿಜೆಪಿಯ ದ್ವೇಷರಾಜಕೀಯಕ್ಕೆ ಬಲಿಪಶುಗಳಾಗಿ ನಡುರಸ್ತೆಯಲ್ಲಿ ಹೆಣಗಳಾದರು.

ಇತ್ತ ಬಿಲ್ಲವ ಯುವಕರ ಹೆಣಗಳುರುಳುತ್ತಿದ್ದರೆ ಅತ್ತ ಬಿಜೆಪಿ ಮತ್ತು ಆರೆಸ್ಸೆಸ್ ನಾಯಕರ ಮಕ್ಕಳು ಬೆಂಗಳೂರು, ಅಮೆರಿಕಾ, ಸಾಫ್ಟ್‌ವೇರ್, ಇಂಜಿನಿಯರಿಂಗ್ ಅಂತೆಲ್ಲಾ ಹಾರಾಡತೊಡಗಿದರು. ಯಾವೊಬ್ಬ ಬಿಜೆಪಿ ಅಥವಾ ಆರೆಸ್ಸೆಸ್‌ನ ಮೇಲುಜಾತಿಯ ನಾಯಕನ ಒಂದು ಹನಿ ರಕ್ತವೂ ನೆಲಕ್ಕುದರಲಿಲ್ಲ; ಅವರ‍್ಯಾರ ಹೆಂಡತಿಯೂ ತನ್ನ ತಾಳಿ ಕಳೆದುಕೊಳ್ಳಲಿಲ್ಲ. ಎಲ್ಲಾ ಕಷ್ಟ ನಷ್ಟ ಅನುಭವಿಸಿದ್ದು ಬರೀ ಬಿಲ್ಲವರ ಯುವಕರು, ಮಕ್ಕಳು ಮತ್ತು ಮಹಿಳೆಯರು.

ಇನ್ನು ಬಿಜೆಪಿ ಸೇರಿ ಭಾರೀ ಮಹತ್ವಾಕಾಂಕ್ಷೆಗಳನ್ನಿಟ್ಟುಕೊಂಡ ಬಂಟ್ವಾಳದ ರುಕ್ಮಯ ಪೂಜಾರಿ, ಬೆಳ್ತಂಗಡಿಯ ಪ್ರಭಾಕರ ಬಂಗೇರ, ಕಾರ್ಕಳದ ಸುನೀಲ್ ಕುಮಾರ್‌ನಂತಹ ಯುವ ಮುಖಂಡರನ್ನು ಬಿಜೆಪಿ ಚೆನ್ನಾಗಿಯೇ ಬಳಸಿಕೊಂಡು ಅನಂತರ ಮೂಲೆಗೆ ಬಿಸಾಕಿತು. ರಾಷ್ಟ್ರಮಟ್ಟದಲ್ಲಿರಲಿ, ಇವರ‍್ಯಾರಿಗೂ ರಾಜ್ಯಮಟ್ಟದಲ್ಲಿಯೂ ಸೂಕ್ತ ಸ್ಥಾನಮಾನವನ್ನು ನೀಡಲಿಲ್ಲ.

ಸಹಜವಾಗಿಯೇ ಈಗ ಬಿಲ್ಲವರ ಆಕ್ರೋಶದ ಕಟ್ಟೆ ಒಡೆದಿದೆ. ಇಂದು ಸಾಮಾನ್ಯ ಬಿಲ್ಲವರೊಂದಿಗೆ ಪ್ರಮುಖವಾದ ಮೂರು ಬಿಲ್ಲವ ಸಂಘಗಳ ಮುಖಂಡರೂ ಜಾಗೃತಗೊಂಡು ಬಿಜೆಪಿಯ ದ್ರೋಹವನ್ನು ಅರಿತುಕೊಂಡು ಅದರ ವಿರುದ್ಧ ತಿರುಗಿ ಬಿದ್ದಿದ್ದಾರೆ. "ನಮ್ಮ ಜನಾಂಗಕ್ಕೆ ಮೇಲ್ಜಾತಿಯವರ ಬಿಜೆಪಿ ಮಾಡಿರುವ ಮಹಾವಂಚನೆ ನಮಗೀಗ ಅರ್ಥವಾಗಿದೆ. ನಮ್ಮ ಮಕ್ಕಳು ಬಿಜೆಪಿ ಮತ್ತು ಆರೆಸ್ಸೆಸ್‌ನ ಒಕ್ಕಲು ಮಾಡಿದ್ದು ಸಾಕು. ಇನ್ನು ಮುಂದೆ ಪ್ರಭಾಕರ ಭಟ್ಟ ಮತ್ತು ರಾಮ ಭಟ್ಟರಂತಹವರ ಮಕ್ಕಳೇ ಬಿಜೆಪಿಯ ಸೇವೆ ಮಾಡಲಿ. ನಮ್ಮ ಬಿಲ್ಲವ ಯುವಕರು ಶಿಕ್ಷಣದಲ್ಲಿ ಮುಂದುವರಿಯಲಿ. ಆ ಮೂಲಕ ಉತ್ತಮ ನೌಕರಿಗಳಲ್ಲಿ ಬಿಲ್ಲವ ಮಕ್ಕಳ ಹೆಸರೂ ಕೇಳಿಬರಲಿ" ಎಂದು ಒಂದು ಕಾಲದಲ್ಲಿ ಬಿಜೆಪಿಗಾಗಿ ತನುಮನವನ್ನು ಅರ್ಪಿಸಿದ್ದ ಮಾಜಿ ಬಿಜೆಪಿ ನಾಯಕರೊಬ್ಬರು ಇವತ್ತು ಕಿಡಿಕಾರುತ್ತಾರೆ.

ಸ್ವಾಭಿಮಾನಕ್ಕಾಗಿ ಈಡಿಗರು

ಅತ್ತ ದಕ್ಷಿಣ ಕನ್ನಡದಲ್ಲಿ ಬಿಲ್ಲವರು ಬಿಜೆಪಿಗೆ ಸೆಡ್ಡು ಹೊಡೆದಿದ್ದರೆ, ಅವರ ಕುಲಬಾಂಧವರೇ ಆದ ಈಡಿಗರು ಇತ್ತ ಶಿವಮೊಗ್ಗದಲ್ಲಿ ಬಿಜೆಪಿಯ ಮೇಲ್ಜಾತಿ ದಬ್ಬಾಳಿಕೆಗೆ ಆಸ್ಪದ ಮಾಡಿಕೊಡದಿರಲು ನಿರ್ಧಾರ ಮಾಡಿದ್ದಾರೆ. ಕೆಲ ವರ್ಷಗಳ ಹಿಂದೆ ಬಂಗಾರಪ್ಪ ಬಿಜೆಪಿ ಸೇರಿದಾಗ ಅವರ ಹಿಂದೆ ದಂಡುದಂಡಾಗಿ ಬಿಜೆಪಿ ಸೇರಿದ ಈಡಿಗ ಹುಡುಗರಿಗೆ ಕುಂಕುಮ ಇಟ್ಟು, ಹಿಂದೂತ್ವದ ಅಮಲೇರಿಸಿ ಸಾಗರದಲ್ಲಿ ಮುಸ್ಲಿಮರ ಮೇಲೆ ವ್ಯವಸ್ಥಿತ ದಾಳಿ ನಡೆಸಿ 80 ಮನೆಗಳನ್ನು ಸಂಘಪರಿವಾರ ಸುಡಿಸಿತ್ತು. ಬಿಜೆಪಿಯ ಚಡ್ಡಿ ಚತುರರು ಈಡಿಗರ ಹಳ್ಳಿಹಳ್ಳಿಗಳಿಗೆ ತೆರಳಿ ಆರೆಸ್ಸೆಸ್ ಶಾಖೆಗಳನ್ನು ತೆರೆದಿದ್ದರು. ಪರಿಣಾಮ ದಕ್ಷಿಣ ಕನ್ನಡದಂತೆ ಇಲ್ಲೂ ಸಹ ನೂರಾರು ಈಡಿಗ ಹುಡುಗರ ಮೇಲೆ ಕೇಸುಗಳಾದವು. ಅವರಲ್ಲಿ ಹಲವಾರು ಜನ ಬಳ್ಳಾರಿ ಜೈಲಿಗೂ ಹೋಗಿ ಬಂದರು.

ಇದೀಗ ಗೋಪಾಲಕೃಷ್ಣ ಬೇಳೂರು ಮತ್ತು ಹಾಲಪ್ಪ ಎಂಬ ಯಡ್ಡಿ ಗುಲಾಮರನ್ನು ಮುಂದಿಟ್ಟುಕೊಂಡು ರಾಮಚಂದ್ರಾಪುರ ಮಠದ ಮೂಲಕ ಇಡೀ ಶೂದ್ರ ಸಮುದಾಯವನ್ನು ಸಗಣಿ ಸ್ವಾಮಿ ರಾಘವೇಶ್ವರನ ಕಾಲಬುಡಕ್ಕೆ ತಳ್ಳಲು ಬಿಜೆಪಿ ಯತ್ನಿಸುತ್ತಿದೆ. ಮಾತ್ರವಲ್ಲ ಈಡಿಗ ನಾಯಕರ ನಡುವೆಯೇ ಬಿರುಕು ಮೂಡಿಸಿ ಅವರ ನಡುವಿನ ಜಗಳದಲ್ಲಿ ಚಳಿ ಕಾಯಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಈ ಯತ್ನದಲ್ಲಿ ಸಾಗರದ ಹವ್ಯಕ ಬ್ರಾಹ್ಮಣ ದಿವಾಕರ ಮುಂದಾಳತ್ವವನ್ನು ವಹಿಸಿದ್ದಾನೆ.

ಆದರೆ ಈಡಿಗರು ಚಡ್ಡಿಗಳ ಇಂತಹ ಕುತಂತ್ರಗಳನ್ನೆಲ್ಲಾ ಅರಿಯದವರೇನೂ ಅಲ್ಲ. ಯಡ್ಡಿ ಕೋಟಿ ಕೋಟಿ ಹಣದ ಹೊಳೆಯನ್ನೇ ಹರಿಸುತ್ತಿದ್ದರೂ ಈಗ ಈಡಿಗ ಸಮುದಾಯ ಲಿಂಗಾಯತರ ಗುಲಾಮಗಿರಿಗೆ ನಿಲ್ಲಬಾರದೆಂದು ನಿರ್ಧರಿಸಿದ್ದಾರೆ. ಚಡ್ಡಿಗಳ ಕಂತ್ರಿ ರಾಜಕೀಯವನ್ನ ಗ್ರಹಿಸಿಯೇ ಮೇಲ್ಜಾತಿ ಬಿಜೆಪಿಗಳ ವಿರುದ್ಧ ಒಂದಾಗಿ ದ್ದಾರೆ. ಜನರ ಐಕ್ಯತೆಯನ್ನು ಜಾತಿ ಮತ್ತು ಧರ್ಮಗಳ ಆಧಾರದ ಮೇಲೆ ಒಡೆದು, ರಕ್ತ ಹರಿಸುವ ಬಿಜೆಪಿಯ ಕುತಂತ್ರಿ ರಾಜಕೀಯದ ಬುಡಕ್ಕೇ ಕೊಡಲಿ ಏಟು ಕೊಡಲು ಏಪ್ರಿಲ್ 30ರಂದು ಈಡಿಗರು ಕಾಯುತ್ತಿ ದ್ದಾರೆ.

ಮೀನುಗಾರ ಸಮುದಾಯ: ಮತ್ತೆ ಹೊಂಡಕ್ಕೆ ಬೀಳಲ್ಲ

ಕರಾವಳಿಯ ಸಮುದ್ರದಲ್ಲಿ ಮೀನುಗಾರಿಕೆಯನ್ನೇ ಕಸುಬು ಮಾಡಿಕೊಂಡಿರುವ ಮೊಗವೀರ, ಮೊಗೇರ, ಹರಿಕಾಂತ ಪಂಗಡದವರು ಕಳೆದ ಬಾರಿ ಬಿಜೆಪಿಯ ಹಿಂದೆ ಹೋಗಿ ತಾವು ಎಂತಹ ಗುಂಡಿಗೆ ಬಿದ್ದಿದ್ದೆವು ಎಂಬುದು ಅರಿವಾಗಿ ಈ ಬಾರಿ ಬಿಜೆಪಿಗೆ ಬಲೆಹಾಕುವ ಸನ್ನಾಹದಲ್ಲಿದ್ದಾರೆ. ಉತ್ತರ ಕನ್ನಡದಲ್ಲಿ ಸುಮಾರು 75 ಸಾವಿರದಷ್ಟಿರುವ ಹಾಗೂ ದಕ್ಷಿಣ ಕನ್ನಡದಲ್ಲಿಯೂ ಗಣನೀಯ ಸಂಖ್ಯೆಯಲ್ಲಿರುವ ಈ ಮೀನುಗಾರ ಸಮುದಾಯಗಳು ಈ ಹಿಂದೆ ಬಿಜೆಪಿಗೆ ಮತ ಹಾಕಿದ್ದಷ್ಟೆ ಅಲ್ಲ ಅದಕ್ಕಾಗಿ ಯಾವ ತ್ಯಾಗ ಮಾಡಲೂ ಸಿದ್ಧರಾಗಿದ್ದರು.

ಆದರೆ ಅನಂತಕುಮಾರ್ ಹೆಗಡೆಯಂತಹ ಕೊಳಕರು ಕೊಬ್ಬಿ ಕುಳಿತದ್ದಷ್ಟೇ ಆಗಿದ್ದ ಲಾಭ. ಮೀನುಗಾರ ಸಮುದಾಯಗಳು ಯಾವ ಅಭಿವೃದ್ಧಿಯನ್ನೂ ಕಾಣಲಿಲ್ಲ. ಅತ್ತ ಸಮುದ್ರದಲ್ಲಿ ಖಾಸಗಿ ಕಂಪನಿಗಳ ಭಾರೀ ಬೋಟುಗಳು ಮೀನುಗಳನ್ನೆಲ್ಲಾ ದೋಚುತ್ತಿದ್ದರೆ, ಇತ್ತ ಈ ಸಮುದಾಯದ ಬಡ ಮೀನುಗಾರರ ಬಲೆಗಳಿಗೆ ಮೀನುಗಳೇ ಸಿಗದಂತಾಗಿತ್ತು. ಆಗ ಅವರ ವೃತ್ತಿ, ಬದುಕು ಮತ್ತು ಜೀವನೋಪಾಯಗಳ ತಳವೇ ಅಲ್ಲಾಡಹತ್ತಿತ್ತು. ಯಾವ ಬಿಜೆಪಿ ನಾಯಕನೂ ಇವರ ಕಷ್ಟಗಳತ್ತ ತಿರುಗಿಯೂ ನೋಡಲಿಲ್ಲ. ಒಂದೆಡೆ ಕೋಸ್ಟಲ್ ಗಾರ್ಡ್‌ಗಳು ದಿನಂಪ್ರತಿ ಕಾಟ, ಇನ್ನೊಂದೆಡೆ ಲೋಕಲ್ ಮಾಫಿಯಾಗಳು ಮೀನುಗಾರರನ್ನು ತಪಾಸಣೆ ಮಾಡುವುದು, ಮಾಮೂಲಿ ಕೇಳುವುದು, ಕಿರುಕುಳ ಕೊಡುವುದು ಎಲ್ಲವೂ ಹೆಚ್ಚಿದವು. ಆಗ ಈ ಜನಾಂಗಗಳ ಮುಂದಾಳುಗಳು ಪರಿಹಾರ ಕೋರಿ ಅನಂತ್ ಮಾಣಿಯ ಬಳಿಹೋದರೆ ಆತ ಮುಖ ತಿರುಗಿಸಿ ತನ್ನ ಬೆನ್ನು ತೋರಿಸಿದನಷ್ಟೇ. ಕೊನೆಗೆ ಈ ಮೀನುಗಾರರ ಕೈಹಿಡಿದದ್ದು ಕಾಂಗ್ರೆಸ್‌ನ ಮಾರ್ಗರೆಟ್ ಆಳ್ವಾ. ಆಕೆ ಇವರನ್ನು [illegible] ಸಚಿವ ಆಂಟನಿಯವರೆಗೂ ಕರೆದೊಯ್ದು ಈ ಸಮುದಾಯದ ಮೇಲಾಗುತ್ತಿದ್ದ ದೌರ್ಜನ್ಯ ತಹಬಂದಿಗೆ ತರುವಲ್ಲಿ ನೆರವಾಗಿದ್ದರು.

ಕೊನೆಗೆ ಕರಾವಳಿಯ ಎಲ್ಲಾ ಹಿಂದುಳಿದ ಸಮುದಾಯದವರಿಗೂ ಅರ್ಥವಾಗಿದ್ದು ಇಷ್ಟು: ಬಿಜೆಪಿ ಸಮಯಸಾಧಕ, ವಂಚಕ, ಜನದ್ರೋಹಿ ಪಕ್ಷ ಎಂಬುದು. ಬಿಜೆಪಿ ನಾಯಕರು ಹತ್ತಿದ ಮೇಲೆ ಏಣಿಯನ್ನು ಒದ್ದು ನಡೆಯುವ ಕುಲಾಂತರಿಗಳು. ಹಾಗಾಗಿಯೇ ತಮ್ಮ ನೋವು, ವೇದನೆಯನ್ನು, ತಮಗಾದ ವಂಚನೆಯನ್ನು ಈ ಸಲದ ಚುನಾವಣೆಯಲ್ಲಿ ಸರಿಯಾಗಿಯೇ ತೋರಿಸಲು ಕರಾವಳಿಯ ಮೀನುಗಾರರು ತಯಾರಾಗಿದ್ದಾರೆ.

ಅಖಿಲ ಭಾರತ ವೀರಶೈವ ಮಹಾಸಭಾ (ರಿ.)

ಮಂಡ್ಯ ಜಿಲ್ಲಾ ಘಟಕ, ಮಂಡ್ಯ
ಬಸ್ಸಂಗಾಡಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

ಅಧ್ಯಕ್ಷರು
...ಲಿಂಗಯ್ಯ ಎಂ.ಎ., ಬಿ.ಇಡಿ.
ಮೊಬೈಲ್ : 99862 20225 99645 3 58 82

'ಸಮಾಜಿಕ ನ್ಯಾಯ ಇಲ್ಲಿ ಏಕೆ ಇಲ್ಲ'

ಮಂಡ್ಯ ಜಿಲ್ಲೆಯಲ್ಲಿ ಒಟ್ಟು ಮತದಾರರು 14.91 ಲಕ್ಷ, ಒಕ್ಕಲಿಗರ ಮತದಾರರು 7 ಲಕ್ಷ, ದಲಿತರು 2.40 ಲಕ್ಷ, ಲಿಂಗಾಯತರು 1.62 ಲಕ್ಷ, ಕುರುಬರು 1.5 ಲಕ್ಷ, ಬ್ರಾಹ್ಮಣರು 40 ಸಾವಿರ, ಮುಸ್ಲಿಂ 80 ಸಾವಿರ, ಕ್ರೈಸ್ತ, ಜೈನರು 40 ಸಾವಿರ ಉಳಿದ ಕೋಮಿನವರು 2 ಲಕ್ಷ, ಕಳೆದ 55 ವರ್ಷಗಳಿಂದಲೂ ಒಕ್ಕಲಿಗ ಕೋಮಿನವರು ಲೋಕಸಭೆಗೆ ಆಯ್ಕೆಯಾಗುತ್ತಿದ್ದಾರೆ. ಬೇರೆಯವರಿಗೆ ಅವಕಾಶವಿಲ್ಲ. ಉಳಿದ ಜಿಲ್ಲೆಗಳಲ್ಲಿ ಅಲ್ಪ ಕೋಮಿನವರಿಗೆ ಅವಕಾಶ ನೀಡಿ ಗೆಲ್ಲಿಸುತ್ತಾರೆ. ಪ್ರಸ್ತುತ ಚುನಾವಣೆಯಲ್ಲಿ ನಾಲ್ಕು ಜನ ಒಕ್ಕಲಿಗರ ನಿಂತಿದ್ದಾರೆ. 2 ಲಕ್ಷ ಮತದಾರಿರುವ ಲಿಂಗಾಯತ ಬ್ರಾಹ್ಮಣರಿಗೆ ಪಕ್ಷದ ಘಟಕಗಳಲ್ಲಿ ಅವಕಾಶವಿಲ್ಲ. ಹಣ್ಣು ತಿಂದು ತೇಗುವವರು ಪ್ರಬಲ ಕೋಮಿನವರು, ಸಿಪ್ಪೆ ಮಾತ್ರ ಉಳಿದವರಿಗೆ. ಇವರ ಯಕ್ಷಗಾನ ಲಂಚಾವತಾರ ನಾಟಕವನ್ನು ಉಳಿದ ಕೋಮಿನವರು ನೋಡಬೇಕಿದೆ. ಇದು ಅನ್ಯಾಯ ವಲ್ಲವೇ ?. ಉಳಿದ ಕೋಮಿನವರು ಸಂಘಟಿತರಾದರೆ ಮಾತ್ರ ಈ ಜಿಲ್ಲೆಯಲ್ಲಿ ಸಮಾನತೆ ಸಿಗುತ್ತದೆ.

(ಸಿದ್ದಲಿಂಗಯ್ಯ) 9/4/09
ಅಧ್ಯಕ್ಷರು
ಅಖಿಲ ಭಾರತ ವೀರಶೈವ ಮಹಾಸಭಾ (ರಿ)
ಮಂಡ್ಯ ಜಿಲ್ಲಾ ಘಟಕ

ಒಕ್ಕಲಿಗರನ್ನು ತುಳಿದು ಹಾಕಲು ಲಿಂಗವಂತರ ನಾನಾ ಪಿತೂರಿ

ಕರ್ನಾಟಕದ ರಾಜಕೀಯದಲ್ಲಿ ಬ್ರಾಹ್ಮಣ-ಲಿಂಗಾಯತರು ಜೊತೆಗೂಡಿ, ಉಳಿದವರು ತಲೆ ಎತ್ತಲಾಗದಂತೆ ದಬ್ಬಾಳಿಕೆ ನಡೆಸುತ್ತಿದ್ದಾರಷ್ಟೇ. ಈ ಮೇಲ್ಜಾತಿ ಜೋಡಿಯು ಉತ್ತರ ಕರ್ನಾಟಕದಲ್ಲಿ ಹಿಂದುಳಿದ ಜಾತಿಗಳಾದ ಕುರುಬರು, ದಲಿತರು, ನಾಯಕರನ್ನು ಸದೆಬಡಿಯುತ್ತಿದೆ. ಇತ್ತ ದಕ್ಷಿಣ ಕರ್ನಾಟಕದಲ್ಲೂ ಒಕ್ಕಲಿಗರು, ಕುರುಬರು, ಗೊಲ್ಲರು, ದಮನಿತ ಕೆಳಜಾತಿಗಳು, ಹಾಗೂ ದಲಿತರು ಎಂದೆಂದೂ ತಲೆ ಎತ್ತದಂತೆ ಒಳ ಪಿತೂರಿಯನ್ನು ನಡೆಸುತ್ತಿದ್ದಾರೆ.

ಉದಾಹರಣೆಗೆ ಅಖಿಲ ಭಾರತ ವೀರಶೈವ ಮಹಾಸಭಾದವರ ಈ ರಹಸ್ಯ ಪತ್ರವನ್ನು ಓದಿ ನೋಡಿ.

ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಈ ಪತ್ರ ಇದೆಯಾದರೂ ಅದರ ಒಳದನಿ ಮಾತ್ರ ಇವತ್ತಿನ ಇಡೀ ಕರ್ನಾಟಕದಲ್ಲಿ ಬ್ರಾಹ್ಮಣ-ಬಣಜಿಗ ಲಿಂಗಾಯತರು ನಡೆಸುತ್ತಿರುವ ಪಿತೂರಿಗೆ ಸಾಕ್ಷಿಯಾಗಿದೆ.

"ಮಂಡ್ಯದಲ್ಲಿ ಏಳು ಲಕ್ಷ ಒಕ್ಕಲಿಗರಿದ್ದರೇನಂತೆ ಇಲ್ಲಿ ಲಿಂಗಾಯತರಿಗೂ, ಬ್ರಾಹ್ಮಣರಿಗೂ ಅವಕಾಶ ಸಿಗುತ್ತಿಲ್ಲ. ಒಕ್ಕಲಿಗ ನಾಯಕರ ಲಂಚಾವತಾರ ನಾಟಕವನ್ನು ಉಳಿದ ಕೋಮಿನವರು ನೋಡಿಕೊಂಡು ಕೂರಬೇಕಾಗಿ ಬಂದಿದೆ" ಎಂದೆಲ್ಲಾ ಆರೋಪಿಸಲಾಗಿದೆ.

ಆದರೆ ಒಕ್ಕಲಿಗರ ವಿರುದ್ಧ ಬೇರೆಲ್ಲರನ್ನು ಎತ್ತಿಕಟ್ಟುವ ವ್ಯವಸ್ಥಿತ ಪಿತೂರಿ ಇದು. ಎಲ್ಲರೂ ಗಮನಿಸುವಂತೆ ಬಿಜೆಪಿಗೆ ಬೆಂಗಳೂರು ನಗರ ಹೊರತುಪಡಿಸಿ ಇಡೀ ದಕ್ಷಿಣ ಕರ್ನಾಟಕದಲ್ಲಿ ಬಲವಾದ ನೆಲೆ ಇಲ್ಲ, ಉತ್ತರ ಕರ್ನಾಟಕದಲ್ಲೂ ಒಂದಷ್ಟು ಲಿಂಗಾಯತರು ಬಿಜೆಪಿ ಜೊತೆ ಸೇರಿದ್ದರಿಂದಾಗಿ ಇತ್ತ ದಕ್ಷಿಣ ಕರ್ನಾಟಕದಲ್ಲೂ ಲಿಂಗಾಯತರು ಬಿಜೆಪಿ ಪರ ಒಲವು ತೋರುತ್ತಿರುವುದರಿಂದ ಸಹಜವಾಗೇ ಒಕ್ಕಲಿಗರೂ ಒಗ್ಗಟ್ಟಾಗುತ್ತಿದ್ದಾರೆ. ಇದರಿಂದ ನಷ್ಟವಾಗುತ್ತಿರುವುದು ಬಿಜೆಪಿಗಳಿಗೇನೆ. ಹಾಲಿ ಬಿಜೆಪಿ ಸರ್ಕಾರದ ವಿರುದ್ಧ ಒಕ್ಕಲಿಗರಲ್ಲಿ ಯಾವ ಮಟ್ಟದ ಅಸಹನೆ, ಅಪನಂಬಿಕೆ ಬೆಳೆದಿದೆ ಎಂದರೆ ಈಗ ಎಚ್ಚೆತ್ತುಕೊಳ್ಳದೇ ಹೋದರೆ ಮುಂದೆಂದೂ ಒಕ್ಕಲಿಗರಿಗೆ ಉಳಿಗಾಲವಿಲ್ಲ ಎಂಬಂತೆ ಒಕ್ಕಲಿಗರಿಗೆ ಭಾಸವಾಗುತ್ತಿದೆ.

ಲಿಂಗಾಯತರು ಮೆಜಾರಿಟಿ ಇರುವ ಕಡೆ ಲಿಂಗಾಯತ ಕ್ಯಾಂಡಿಡೇಟ್‌ಗಳು ಎಲೆಕ್ಷನ್‌ಗೆ ನಿಲ್ಲುವುದು ಎಷ್ಟು ಸಹಜವೋ ಅದೇ ರೀತಿ ಒಕ್ಕಲಿಗರು ಮೆಜಾರಿಟಿ ಇರುವ ಕಡೆ ಒಕ್ಕಲಿಗ ಅಭ್ಯರ್ಥಿಗಳೇ ಸ್ಪರ್ಧಿಸುವುದು ಸಹಜ ತಾನೆ?

ಆದರೆ ಬಿಜೆಪಿಗಳಿಗೆ ಇದು ತಪ್ಪಾಗಿ ಕಾಣಿಸಿದೆ. ಹಾಗಾದರೆ ಹಾಸನದಲ್ಲೂ 2 ಲಕ್ಷ ಲಿಂಗಾಯತರಿದ್ದಾರಲ್ಲ, ಬಿಜೆಪಿಗಳು ಅಲ್ಲಿ ಒಕ್ಕಲಿಗ ಹನುಮೇಗೌಡರಿಗೆ ಟಿಕೆಟ್ ನೀಡುವ ಬದಲಾಗಿ ಲಿಂಗಾಯತರನ್ನೇ ಸ್ಪರ್ಧೆಗಿಳಿಸಬಹುದಿತ್ತಲ್ಲವೆ? ಅದರ ಬದಲಾಗಿ ಒಕ್ಕಲಿಗರನ್ನೇ ವಿಭಜಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ತಂತ್ರ ಮಾಡಿದ್ದು ಯಾಕೆ ಎಂಬ ಅನುಮಾನ ಎಲ್ಲರಲ್ಲೂ ಬಂದುಬಿಟ್ಟಿದೆ.

ವೀರಶೈವ ಮಹಾಸಭಾದವರ ಇಂಥ ಒಳಪಿತೂರಿಗಳು ಜಾತಿ ಧ್ರುವೀಕರಣಕ್ಕೆ ಇನ್ನಷ್ಟು ಪುಷ್ಟಿ ನೀಡುತ್ತಿವೆ.

ಒಕ್ಕಲಿಗರಿಗೆ ಲಿಂಗಾಯತರ ಬಗ್ಗೆ ಅಪನಂಬಿಕೆ ಯಾಕೆಂದರೆ.....!

ಇವರಿಬ್ಬರ ಜಗಳಕ್ಕೆ ಹಲವು ದಶಕಗಳ ಇತಿಹಾಸವೇ ಇದೆ ಬಿಡಿ. ಅದನ್ನೆಲ್ಲಾ ಬಿಟ್ಟು ಇವತ್ತಿನ ವಿದ್ಯಮಾನಗಳನ್ನಷ್ಟೇ ನೋಡೋಣ.

ಉದಾಹರಣೆಗೆ ಎಲೆಕ್ಷನ್ ಕುರಿತ ಹಲವು ಎಸ್‌ಎಂಎಸ್‌ಗಳ ಬಗ್ಗೆ ಹೇಳಬೇಕೆಂದರೆ

"ಯಡ್ಡಿ ಸರ್ಕಾರ ಬಂದ ನಂತರ ಒಕ್ಕಲಿಗ ಅಧಿಕಾರಿಗಳನ್ನು ತುಳಿದು ಮೂಲೆಗುಂಪು ಮಾಡಿದೆ."

"ಇದುವರೆಗೂ ಲೋಕಾಯುಕ್ತರು ನಡೆಸಿರುವ 108 ದಾಳಿಗಳಲ್ಲಿ 83 ದಾಳಿಗಳು ಒಕ್ಕಲಿಗ ಅಧಿಕಾರಿಗಳ ವಿರುದ್ಧ ನಡೆದಿವೆ. ಯಾಕೆ ಲಿಂಗಾಯತ-ಬ್ರಾಹ್ಮಣರಲ್ಲಿ ಭ್ರಷ್ಟ ಆಫೀಸರ್‌ಗಳು ಇಲ್ಲವಾ? ಅವರ ಮೇಲೆ ಯಡ್ಡಿ ಸರ್ಕಾರ ಯಾಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ"

"ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ನೇಮಕಾತಿ ಇಂಟರ್‌ವ್ಯೂಗಳಲ್ಲಿ ಒಕ್ಕಲಿಗ ಕ್ಯಾಂಡಿಡೇಟ್‌ಗಳಿಗೆ ಬೇಕಂತಲೇ ಕಡಿಮೆ ಮಾರ್ಕ್ಸ್ ಕೊಡುತ್ತಿದ್ದಾರೆ. ಬ್ರಾಹ್ಮಣ-ಲಿಂಗಾಯತರೇ ಹೆಚ್ಚು ಜನ ಗೆಜೆಟೆಡ್ ಆಫೀಸರ್‌ಗಳಾಗಿ ನೇಮಕಗೊಳ್ಳುವಂತೆ, ಜಾಸ್ತಿ ಮಾರ್ಕ್ಸ್ ಕೊಡುತ್ತಾ ಉಳಿದೆಲ್ಲಾ ಜಾತಿಗಳವರನ್ನು ತುಳಿಯುತ್ತಿದ್ದಾರೆ."

..... ಹೀಗೆ ಜಾತಿ ದ್ವೇಷ, ಅನುಮಾನಗಳ ಈ ಕತೆಗಳಿಗೆ ಕೊನೆ ಮೊದಲೇ ಇಲ್ಲದಂತಾಗಿದೆ.


ಇಷ್ಟು ಸಾರಾಂಶದಲ್ಲಿ ಹೇಳಬೇಕೆಂದರೆ ಬ್ರಾಹ್ಮಣರೂ-ಲಿಂಗಾಯತರೂ ಒಗ್ಗಟ್ಟಾಗಿ ಅಧಿಕಾರ ಕಬಳಿಸುತ್ತಾರಾದರೆ, ಅದೇ ರೀತಿ ಒಕ್ಕಲಿಗ ಕುರುಬ ಇನ್ನಿತರ ಜಾತಿಗಳವರು ಈ ಬ್ರಾ-ಲಿಂ ವಿರುದ್ಧ ಒಗ್ಗಟ್ಟಾಗಲೇ ಬೇಕಲ್ಲ,

ಇದನ್ನು ಯಾರು ತಾನೆ ತಡೆಯಲು ಸಾಧ್ಯ?

ಇದನ್ನು [illegible] ಏನಂತೀರಿ?

ಲಿಂಗಾಯತರ ಮೇಲೆ ಕಾಡುಗೊಲ್ಲರ ಬಂಡಾಯ

ಸಿದ್ದಗಂಗಾ ಸ್ವಾಮಿಯೇ ಖಳನಾಯಕ



ಇಡೀ ತುಮಕೂರು ಜಿಲ್ಲೆಯ ತೆಂಗಿನ ಕಾಯಿ, ಭತ್ತ ದವಸ ಧಾನ್ಯಗಳ ಮಂಡಿಗಳು, ಖಾಸಗಿ ಬಸ್ಸಿನ ಒಡೆತನ, ಇತರೆ ವಾಣಿಜ್ಯ ವಹಿವಾಟುಗಳೆಲ್ಲ ಎಸ್. ಆರ್. ಜಗದೀಶ್ ಮತ್ತು ಎಂ.ಪಿ. ಬಸವರಾಜ್ ತರಹದ ಲಿಂಗಾಯತರ ಕೈಯಲ್ಲಿಯೇ ಇವೆ. ಎಷ್ಟೆ ಮಂದಿ ಇವರ ವಶದಲ್ಲಿರುವುದರಿಂದ ಎಲ್ಲರೂ ಇವರನ್ನು ಆಯಿಲ್ ಮಾಫಿಯಾಗಳೆಂದು ಕರೆಯುತ್ತಾರೆ. ಸ್ವಾಮೀಜಿಗಳ ನೆಪಮಾತ್ರಕ್ಕಿದ್ದು ಮಠದ ಸಕಲೆಂಟು ನಿರ್ಧಾರಗಳನ್ನು ಈ ಮಾಫಿಯಾ ಕೈಗೊಳ್ಳುತ್ತದೆ. ನಡೆದಾಡುವ ದೇವರು ಶ್ರೀ ಶಿವಕುಮಾರ ಸ್ವಾಮೀಜಿಗಳು ಮಾತ್ರ ದೇವತಾ ಸ್ವರೂಪರಾಗಿ, ಇವರ ಸಕಲ ಕಾರ್ಯಚಟುವಟಿಕೆಗಳಿಗೆ ಕಾಲದಿಂದಲೂ ಮೌನ ಸಮ್ಮತಿ ಸೂಚಿಸುತ್ತಿದ್ದಾರೆ.

ಶಿವಕುಮಾರ ಸ್ವಾಮಿಗಳ ಸಿದ್ಧಗಂಗಾ ಮಠ ಈಗಿನ ಮುಖ್ಯಮಂತ್ರಿ ಯಡಿಯೂರಪ್ಪ ಮೊದಲಾದವರ ಜೊತೆ ಸೇರಿಕೊಂಡು ವೀರಗಾಸೆ ಹಾಕಿ ಕುಣಿಯುತ್ತಾ 'ನಾವು ಅನ್ನದಾಸೋಹಿಗಳು, ಶಿಕ್ಷಣದಾತರು' ಎಂದು ಎಷ್ಟೇ ಹೇಳಿದರೂ ಗೊಲ್ಲರೂ ಸೇರಿದಂತೆ ತುಮಕೂರು ಜಿಲ್ಲೆಯ ಸಕಲೆಂಟು ಹಿಂದುಳಿದ ಜಾತಿಗಳು ಲಿಂಗಾಯತರ ದಬ್ಬಾಳಿಕೆಯ ವಿರುದ್ಧ ಬಂಡಾಯವೆದ್ದಿದ್ದಾರೆ. ಇದರಿಂದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲು ಗ್ಯಾರಂಟಿಯಾಗತೊಡಗಿದೆ. ಈಗಿನ ದೇವತಾ ಸ್ವರೂಪರಾದ, ವಯೋವೃದ್ಧರಾದ ಶಿವಕುಮಾರ ಸ್ವಾಮಿಗಳು ತೀರಾ ಇತ್ತೀಚಿನವರೆಗೂ ಯಾರಾದರೂ ಅವರ ಪಾದಕ್ಕೆರಗಿದರೆ ನಿಸ್ಸಂಕೋಚವಾಗಿ 'ಯಾವ ಜಾತಿ?' ಎಂದು ಕೇಳುತ್ತಿದ್ದರು. ತಮ್ಮ ಸುತ್ತಮುತ್ತ ಲಿಂಗಾಯತ ಮಿಡಿನಾಗರಗಳನ್ನು ಸೇರಿಸಿಕೊಂಡಿದ್ದರು. ಇವರು ಸಿದ್ಧಗಂಗಾ ಮಠವನ್ನು ಪರೋಕ್ಷವಾಗಿ ನಿಯಂತ್ರಿಸುತ್ತಿದ್ದರು.

ಇವರನ್ನು ರಕ್ಷಿಸುವ ಸಲುವಾಗಿಯೇ ಶಿಕ್ಷಣ ಹಾಗೂ ಅನ್ನದಾಸೋಹ ಮತ್ತಷ್ಟು ಜಾಸ್ತಿ ನಡೆಯತೊಡಗಿದೆ. ಇಂದಿಗೂ ಸಹಪಂಕ್ತಿ ಭೋಜನ ನಡೆಯುವುದಿಲ್ಲವೆಂದು ಉಡುಪಿ ಮಠದ ಪೇಜಾವರ ಸ್ವಾಮಿಯನ್ನು ಎಲ್ಲರೂ ತೆಗಳುತ್ತಾರೆ. ವಾಸ್ತವವಾಗಿ ಸಿದ್ಧಗಂಗಾ ಮಠವು ಇದಕ್ಕಿಂತ ಭಿನ್ನವೇನಲ್ಲ, ಮಠದಲ್ಲಿ ಲಿಂಗಾಯತ ಭಕ್ತಾದಿಗಳಿಗೆ ಬೇರೆಯದೇ ಭೋಜನ ಶಾಲೆಯಿದ್ದರೆ, ಶೂದ್ರಾದಿಗಳಿಗೇ ಪ್ರತ್ಯೇಕ ಭೋಜನ ಶಾಲೆ ಇದೆ. ಇಂತಹ ಪರಿಸ್ಥಿತಿಯನ್ನು 1986ರಲ್ಲಿ ಪ್ರವರ್ಧಮಾನಕ್ಕೆ ಬಂದ ಕಿರಿಯ ಸ್ವಾಮೀಜಿಗಳಾದ ಗೌರಿಶಂಕರರು ಪ್ರತಿಭಟಿಸಲು ಪ್ರಯತ್ನಿಸಿದರು. ಜಾತಿ ವ್ಯವಸ್ಥೆ ಮಠದ ಆಸ್ತಿಯ ಮೇಲಿನ ಆಯಿಲ್ ಮಾಫಿಯಾದ ಹಿಡಿತ ಮೊದಲಾದವುಗಳನ್ನು ಪ್ರಶ್ನಿಸಿದಾಗ ವ್ಯವಸ್ಥಿತವಾಗಿ ಅವರ ಮೇಲೆ ಪಿತೂರಿ ನಡೆಸಿ ಕರ್ಮಠ ಲಿಂಗಾಯತ ಮೇಷ್ಟ್ರುಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಸಲಿಂಗ ರತಿಯ ಆರೋಪವನ್ನು ಹೊರಿಸಿ ಜೈಲಿಗೆ ತಳ್ಳಿದವು. ಅವರು ಸುಪ್ರೀಂಕೋರ್ಟ್‌ನಿಂದ ದೋಷಮುಕ್ತರಾಗಿ ಬಂದಕತೆ ಎಲ್ಲರಿಗೂ ಗೊತ್ತೇ ಇದೆ.

ಆದರೆ, ಈ ಮಠದ ಕರಾಳ ಚರಿತ್ರೆಯ ಹಿಂದೆ 'ನಡೆದಾಡುವ ದೇವರ' ಆಶೀರ್ವಾದ ಇದ್ದೇ ಇತ್ತು ಎಂಬುದನ್ನು ವಿಷಾದದಿಂದ ಹೇಳಲೇಬೇಕಾಗಿದೆ. ಮೊದಲಿನಿಂದಲೂ ಇದೇ ಬಗೆಯ ಚರಿತ್ರೆಯನ್ನು ಹೊಂದಿರುವ ಸಿದ್ಧಗಂಗಾ ಮಠ ಶ್ರೀ ಶಿವಕುಮಾರ ಸ್ವಾಮೀಜಿಗಳು ಹೇಗೋ ಏನೋ ಪುರೋಹಿತಶಾಹಿ ಮಾಧ್ಯಮದಿಂದ ವಿಚಿತ್ರ ಬಗೆಯ ವೈಭವೀಕರಣಕ್ಕೆ ಒಳಪಟ್ಟು ಮಠ, ಗರ್ಭಗುಡಿಯಾಗಿ, ಸ್ವಾಮೀಜಿಗಳು ಗರ್ಭಗುಡಿಯಲ್ಲಿನ ದೇವರಾಗಿ ಮಾರ್ಪಟ್ಟರು. ಈ ಮಠವು ಮೊದಲಿನಿಂದಲೂ ಹೆಸರು ಬಸವಣ್ಣನವರದಾದರೂ ಬಸಿರು ಬ್ರಾಹ್ಮಣ ಜಾತಿಯದ್ದೇ ಆಗಿದೆ. ಅದರೊಳಕ್ಕೆ ಸನಾತನ ಬ್ರಾಹ್ಮಣ ಪಕ್ಷ ಬಿಜೆಪಿ ಬಂದು ಕುಳಿತಿರುವುದು ಆಶ್ಚರ್ಯವೇನೂ ಅಲ್ಲ, ದೀನ, ದಲಿತ. ಹಿಂದುಳಿದ ಜಾತಿಗಳು ಕಟ್ಟಿದ ಮಠವೆಂಬ ಹುತ್ತದೊಳಗೆ ಶಿವಕುಮಾರ ಸ್ವಾಮೀಜಿಗಳು ಅವರ ಜೊತೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಳೆಸಿದ ಬಿಜೆಪಿಯ ಹಾವುಗಳು ಬಂದು ಸೇರಿಕೊಂಡಿವೆ.

ಹೀಗಾಗಿಯೇ ತುಮಕೂರು ಹಾಗೂ ಸುತ್ತಲಿನ ಗೊಲ್ಲರಿಗೆ ಈ ಧಾರ್ಮಿಕ ರಾಜಕೀಯ ಆಟದೊಳಗೆ ಯಾವುದೇ ಪ್ರವೇಶವಿಲ್ಲ, ಪ್ರಾತಿನಿಧ್ಯವೂ ಇಲ್ಲ, ಕರ್ನಾಟಕದಲ್ಲಿ ಸುಮಾರು 25ರಿಂದ 30 ಲಕ್ಷ ಜನಸಂಖ್ಯೆಯಿರುವ ಕಾಡುಗೊಲ್ಲರಿಗೆ ಇಲ್ಲಿಯವರೆಗೆ ಹೊಳಲ್ಕೆರೆಯ ಉಮಾಪತಿ ಮತ್ತು ಅವರಪ್ಪ ಸಿದ್ಧರಾಮಪ್ಪ ಶಾಸಕರಾಗಿದ್ದೇ ದೊಡ್ಡ ಸಾಧನೆ. ಕೋದಂಡರಾಮಯ್ಯ ಮತ್ತು ಈ ಕ್ರಷ್ಣಪ್ಪ ಗೊಲ್ಲರನ್ನು ಪ್ರತಿನಿಧಿಸುತ್ತಿದ್ದಾರೆ. ಇದರ ಪ್ರತಿನಿಧಿತ್ವಕ್ಕೆ ಖುಷಿ ಪಟ್ಟುಕೊಂಡು ಕಾಡುಗೊಲ್ಲರು ಸಮಾಧಾನಪಟ್ಟುಕೊಳ್ಳಬೇಕಿದೆ. ಆದರೆ ತುಮಕೂರು ಜಿಲ್ಲೆಯಾದ್ಯಂತ ಮಠವನ್ನು ಕಟ್ಟಿದ ಹಿಂದುಳಿದ ಜಾತಿಗಳೆಲ್ಲವೂ ಈಗ ಶಿವಕುಮಾರ ಸ್ವಾಮೀಜಿಗಳು, ಸಿದ್ಧಗಂಗಾ ಮಠ ಮತ್ತು ಲಿಂಗಾಯತ ಮಾಫಿಯಾ ಸುಮಾರು ಒಂದು ಶತಮಾನ ಕಾಲ ಆಡಿದ ಕಪಟ ನಾಟಕವನ್ನು ಮುಗಿಸಲು ತೀರ್ಮಾನಿಸಿದ್ದಾರೆ. ಇವರ ತೀರ್ಮಾನ ಬಿಜೆಪಿಯ ಸೋಲಿನ ಮೂಲಕ ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಹೊರಬೀಳಲಿದೆ.

ತುಮಕೂರು, ಚಿತ್ರದುರ್ಗ ಜಿಲ್ಲೆಯಲ್ಲಿ ಬ್ರಾಹ್ಮಣ, ಲಿಂಗಾಯತರನ್ನು ಹೊರತುಪಡಿಸಿ ಬೇರೆಲ್ಲಾ ಹಿಂದುಳಿದ ಶೂದ್ರಾದಿ ಜಾತಿಗಳ ಕಥೆಯೂ ಒಂದೇ ರೀತಿಯಲ್ಲಿದ್ದರೂ ಸದ್ಯಕ್ಕೆ ಸಿದ್ಧಗಂಗಾ ಮಠದ ಬೆಳವಣಿಗೆಗೆ ಕಾರಣರಾದವರಲ್ಲಿ ಒಬ್ಬರಾದ ಕಾಡುಗೊಲ್ಲ ಜಾತಿಗೆ ಸಿಕ್ಕಿರುವ ರಾಜಕೀಯ ಪ್ರಾತಿನಿಧ್ಯವನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಗೊಲ್ಲರು ಮುಖ್ಯವಾಗಿ ಬೆಂಗಳೂರು, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ವಾಸಿಸುತ್ತಿದ್ದಾರೆ. ಆದರೆ ಈ ಮೂರು ಜಿಲ್ಲೆಗಳಲ್ಲಿಯೂ ಕಾಡುಗೊಲ್ಲರು ಇತರೆ ಜಾತಿಗಳಿಗಿಂತ ಪ್ರತ್ಯೇಕವಾದ 'ಹಟ್ಟಿ'ಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ ಜಿಲ್ಲೆಗಳಲ್ಲಿ ಎಲ್ಲಿ ಹೋದರೂ ನೂರು, ನೂರೈವತ್ತು ಗುಡಿಸಲುಗಳು ಒಟ್ಟಾಗಿ ಪ್ರತ್ಯೇಕವಾಗಿ ಕಣ್ಣಿಗೆ ಬಿದ್ದರೆ ಅದನ್ನು ಕಾಡುಗೊಲ್ಲರ ಹಟ್ಟಿ ಎಂದೇ ಯಾವುದೇ ಸಂದೇಹವಿಲ್ಲದೆ ಹೇಳಬಹುದು.

ಗೊಲ್ಲರು ಕರ್ನಾಟಕದ ಹೈನುಗಾರಿಕೆಗೆ, ಮಾಂಸದ ಮಾರುಕಟ್ಟೆಗೆ, ಕೃಷಿಗೆ, ಕುರಿ ಸಾಕಣೆಗೆ ಸಲ್ಲಿಸಿರುವ ಕಾಣಿಕೆ ದೊಡ್ಡದಾಗಿದೆ. ಇವರ ಮುಖ್ಯ ಕಸುಬು ಹೈನುಗಾರಿಕೆ, ಕುರಿ ಸಾಕಣೆ ಹಾಗೂ ಇತರೆ ಕೃಷಿ ಸಂಬಂಧಿ ಕೆಲಸಗಳು. ಗೊಲ್ಲರ ಸಾಮಾಜಿಕ ಚಲನೆಯನ್ನು ಗಮನಿಸಿದರೆ ನಿರಾಶೆಯಾಗುತ್ತದೆ. ಅವರ ಜನಸಂಖ್ಯೆಗೆ ಅನುಗುಣವಾದ ರಾಜಕೀಯ ಪ್ರಾತಿನಿಧ್ಯವಾಗಲೀ ಸಾಮಾಜಿಕ ಪ್ರಾತಿನಿಧ್ಯವಾಗಲೀ ದೊರಕಿಲ್ಲ, ಅವರ ಶ್ರಮದಿಂದ ಮೇಲೆಬಂದ ಧಾರ್ಮಿಕ ಮಠಗಳು ಕೂಡ ಅವರಿಗೆ ಯಾವುದೇ ಪ್ರಾತಿನಿಧ್ಯವನ್ನು ನೀಡಿಲ್ಲ. ಚಿತ್ರದುರ್ಗದ ಮುರುಘಾ ಮಠದಲ್ಲಿ ಶ್ರೀ ಮುರುಘಾ ರಾಜೇಂದ್ರ ಸ್ವಾಮಿಗಳು ಇತ್ತೀಚೆಗೆ ಯಾದವ ಮಠವನ್ನು ಸ್ಥಾಪಿಸಲು ಅನುವು ಮಾಡಿಕೊಟ್ಟಿರುವುದನ್ನು ಬಿಟ್ಟರೆ ತುಮಕೂರು ಜಿಲ್ಲೆಯ ಸಿದ್ಧಗಂಗಾ ಮಠದಿಂದ ಕಿಂಚಿತ್ ಪ್ರಯೋಜನವೂ ಆಗಿಲ್ಲ.

ಮಾಧ್ಯಮಗಳಲ್ಲಿ ಬಿಂಬಿತವಾಗಿರುವ ಶ್ರೀ ಶಿವಕುಮಾರ ಸ್ವಾಮಿಗಳು ಮತ್ತು ಸಿದ್ಧಗಂಗಾ ಮಠಕ್ಕೂ ವಾಸ್ತವದಲ್ಲಿ ಆ ಮಠವು ಕೆಳಜಾತಿ ಮತ್ತು ಸಮುದಾಯಗಳಿಗೆ ಮಾಡಿರುವ ಸೇವೆಗೂ ಅಜಗಜಾಂತರ ವ್ಯತ್ಯಾಸವಿದೆ. ಕಾಡುಗೊಲ್ಲರು ಸಿದ್ಧಗಂಗಾ ಮಠವನ್ನು ಈ ಮಟ್ಟಕ್ಕೆ ತಂದುನಿಲ್ಲಿಸುವಲ್ಲಿ ಇತರೆ ಹಿಂದುಳಿದ ಜಾತಿಗಳವರಂತೆ ಕಾರಣರಾಗಿದ್ದಾರೆ. ಶಿವಕುಮಾರ ಸ್ವಾಮಿಗಳಿಗಿಂತ ಹಿಂದೆ ಇದ್ದ ಶ್ರೀ ಉದ್ಧಾನಪ್ಪ ಅಥವಾ ಕಾಡುಗೊಲ್ಲರು ಕರೆಯುವಂತೆ ಉದ್ದಂಡಪ್ಪ ಸ್ವಾಮಿಗಳು ಎಲ್ಲಾ ಹಿಂದುಳಿದ ಜಾತಿಗಳ ಮೇಲೆ ಅಪಾರವಾದ ಹಿಡಿತವನ್ನು, ಪ್ರಭಾವವನ್ನು ಹೊಂದಿದ್ದರು. ಇದಲ್ಲದೆ. ಕಾಡುಗೊಲ್ಲರ ಹಟ್ಟಿಗೆ ಆಗಾಗ ಭೇಟಿ ನೀಡುತ್ತಿದ್ದ 'ಅಯ್ನೋರು' ಮತ್ತು ಜಂಗಮರಿಗೆ ಒಣಪಡಿಯನ್ನು ಸಲ್ಲಿಸಲಾಗುತ್ತಿತ್ತು. 'ಒಣಪಡಿ' ಎಂದರೆ ಒಣಗಿದ ಹೆಸರು ಬೇಳೆ, ಅಕ್ಕಿ, ಒಣಮೆಣಸಿನ ಕಾಯಿ, ಬಾಳೇಹಣ್ಣು, ತೆಂಗಿನಕಾಯಿಯಲ್ಲದೆ, ಆಗಿನ ಕಾಲದಲ್ಲಿಯೇ ಒಂದು ರೂಪಾಯಿಯನ್ನು ಕಾಣಿಕೆಯಾಗಿ ಸಲ್ಲಿಸುತ್ತಿದ್ದರು. ಈ ರೀತಿ ಎಲ್ಲಾ ಹಿಂದುಳಿದ ಜಾತಿಗಳು ಮಾಡುತ್ತಿದ್ದುದರಿಂದ ಮಠ ಸಮೃದ್ಧವಾಗಿ ಬೆಳೆಯಿತು. ಸಾಮಾನ್ಯವಾಗಿ ಹಿಂದುಳಿದ ಜಾತಿಗಳು ಭೂಮಿಯನ್ನು ಹೊಂದಿರದೆ ಬಹುತೇಕ ಕೃಷಿ ಭೂಮಿಯು ಲಿಂಗಾಯತರ ಒಡೆತನದಲ್ಲಿತ್ತು. ಸಿದ್ಧಗಂಗಾ ಮಠ ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಜನರನ್ನು ಹಿಡಿತದಲ್ಲಿಟ್ಟರೆ, ಲಿಂಗಾಯತ ಜಮೀನ್ದಾರರು 'ಅಯ್ನೋರು' ಎಂದು ಕರೆಸಿಕೊಳ್ಳುತ್ತಾ ಬದಾಜಗತೆಯನ್ನು ತಮ್ಮ ಅಧೀನದಲ್ಲಿಟ್ಟಿದ್ದರು.

ಸಿದ್ಧಗಂಗಾ ಮಠವು ಲಿಂಗಾಯತ ಹೆಸರಿನಲ್ಲಿ ಬ್ರಾಹ್ಮಣರ ರೀತಿಯಲ್ಲಿಯೇ ಪುರೋಹಿತಶಾಹಿತ್ವದ ದಬ್ಬಾಳಿಕೆಯನ್ನು ಮಾಡುತ್ತಿರುವುದು [illegible]

● ಡಾ. ಸಿ.ಜೆ. ಲಕ್ಷ್ಮೀಪತಿ, ತುಮಕೂರು

ಗಣಿ ಧಣಿಗಳಿಗೆ ಬಿಜೆಪಿ ಈಗ ಕಾಲಕಸ!



ಬಳ್ಳಾರಿ ಗಣಿ ಧಣಿಗಳು ರಾಜ್ಯ ಬಿಜೆಪಿಯನ್ನು ತಮ್ಮ ತಾಳಕ್ಕೆ ತಕ್ಕಂತೆ ಕುಣಿಸುತ್ತಿದ್ದದ್ದು ಹಳೆಯ ಸುದ್ದಿ. ಈಗ ಗಣಿ ಧೂಳಿನೊಂದಿಗೆ ಬಳ್ಳಾರಿಯಿಂದ ತೇಲಿಬಂದಿರುವ ಹೊಸ ಸುದ್ದಿ ಏನೆಂದರೆ ಇತ್ತೀಚೆಗೆ ರಾಜ್ಯದ ಬಿಜೆಪಿ ನಾಯಕರ ಅವಶ್ಯಕತೆಯೇ ಗಣಿ ಧಣಿಗಳಿಗೆ ಇಲ್ಲವಂತೆ. ಆ ಕಾರಣಕ್ಕಾಗಿಯೇ ಅವರು ಮೊನ್ನಿನ ಚುನಾವಣೆ ಸಂದರ್ಭದಲ್ಲಿ "ನಮ್ಮ ಪರ ಪ್ರಚಾರಕ್ಕೆ ಬಳ್ಳಾರಿಗೆ ಬನ್ನಿ" ಎಂದು ಯಾವ ರಾಜ್ಯ ಬಿಜೆಪಿ ನಾಯಕರನ್ನೂ ಕರೆಯಲಿಲ್ಲ. ಮಾತ್ರವಲ್ಲ, ತಮ್ಮ ಜಿಲ್ಲೆಯ ಬಿಜೆಪಿ ಅಭ್ಯರ್ಥಿಗಳ ಪ್ರಚಾರ ಪತ್ರಗಳಲ್ಲಿ ಯಾವ ರಾಜ್ಯ ನಾಯಕರ ಹೆಸರನ್ನಾಗಲಿ, ಮೂರ್ತಿಯನ್ನಾಗಲಿ ಬಳಸಲಿಲ್ಲ.

ಅಷ್ಟೇ ಅಲ್ಲ, ಚುನಾವಣೆಗೆಂದು ರೆಡ್ಡಿ ಬಳಗ ರಾಜ್ಯದ ಬೇರೆ ಭಾಗಗಳಿಗೆ ಹೋಗಿ ಪ್ರಚಾರ ನಡೆಸಲಿಲ್ಲ. ನೆಪಮಾತ್ರಕ್ಕೆ ಎಂಬಂತೆ ಜನಾರ್ದನ ರೆಡ್ಡಿ ಬೆಂಗಳೂರಿಗೆ ಹೋಗಿ ರೋಡ್ ಶೋ ನಡೆಸಿದರಷ್ಟೇ. ಸಚಿವ ಶ್ರೀರಾಮುಲು ಬಳ್ಳಾರಿಯಲ್ಲಿಯೇ ಬೀಡು ಬಿಟ್ಟಿದ್ದರೆ, ಕರುಣಾಕರರೆಡ್ಡಿ ಹೆಚ್ಚುಕಡಿಮೆ ನಾಪತ್ತೆಯಾಗಿದ್ದರು ಎಂದು ರಾಜ್ಯ ಬಿಜೆಪಿ ನಾಯಕರೇ ಮಾತನಾಡಿಕೊಳ್ಳುತ್ತಿದ್ದಾರೆ.

ಇಂತಹ ಪ್ರಮುಖ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಬಗ್ಗೆ ರೆಡ್ಡಿ ಸಹೋದರರಿಗೆ ವೈರಾಗ್ಯ ಬಂದಿದ್ದೇಕೆ? ಇದರ ಹಿಂದೆ ಬೇರೆ ಉದ್ದೇಶಗಳಿವೆಯೇ ಎಂದು ಆರ್‌ಎಸ್‌ಎಸ್ ಮಂದಿ ಚಿಂತಿಸಿ, ಚಿಂತಿಸಿ ಉತ್ತರ ಗೊತ್ತಾಗದೆ ತಮ್ಮ ಚೆಡ್ಡಿ ಒದ್ದೆಮಾಡಿಕೊಂಡಿದ್ದಾರಂತೆ. ಇನ್ನು, ತಮ್ಮ ನೆಚ್ಚಿನ ನಾಯಕಿ ಸುಷ್ಮಾ ಸ್ವರಾಜ್‌ರನ್ನು ಪ್ರಚಾರಕ್ಕೆಂದು ಬಳ್ಳಾರಿಗೆ ಕರೆಸಿಕೊಂಡಿದ್ದ ರೆಡ್ಡಿ ಬ್ರದರ್ಸ್, ಅವರನ್ನು ಬೇರೆ ಕಡೆ ಪ್ರಚಾರಕ್ಕೆ ಕಳುಹಿಸದೇ ಹಾಗೆಯೇ ವಾಪಾಸು ಕಳಿಸಿದರು. ಅಲ್ಲದೆ "ಸುಷ್ಮಾರೇ ಮುಂದಿನ ಪ್ರಧಾನಿ" ಎಂದು ಬಳ್ಳಾರಿಯಲ್ಲಿ ಘೋಷಿಸಿದರು ಕೂಡ (ಅದ್ವಾನಿ ಪ್ರಧಾನಿಯಾಗುವುದು ಇವರಿಗೆ ಇಷ್ಟವಿಲ್ಲವೇನೋ?). ಬಳ್ಳಾರಿಗೆ ಬಂದ ರಾಷ್ಟ್ರೀಯ ನಾಯಕಿ ಸುಷ್ಮಾ ಹೀಗೆ ಒಂದೇ ಕಡೆ ಪ್ರಚಾರ ನಡೆಸಿ ಹಿಂದಿರುಗಿದ್ದು ಏಕೆ? ಕಳೆದ ಚುನಾವಣೆಯಲ್ಲಿ ಆಕೆಯನ್ನು ಕಟ್ಟಿಕೊಂಡು ಸುತ್ತಿದ್ದ ನಾಯಕರಿಗೆ ಯಾಕೆ ಆಕೆ ಈಗ ಬೇಡವಾದರು? ಎಂಬೆಲ್ಲಾ ಪ್ರಶ್ನೆಗಳು ಈಗ ಬಿಜೆಪಿ ವಲಯದಲ್ಲಿ ಬಿಸಿಬಿಸಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿವೆ. ಈ ಚುನಾವಣೆ ಸಂದರ್ಭದಲ್ಲಿ ರೆಡ್ಡಿ ಬ್ರದರ್ಸ್ ವರ್ತಿಸಿದ ರೀತಿಯನ್ನು ನೋಡಿದರೆ ಅವರಿಗೆ ರಾಜ್ಯನಾಯಕರೀಗ ಕಾಲಕಸವಾಗಿದ್ದಾರೆ ಎನ್ನುತ್ತಿದೆ ಚೆಡ್ಡಿ ವಲಯ.

ಹೊಸ ಗಣಿ ನೀತಿಯ ಧಮಕಿ!

ಇದೆಲ್ಲದರ ನಡುವೆ ಚಿಕ್ಕಮಗಳೂರಿನಲ್ಲಿ ಪ್ರಚಾರ ನಡೆಸುತ್ತಾ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸದಾನಂದ ಗೌಡ "ಚುನಾವಣೆ ನಂತರ ರಾಜ್ಯ ಹೊಸ ಗಣಿನೀತಿ ಜಾರಿಗೆ ತರಲಿದೆ" ಎಂದು ಪ್ರಕಟಿಸಿ ಎಲ್ಲರೂ ಹುಬ್ಬೇರಿಸುವಂತೆ ಮಾಡಿದ್ದರು. ಇದ್ದಕ್ಕಿದ್ದ ಹಾಗೆ ಗೌಡರು ಈ ಹೇಳಿಕೆ ನೀಡಲು ಕಾರಣವೇನು? ಅವರೇನು ಈ ರಾಜ್ಯದ ಮುಖ್ಯಮಂತ್ರಿಯೇ? ಎಂದು ಬಿಜೆಪಿ ಕಾರ್ಯಕರ್ತರೇ ಕೇಳುತ್ತಿದ್ದಾರೆ. ನಿಜಸಂಗತಿ ಎಂದರೆ, ರೆಡ್ಡಿ ಮತ್ತು ಗೌಡರ ನಡುವೆ ನಡೆಯುತ್ತಿದ್ದ ಘರ್ಷಣೆ ಈಗ ತಾರಕಕ್ಕೇರಿದೆ. "ಚುನಾವಣೆ ಮುಗಿಲಿ, ನಿಮಗೊಂದು ಗತಿ ಕಾಣಿಸುತ್ತೇವೆ" ಎಂದು ಪರಸ್ಪರ ಧಮಕಿ ಹಾಕಿದ್ದೂ ಆಗಿದೆ.

ರಾಯಚೂರು ಲೋಕಸಭಾ ಅಭ್ಯರ್ಥಿಯನ್ನು ಕೊನೆಯ ಕ್ಷಣದಲ್ಲಿ ಬೇಕೆಂತಲೇ ರೆಡ್ಡಿ ಪಡೆ ಅದಲು-ಬದಲು ಮಾಡಿತ್ತು. ಹೀಗೆ ಮಾಡುವಾಗ ರಾಜ್ಯ ಘಟಕದ ಅಧ್ಯಕ್ಷನಾದ ತನ್ನನ್ನು ಒಂದು ಮಾತೂ ಕೇಳಲಿಲ್ಲ ಎಂಬುದು ಹಲ್ಮುಖಿ ಗೌಡರ ಸಿಟ್ಟು. ಆದರೆ ರಾಯಚೂರಿನಲ್ಲಿ ತಾವು ಹೇಳಿದ ಅಭ್ಯರ್ಥಿಗೆ ಟಿಕೆಟ್ ಕೊಡಿ ಎಂದರೆ ಗೌಡರು ರಗಳೆ ತೆಗೆಯುತ್ತಿದ್ದರು ಎಂಬುದು ರೆಡ್ಡಿ ಪಡೆಯ ತರ್ಕ. ಆದ್ದರಿಂದಲೇ ಈ ರೀತಿ ಪಕ್ಷದ ಅಧ್ಯಕ್ಷನನ್ನೇ ಯಾಮಾರಿಸಿ ತಮ್ಮ ಅಭ್ಯರ್ಥಿ ಫಕೀರಪ್ಪನನ್ನು ಕಣಕ್ಕಿಳಿಸಿತ್ತು ರೆಡ್ಡಿ ಪಡೆ.

ಇದೆಲ್ಲ ಹೀಗೆ ಮುಂದುವರೆದರೆ ನಾಳೆ ರೆಡ್ಡಿಗಳನ್ನು ಹದ್ದುಬಸ್ತಿನಲ್ಲಿಡಲಾಗುವುದಿಲ್ಲ, ಬದಲಾಗಿ ಅವರು ಇಡೀ ಪಕ್ಷವನ್ನೇ ಹೈಜಾಕ್ ಮಾಡಬಹುದು ಎಂಬ ಆತಂಕದಿಂದಲೇ ಗೌಡರು "ಹೊಸ ಗಣಿ ನೀತಿ" ಬಗ್ಗೆ ಅಬ್ಬರಿಸಿದ್ದು. ಈ ಚೆಡ್ಡಿ ಮತ್ತು ರೆಡ್ಡಿಗಳ ಕದನ ಯಾವ ಮಟ್ಟಕ್ಕೆ ಹೋಗುತ್ತದೋ ಕಾದುನೋಡಬೇಕು.

ವರದಿಗಾರ

ಚೆಡ್ಡಿ ವರದಿಗಾರರ ಷಡ್ಯಂತ್ರ

ಶಿವಮೊಗ್ಗದುದ್ದಕ್ಕೂ [illegible] ಪ್ಲಾಲೆಕ್ಸ್ [illegible] ಜನ ಕಣ್ಣಾರ ಕಂಡಿದ್ದಾರೆ. ಶಿವಮೊಗ್ಗ ಮೆಡಿಕಲ್ ಕಾಲೇಜಿನ [illegible] ಪಂಕಜ್‌ಕುಮಾರ್ [illegible] ಕಣ್ಣು ಹಾಕುತ್ತಿಲ್ಲವೆಂದರೆ ಏನರ್ಥ?

[illegible] ಜೋಡಿಸಿದ ಎಂಬುದಕ್ಕೆ ಇಂಥ ಅನೇಕ ನಿದರ್ಶನಗಳಿವೆ. ಆದರೆ ಶಿವಮೊಗ್ಗದ ಬಹುತೇಕ ಜನಿವಾರಧಾರಿ ಪತ್ರಕರ್ತರ [illegible] ಅವರ ವರದಿಗಳು ಹೇಗಿರುತ್ತವೆ ಎಂದರೆ; ಬಂಗಾರಪ್ಪ ಕಾಯಿಲೆ ಬಿದ್ದು ಆಸ್ಪತ್ರೆ ಸೇರಿದ್ದಾರೆಂದು [illegible] ಜನ 'ಅಯ್ಯೋ, ಬಂಗಾರಪ್ಪ ಗೆದ್ದು ಬಿಡ್ತೇ [illegible]

[illegible] ಬೇಕೆ?

ಬಿಜೆಪಿ ಎಷ್ಟು ಸೀಟು ಗೆಲ್ಲುತ್ತೆ?

ಚುನಾವಣೆ ಘೋಷಣೆಯಾದಾಗ ಬಿಜೆಪಿಯ ಯಾವ ನಾಯಕರನ್ನಾದರೂ ಈ ಪ್ರಶ್ನೆ ಕೇಳಿದ್ದರೆ 24, 26 ಹೀಗೆ ಆತ್ಮವಿಶ್ವಾಸದಿಂದ ಉತ್ತರ ನೀಡುತ್ತಿದ್ದರು. ಈಗ ಚುನಾವಣೆಯ ಒಂದು ಹಂತ ಮುಗಿದಿದೆ. ವಿವಿಧ ಸಮೀಕ್ಷೆಗಳು ಬಿಜೆಪಿ ಕಳೆದ ಬಾರಿಗೆದ್ದಷ್ಟು ಸ್ಥಾನಗಳನ್ನು ಗೆಲ್ಲುವುದು ಕಷ್ಟ ಎಂದು ಅಭಿಪ್ರಾಯ ಪಟ್ಟಿವೆ. ಹೀಗಾಗಿ ಈ ಪ್ರಶ್ನೆಗೆ ಈಗ ಬಿಜೆಪಿ ನಾಯಕರು ನೀಡುವ ಉತ್ತರವೇ ಬೇರೆಯಾಗಿ ಬಿಟ್ಟಿದೆ. "ನೀವು ನಿಜವಾಗಲೂ 24 ಸ್ಥಾನಗಳಲ್ಲಿ ಗೆಲ್ಲುತ್ತೀರಾ?'' ಎಂದರೆ "ಪ್ರಯತ್ನ ನಮ್ಮದು, ಮತದಾರರ ತೀರ್ಪಿಗೆ ತಲೆಬಾಗುತ್ತೇವೆ'' ಎಂದು ನುಣುಚಿಕೊಳ್ಳಲು ಪ್ರಾರಂಭಿಸಿದ್ದಾರೆ.

ಇನ್ನು ಮುಖ್ಯಮಂತ್ರಿ ಯಡ್ಡಿ "ಈ ಚುನಾವಣೆ ಫಲಿತಾಂಶ ರಾಜ್ಯ ಸರ್ಕಾರದ ಸಾಧನೆಯನ್ನು ಪ್ರತಿಬಿಂಬಿಸುವುದಿಲ್ಲ'' ಎಂಬ ಹೊಸ ರಾಗ ತೆಗೆದಿದ್ದಾರೆ. ಆದರೂ "24-25 ಸ್ಥಾನ ಗೆಲ್ಲುತ್ತೇವೆ'' ಎಂದು ತೊದಲುತ್ತಿದ್ದಾರೆ. ರಾಜ್ಯ ಬಿಜೆಪಿ ಅಧ್ಯಕ್ಷ ಹಲ್ಮುಖಿ ಗೌಡರಂತೂ ನಿರೀಕ್ಷೆಯಷ್ಟು ಸ್ಥಾನ ಗೆಲ್ಲುವುದು ಕಷ್ಟ ಎಂಬುದು ಗೊತ್ತಾಗುತ್ತಿದ್ದಂತೆಯೇ "ಫಲಿತಾಂಶಕ್ಕೂ ರಾಜ್ಯ ಸರ್ಕಾರದ ಆಡಳಿತದ ಸಾಧನೆಗೂ ಸಂಬಂಧವಿದೆ'' ಎಂದು ಹೇಳುವ ಮೂಲಕ ಮುಂದೆ ಯಡ್ಡಿಯನ್ನು ಗುಂಡಿಗೆ ಬೀಳಿಸುವ ಸಿದ್ಧತೆಗಳನ್ನು ಆರಂಭಿಸಿದ್ದಾರೆ.

ಸುವರ್ಣ ಸುದ್ದಿ ವಾಹಿನಿ ಮತ್ತು ನಂ. 1 ಚೆಡ್ಡಿ ಪತ್ರಿಕೆ ವಿಜಯ ಕರ್ನಾಟಕ ನಡೆಸಿದ ಸಮೀಕ್ಷೆಗಳು ಕೂಡ 'ಬಿಜೆಪಿ ಕಳೆದ ಬಾರಿಯಷ್ಟು ಸ್ಥಾನಗಳನ್ನು ಉಳಿಸಿಕೊಳ್ಳುವುದು ಕಷ್ಟ' ಎಂದೇ ಹೇಳಿದ್ದವು. ಆದರೆ ಚೆಡ್ಡಿ ಪತ್ರಿಕೆ ಸಂಪಾದಕ ವಿಶ್ವೇಶ್ವರ ಭಟ್ಟರಿಗೆ ತಾವು ನಡೆಸಿದ ಸಮೀಕ್ಷೆ ಮೇಲೆಯೇ ನಂಬಿಕೆ ಇದ್ದಂತಿಲ್ಲ. ಹೀಗಾಗಿ ತಮ್ಮ ಚೆಡ್ಡಿ ವರದಿಗಾರರನ್ನು ಮುಂದಿಟ್ಟುಕೊಂಡು ಮತ್ತೊಂದು ಬಾರಿ ಸಮೀಕ್ಷೆ ನಡೆಸಿ 'ಹೆಚ್ಚು ಕಡಿಮೆ ಎಲ್ಲ ಕಡೆಯೂ ಬಿಜೆಪಿ ಗೆಲ್ಲುತ್ತದೆ ಅಥವಾ ಮುಂದಿದೆ' ಎಂದು ಪ್ರತಿದಿನ ಪತ್ರಿಕೆಯಲ್ಲಿ ಶಂಖ ಊದಲು ಆರಂಭಿಸಿದ್ದಾರೆ. 'ಅನಂತು ಗೆಲುವು ಖಚಿತ', 'ಯೋಗಿಶ್ವರ್ ಯೋಗ ಕೂಡಿಬಂದಿದೆ', 'ಡಿಬಿಸಿ ಗೆದ್ದಾಗಿದೆ' ಎಂಬುದು ಪ್ರತಿದಿನದ ಸುದ್ದಿಯಾಗಿದೆ.






10ನೇ ಪುಟದಿಂದ ◀◀◀

ಇದಕ್ಕೆ ಕೇವಲ ಜಾತಿ ಕಾರಣವಲ್ಲ, ಬದಲಾಗಿ ದೇವೇಗೌಡ ಹಾಗೂ ರೇವಣ್ಣ ಹಾಸನದ ಸಮಗ್ರ ಅಭಿವೃದ್ಧಿಗೆ ಮಾಡಿರುವ ಕೆಲಸವೂ ಕಾರಣವಾಗಲಿದೆ. ಹಾಸನಕ್ಕೆ ಏನೇನು ಸವಲತ್ತುಗಳು ಸಿಕ್ಕಿವೆಯೆಂದರೆ

1. ಜಿಲ್ಲೆಗೆ ಶತಶತಮಾನಗಳಿಂದ ಬೇಕಿದ್ದ ಸರ್ಕಾರಿ ವೈದ್ಯಕೀಯ ಕಾಲೇಜು
2. ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್
3. ಪಶುವೈದ್ಯಕೀಯ ಕಾಲೇಜು
4. ಕೃಷಿ ಮಹಾ ವಿದ್ಯಾಲಯ
5. ಚನ್ನಪಟ್ಟಣ ಕೆರೆ ಅಂಗಳದಲ್ಲಿ ನೂತನ ಬಸ್ ನಿಲ್ದಾಣ
6. ಸಾವಿರಾರು ಕೋಟಿ ವೆಚ್ಚದಲ್ಲಿ ಜಿಲ್ಲೆಯ ರಸ್ತೆಗಳ ಅಭಿವೃದ್ಧಿ
7. ಕೈಗಾರಿಕಾ ಪ್ರದೇಶ ಸ್ಥಾಪಿಸಿ ಸಾವಿರಾರು ನಿರುದ್ಯೋಗಿಗಳಿಗೆ ಅವಕಾಶ
8. 100ಕ್ಕೂ ಹೆಚ್ಚು ನೂತನ ಕಾಲೇಜು ಸ್ಥಾಪನೆ
9. ಸರ್ಕಾರಿ ಕಾನೂನು ಕಾಲೇಜು
10. ಸರ್ಕಾರಿ ನರ್ಸಿಂಗ್ ಕಾಲೇಜು
11. ಜಿಲ್ಲೆಯಲ್ಲಿ ನೂರಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರ
12. ಎಲ್ಲಾ ತಾಲ್ಲೂಕುಗಳ ಸರ್ಕಾರಿ ಆಸ್ಪತ್ರೆ ಮೇಲ್ದರ್ಜೆಗೆ
13. ಹಾಸನದಿಂದ ಬೆಂಗಳೂರಿಗೆ ಸಾವಿರಾರು ಕೋಟಿ ವೆಚ್ಚದ ನಾಲ್ಕು ಪಥದ ರಸ್ತೆ
14. ಹಾಸನ-ಬೆಂಗಳೂರು ರೈಲ್ವೇ ಮಾರ್ಗ
15. ಹಾಸನ ಜಿಲ್ಲೆಗೆ 8000 ಆಶ್ರಯ ಮನೆಗಳು
16. ಜಿಲ್ಲೆಗೆ 2 ವಿಶೇಷ ಆರ್ಥಿಕ ವಲಯ
17. ಸಾವಿರಾರು ಮಂದಿಗೆ ಉದ್ಯೋಗ
18. ಪಶು ಆಹಾರ ಘಟಕ
19. ಜಿಲ್ಲೆಯಲ್ಲಿ ವಿದ್ಯುತ್ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ. 40ಕ್ಕೂ ಹೆಚ್ಚು ವಿದ್ಯುತ್ ಸಬ್‌ಸ್ಟೇಷನ್‌ಗಳು.

ಇವೆಲ್ಲವೂ ರೇವಣ್ಣ, ದೇವೇಗೌಡರ ನೇತೃತ್ವದಲ್ಲಿ ಜಿಲ್ಲೆಯಲ್ಲಿ ಮಾಡಿರುವ ಸಾಧನೆಗಳು. ಅದರಲ್ಲಿ ಸತ್ಯವಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ವಸ್ತುಸ್ಥಿತಿ ಹೀಗಿರುವಾಗ ಹಾಸನದ ಜನ ದೇವೇಗೌಡರನ್ನಲ್ಲದೇ ಇನ್ಯಾರನ್ನೇ ಆಗಲಿ ಯಾಕೆ ತಾನೇ ಬೆಂಬಲಿಸುತ್ತಾರೆ.



ಯಾವ ಸೀಮೆ ಯಲಕ್ಷನ್ ಕಮೀಸನ್ನ ಇದು?

ಜುಮ್ಮಿ ಯಾರನ್ನೋ ಬೈದುಕೊಂಡು ಬರು ು. ಬೈಗುಳದಲ್ಲೂ ಅವಳು ಎಚ್ಚರಿಕೆ ವಹಿಸಿ ುತ್ತಿದ್ದ ಪದಗಳನ್ನು ಗಮನಿಸಿದ ಕಾಳಮಾವ "ವತ್ತರಲ್ಲೇ ಜಗಳ ತಗದವ್ರುಳಲ್ಲ ಯಾರ ಜ್ವತೆಯಾ?" ು ತನ್ನಷ್ಟಕ್ಕೆ ಹೇಳಿಕೊಂಡ. ಅಷ್ಟರಲ್ಲಿ ಜುಮ್ಮಿ ದ ಬಂದಳು.

"ಯಾರ್ನ ಬೈತಿಲೆ ಜುಮ್ಮೀ?" ಎಂದ.

"ಅವುನ್ಯಾರೊ ಯಲಕ್ಸನ್ ಕಮೀಸನ್ನ ಕಣಮಾವ."

"ಬಂದಿದ್ದನಿಲ್ಲಿ?"


"ಅವುನ್ಯಾಕ್ ಬರಕ್ಕೋದನೂ? ಅವುನು ಕಳಿಸಿರೊ ಮಾಡ್ತಯಿರೊ ಹಾವುಳಿ ಜಾಸ್ತಿಯಾಗ್ಯದೆ."

"ಅವುರೇನಾವುಳಿ ಮಾಡಿದ್ರು, ಅದ್ಯಾರು ತೋರ್ಲೆ ತಿನಿ."

"ಅಲ್ಲಾ ಕಣಮಾವ, ನೀನೇ ಹೇಳು, ಸ್ವಾಮಾರ ುರೀಸ ಬತ್ತನೆ ಅಂದ್ರು. ಅದ್ಕೆ ಅವುನೆಸರ ಗ್ವಾಡೆ ಲೆ ಬರಸನ ಅಂತ ಹೋದ್ರೆ ಬರಿಯಂಗಿಲ್ಲ ಅಂತ ು ಗಲಾಟೆ ಮಾಡ್ತವಲ್ಲಾ, ಯಲಕ್ಸನ್ನಿಗೆ ನಿಂತೋನ ದ್ನ ಬರಿಯಂಗಿಲವೆ?" ಎಂದು ಸಿಡುಕಿದಳು.

"ಬರಿಯಂಗಿಲ್ಲ ಕಣೆ" ಎಂದ ಉಗ್ರಿ.

"ನೀನೂ ಅಂಗೇ ಅಂತಿಯಲ್ಲಾ ನಾವೇನಿವುರತ ್ನ ಕೇಳಿದವೆ?"



"ಚುನಾವಣೆ ಕಮಿಶನ್ನು ಮದ್ದಿನಂಗಲ್ಲ. ಈಗ ಭಾಳಾ ಶನ್ನಾಗ್ಯದೆ."

"ಕಂಡಿಸನ್ನಾಗೆ ಇರ್ಲಿ, ನಾವೇನು ಬ್ಯಾಡ ಅಂದವೆ? ು ಮುಂದ್ಲು ಗ್ವಾಡೆ ಮ್ಯಾಲೆ ಅಂಬರೀಸ ಅಂತ ರು ಬರಿಯಂಗೂ ಇಲವೆ?"

"ನೀನೇನೊ ಬರುಸ್ತಿ, ಅಮ್ಯಾಲೆ ಬಿಜೆಪಿಗಳು ಬಂದು ಕ ಮ್ಯಾಲೆ ಬರಿತವೆ. ಜೆಡಿಎಸ್‌ನೋರಂತೂ ನಿನ್ನಂತ ುಸು ಬರುದು, ವರೆ ಹೊರಿಸಿಬುಟ್ಟು ಹೋಯ್ತರೆ. ್ಯಾಲೆ ಯಾರಳುಸುಬೇಕು ಅದಾ?"

"ಮದ್ನು ಬರಿತಿರಲಿಲವೆ?"

"ಬರಿತಿದ್ರು. ಊರಲ್ಲಿರೊ ಗ್ವಾಡೆ, ಕಾಡಲ್ಲಿರೊ ಬ್ಯಟ್ಟ, ದ ಮ್ಯಲ್ಯಲ್ಲ ಬರಿತಿದ್ರು. ನಮ್ಮ ಜನಕ್ಕೆ ಹಾಳು ತದು ಗೊತ್ತೆ ವರತೂ ಸರಿ ಮಾಡದು ಗೊತ್ತಿಲ್ಲ. ಚುನಾವಣೆ ಕಮಿಷನ್ನು ಯಾರೂ ಗ್ವಾಡೆ ಮ್ಯಾಲೆ ಬರದು ಊರಿನ ಅಂದ ಕೆಡಸಬ್ಯಾಡಿ, ಮನಿಮನಿಗೋಗಿ ಓಟು ಕೇಳಿ, ಸರಕಲ್ಲಲಿ ನಿಂತಗಂಡು ಬಾಷಣ ಮಾಡಿ ಅಂತ ಕಾನೂನು ಮಾಡ್ಯದೆ. ಅದ ಪಾಲಸಬೇಕಾದ್ದು ನಿಮ್ಮ ಕರ್ತವ್ಯ."

"ಹಳಬರೇನೊ ಸರಿ, ವಸಬುರು ಯಂಗೆ ಗೊತ್ತಾಗ ಬೇಕ್ಲ? ಅವುನು ಪೋಟ ಅಂಟಿಸಿ ಹೆಸರು, ಚಿನ್ನೆ ಬರದರಲವೆ ಗೊತ್ತಾಗದು?" ಎಂದ ಸೀರ.

"ನೀನೇಳಂಗೆ ವಸಬರಿಗೆ ಒಂದೀಟು ತ್ವಂದ್ರಾಗ್ಯದೆ."

"ತ್ವಂದ್ರೇನು, ವಸುಬ್ರು ನಿಂತಗಳಂಗೇಯಿಲ್ಲ ಕಂಡ್ಯ. ಕಾಂಗ್ರೆಸು, ಬಿಜೆಪಿ, ಜೆಡಿಎಸ್ಸೇನೋ ಸರಿ. ಅವುನ್ಯಾರೊ ಸರುವ್ವೋದಯ ಅಂತ ನಿಂತವುನೆ. ಅವುನ್ಯಾರು, ಅವುನ ಗುರುತೇನು ಅಂತ ಯಾವನಿಗಾರ ಗೊತ್ತಿದ್ದತೆ? ಅವುನ್ನ ಸರಿಕಲ್ಲಲಾರ ಕಟ್ಟಕ್ಕೆ ಪರಮಿಸನ್ ಕೊಡಬೇಕಾಗಿತ್ತು ಕಂಡ್ಯ ಉಗ್ರಿ" ಎಂದ ಸೀರ.

"ನೀನೇಳದ ಒಪ್ಪಿಗತ್ತಿನಿ ಕಣಮಾವ. ನೀನು ಮದ್ದೆ ಇದ್ನ್ಯಲ್ಲಿ ಹೇಳಿದ್ರೆ ಮ್ಯಾಲಕ್ವಾಟೆ ಹತ್ರಕ್ಕೆ ಕಳುಸ್ತಿದ್ದೆ."

"ಮ್ಯಾಲಕ್ವಾಟಿಗ್ಯಾಕ್ಲ?"

"ಯಲಕ್ಸನ್ ನ್ಯಡಸೋ ಗೋಪಾಲಸ್ವಾಮಿ ಮ್ಯಾಲಕ್ವಾಟೆ ನಾಮ ಯಳದವ್ರುನೆ ಅದ್ಕೆ!"

"ಅಧಿಕಾರಿಯಾಗಿದ್ರು ನಾಮ ಯಳದಿದ್ದನೆ?"

"ಊ. ಅವುನು ಈ ಕಾಲ್ದೊನಲ್ಲ, ಅದೊಂದು ಕಾಲ ಇತ್ತು, ಜನ ಹಣೆಮ್ಯಾಲೆ ತಮ್ಮ ಜಾತಿ ಬರಕಂಡು ಕಾಲ ಹಾಕೋರು. ಆ ಕಾಲ್ದ ಗೋಪಾಲಸ್ವಾಮಿ ಹಣೆಗೆ ವಳ್ಳೆ ಕೊಡ್ಡಿ ಯೇಟು ಬಿದ್ದಂಗೆ ನಾಮ ಹಚಗಂಡು ಬರೋನು. ಅವುನ್ನ ನೋಡಿದೇಟಿಗೆ ಬಿಜೆಪಿಗಳಿಗೆ ಖುಷಿಯಾಗದು. ಕಾಂಗ್ರೆಸ್ಸಿನೋರಿಗೆ ಅಳುಕಾಗದು. ಅಂತೂ ರೀಟೇರಾದ ಅತ್ಲಗೆ."

"ರಿಟೇರಾರ ಆಗ್ಲಿ, ನ್ಯಗದು ಬಿದ್ದೋಗ್ಲಿ, ಇಂತ ಕ್ಯಲಸನ ಮಾಡದು? ಯಲಕ್ಸನ್ನು ಅನ್ನದೆ ಗೊತ್ತಾಯ್ತಾಯಿಲವಲ್ಲ, ಯಲಕ್ಸನ್ನು ಅಂದ್ರೆ ಒಂಥರಾ ಹಬ್ಬಿದ್ದಂಗಲವೇನ್ಲ?" ಎಂದ ಸೀರ.

"ಸೀರ ಚಿಗಪ್ಪ ಹೇಳದು ಹಂಡ್ರೆಡ್ ಪರಸೆಂಟು ಕರಟ್" ಎಂದುಕೊಂಡು ವಾಟಿಸ್ಸೆ ಬಂದ.

"ಅದ್ಯಂಗೆ ಕರಟ್ಟು ಅಂತಿಯೋ?"

"ನೋಡೊ ಉಗ್ರಿ, ಮದ್ಲಿಗೆ ಯಲಕ್ಷನ್ ಅಂದ್ರೆ ಅದೊಂತರ ದನಿನ ಜಾತ್ರೆ ತರನೂ ಇರೋದು. ಕ್ಯಾಂಡೇಟ್ ಮ್ಯರವಣಿಗೆ ಮಾಡವ್ರು, ಚಪ್ಪರ ಹಾಕವ್ರು, ಮಾವಿನ ಸೊಪ್ಪು ಕಟ್ಟವ್ರು, ಅವುನೆಸರ ಎಲ್ಲಿ ಅಂದ್ರಲ್ಲಿ ಬರಿತಿದ್ರೂ. ನೈನ್ ಟೀನ್ ಎಯಿಟಿ ತ್ರಿನಲ್ಲಿ ನಾನೇ ನೇಗಿಲು ಹೊತ್ತ ರೈತನ ಚಿನ್ನೆನ ಇಡೀ ತಾಲ್ಲೂಕಿನಲ್ಲಿ ಬರದಿದ್ದೆ. ಬ್ಯಾನರ್ ವಲಿಯೋರು, ಪೇಂಟಿಂಗ್ ಮಾಡೋರು, ಕಟವುಟ್ ಮಾಡೋರು ದುಡಕತಿದ್ರು,



ಎಂಜಾಯ್ ಮಾಡೋರು, ಅದ್ಯಾವುದೂ ಇಲವಲ್ಲ ಈಗ, ಇದಕೇನಂತೀ?" ಎಂದ ವಾಟಿಸ್ಸೆ.

"ನೀನೇಳೊ ಲ್ಯಕ್ಕದಲ್ಲಿ ಒಂಥರಾ ಡಲ್ಲಾಗ್ಯದೆ ಯಲಕ್ಸನ್ನು."

"ಡಲ್ಲೇನು, ಪೂರಾ ಡಲ್ಲಾಗ್ಯದೆ. ಆದ್ರು ಯಲಕ್ಷನ್ನಿಗೆ ಅಂತ ಆಗೋ ಖರ್ಚು ಆಗೇ ಆಯ್ತದೆ. ಯಣ್ಣೆ ಯಾವುದೆ ಟ್ರಬಲ್ಲಿಲ್ಲದಂಗೆ ಸರಬರಾಜಾಯ್ತಾ ಅದೆ. ಯಾವ ಓಟು ಡವುಟದೊ ಅದನ್ನ ಖರೀದಿ ಮಾಡೋ ಬಟಾವಡೆನೂ ನ್ಯಡಿತಾ ಅದೆ. ಅಂತೂ ಅಂಗೆ ತಡದ ದುಡ್ಯಲ್ಲ ಹಿಂಗೋಯ್ತಾ ಅದೆ."

"ಅಂಬುರೀಸ ಯಾರಿಗೂ ಏನ್ನು ಕೊಡ್ತಯಿಲ್ಲ ಕಂಡ್ಯ" ಎಂದಳು ಜುಮ್ಮಿ.

"ಅವುನು ಮದ್ಲಿಂದ ಅಂಗೆ ಅಲವೇನಕ್ಕ. ಸುಮ್ಮನೆ ಕೈಬೀಸಿಕಂಡೋಗಿ ಗೆಲ್ತನೆ. ಆದ್ರೀಸತಿ ಅಷ್ಟು ಸುಲಬಲ್ಲ."

"ಹಿಂದೆ ವಳ್ಳೆತನಕೆ ಸುಮ್ಮನೆ ಓಟಾಕದು ನ್ಯಡದದೆ ಕಂಡ್ಯ. ಅಂಗೆ ನೋಡಿದ್ರೆ ಕಾಂಗ್ರೆಸ್‌ಗೆ ಆ ತರ ಜನ ಓಟು ಮಾಡ್ಯವುರೆ" ಎಂದ ಕಾಳಮಾವ.

"ಮಾಡೋರು ಅಂದ್ರೆ ಜನನೂ ಅಂಗಿದ್ರು. ಇವತ್ತು ಹುಡುಕು ನೋಡನ."

"ಇದೇ ಹೆಚ್‌ಟಿ ಕಿಷ್ಣಪ್ಪ ಒಂದು ಸತಿಯಾ ಕಾರಿನಲ್ಲಿ ವಸಿ ಶರಾಪು ತುಂಬಕಂಡು ಬಂದಿದ್ರು. ಬಂದೊರು ಹತ್ರಕೆ ಬಂದು ಗುಟ್ಟಾಗಿ 'ಗೌಡ್ರೆ ಏನಾರ ತಗತಿರಾ?' ಅಂದ್ರು. ನನಿಗೆ ರೇಗತ್ತಿಬುಡ್ತು. 'ಅಂತ ಜನಾ ಅಂತ ತಿಳಕಂಡ್ರ ನಮ್ಮ' ಅಂದೆ.

'ಅಂಗಲ್ಲಾ ಕೆಲುವುರು ಇಲ್ಲಿದ್ದರಂತೆ. ಏನೋ ಒಂದೀಟು ಗ್ವಣಗತಾಯಿದ್ದರಂತೆ. ಬೇಜಾರಾದಾರೂ ಅಂತ ವಳ್ಳೆ ಡ್ರಿಂಕ್ಸನೆ ತಂದಿದ್ದಿನಿ. ಅಂಥೋರ್‍ಯಾರಾರ ಇದ್ರೆ ಕಳಿಸಿ" ಅಂದ್ರು.

"ಯಾರೂ ಇಲ್ಲ ಸುಮ್ಮನೋಗಿ" ಅಂದೆ. ಅದೆ ಆಯ್ತು ಇನ್ನು ಉಸುರೆತ್ತಲಿಲ್ಲ" ಎಂದ ಕಾಳಮಾವ.

"ಆ ಟೈಮಲ್ಲಿ ನಾನು ನಿನ್ನ ಜ್ಞಾಪಕ್ಕೆ ಬರಲಿಲ್ವೆ ದ್ವಡಪ್ಪಾ?"

"ಆಗ ನೀನಿನ್ನ ಕುಡಿತಿರಲಿಲ್ಲ ಕಂಡ್ಯ. ಈಗ್ಲು ಸರ್ಕಾರ ಒಂದು ಕ್ಯಲಸ ಮಾಡಬವುದು. ಯಲಕ್ಷನ್ ಟೇಮಿಗೆ ಕುಡತ ಬಂದ್ ಮಾಡಬವುದು."

"ಅದಾಗದಿಲ್ಲ ದ್ವಡಪ್ಪ, ಚುನಾವಣೆ ಕಮೀಶನ್ರು ಯಲಕ್ಷನ್ ಮಾಡದ ಬುಟ್ಟು ಬರೀ ಕುಡಿಯೋರಿಡದು ಜೈಲಿಗೆ ತುಂಬದೇ ಆಯ್ತದೆ. ಅದಕಿಂತ್ಲೂ ಹಗಲ್ಯಲ್ಲಿ ಓಟು ಕೇಳಿಕೇಳಿ ಸುಸ್ತಾಗಿರೊ ಕಾಂಡೇಟು, ಅವುನ ಪಾಲೋಯರ್‍ರೆಲ್ಲಾ ರಾತ್ರಿ ಸೇರಿ ಪಾರ್ಟಿ ಮಾಡ್ತರೆ. ಅವುರ ಹಿಡಿಯಕ್ಯಾದತೆ?" ಎಂದ ವಾಟಿಸ್ಸೆ.

"ಯಾವ ಕಾನೂನು ಮಾಡಿದ್ರೂ ಅದ ಮುರ ದಾಕ್ತರಲ್ಲಾ?"

"ಅದಂಗೆ ದ್ವಡಪ್ಪ, ನೋಡು ಬ್ಯಾನರ್ರು, ಕಟೌಟು, ಮೈಕು ನಿಶಿದ್ದ ಅಂದ್ರು. ಕ್ಯಾಂಡೇಟ್‌ಗಳು ಅದೇ ದುಡ್ಡ ಹಂಚತರತ್ತಗೆ. ಯಾವನೋ ಸುರುವಾಡಿಕಂಡ, ಯಲ್ಲಾರು ಸುರುವಾದ್ರು ಹಂಚಕ್ಕೆ."

"ಅಂಗರೆ ವಳ್ಳೆ ಕ್ಯಾಂಡೇಟ್ ನಿಂತಿಲವೇನ್ಲ ಈಗ?"

"ನಿಂತವುರೆ ದ್ವಡಪ್ಪ, ಚಿಕ್ಕಮಗಳೂರಲ್ಲಿ ವಬ್ಬ ನಿಂತಿದ್ದನಂತೆ. ಭಾಳ ವಳ್ಳೆ ಮನುಸನಂತೆ. ಅವುನೆದ್ರಿಗೆ ಹಲ್ಲುಗಿಸಗ ಸದಾನಂದ ಹಲ್ಲು ಕಿರಿತಾಯಿದ್ದನಂತೆ. ಇನ್ನ ಬೆಂಗಳೂರಲ್ಲಿ ಬೈರೇಗೌಡನ ಮಗ ನಿಂತವುನೆ."

"ಯಾವ ಬೈರೇಗೌಡನ ಮಗ?"

"ವೇಮಗಲ್ ಬೈರೇಗೌಡನ ಮಗ. ಕಿಷ್ಣ ಭೈರೇಗೌಡ ಅಂತ. ವಳ್ಳೆ ಹುಡುಗ. ಡೀಸೆಂಟಾಗಿದ್ದನಂತೆ. ಅವುನು ರಾವುಲಗಾಂಧಿಗೂ ಪ್ರೆಂಡಂತೆ. ಅವುನೇನಾರ ಮುಂದೆ ಬಂದು ಕರ್ನಾಟಕದ ನಾಯಕ ಆದ್ರೆ ನನ್ನ ಮಕ್ಕಳಿಗೆಲ್ಲಿ ತ್ವಡರಗಾಲಾಯ್ತನೊ ಅಂತ ನಿಮ್ಮ ದ್ಯಾವೇಗೌಡಾಗ್ಲೆ ಅನಂತಕುಮಾರನಿಗೆ ಹಣ ಸಪ್ಳೆ ಮಾಡಿ 'ಏನಾರ ಮಾಡಿ ಕಿಷ್ಣ ಬೈರೇಗೌಡನ್ನ ಸೋಲಿಸಿ ಗೆದ್ದು ಬಾ' ಅಂದಿದ್ದನಂತೆ. ಇದಕೇನೇಳ್ತೀ?" ಎಂದ ವಾಟಿಸ್ಸೆ.

"ನೋಡು ಮತ್ತೆ!" ಎಂದ ಸೀರ.

"ಲ್ಯಕ್ಕ ಹಾಕು ಚಿಗಪ್ಪ, ಕೆಡತಿನಿ ಅಂತ ಇಂಗೂ ಕೆಟ್ಟರೆ?"

"ಯಾಕ್ಲ ಅಂತ ಅನ್ಯಾಯದ ಮಾತಾಡ್ತಿ?" ಎಂದ ಕಾಳಮಾವ.

"ಹೇಳೊ ಉಗ್ರಿ ನಮ್ಮ ದ್ವಡಪ್ಪನಿಗೆ ನೀನಾರವ."

"ಅದೂ ಹಿಂಗಿರಬವುದು. ಎಡೂರಪ್ಪನಿಗೆ ತ್ವಂದ್ರೆ ಕೊಡ್ಡಿ ಅಂತ ಅನಂತಕುಮಾರ ಗೆದ್ದು ಬರಕ್ಕೆ ಸಹಾಯ ಮಾಡಿರಬವುದು. ಅಂತೂ ಒಂದೇ ಕಲ್ಲಿಗೆ ಯರಡೇಟಿನ ಗುರಿ ದ್ಯಾವೇಗೌಡ್ರುದು" ಎಂದ ಉಗ್ರಿ. ■

...ಬ್ದುಲ್ ಖಯೂಂ

...ಈ ವ್ಯಕ್ತಿಯ ಹೆಸರು ಅಬ್ದುಲ್ ಖಯೂಂ. ಈಗ ಇವರು ಕರ್ನಾಟಕದ ಕಾಲೇಜುಗಳ ಮುಖ್ಯಸ್ಥರು; ಡೈರೆಕ್ಟರ್ ಆಫ್ ...ಜಿಯೇಟ್ ಎಜುಕೇಶನ್. ಈತನ ಹೆಸರು ನೆನಪಾಗುತ್ತದೆಯೇ? ಸ್ವಲ್ಪ ಯೋಚಿಸಿ ಜ್ಞಾಪಿಸಿಕೊಳ್ಳಿ. ಸುಲಭವಾಗಿ ...ಯುತ್ತದೆ.


...ಲವು ವರ್ಷಗಳ ಹಿಂದೆ ಖಯೂಂ ಗೌರ್ನಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನ (ಅಂದರೆ ಗ್ಯಾಸ್ ಕಾಲೇಜಿನ) ...ಪಲ್ ಆಗಿದ್ದರು. ಕಾಲೇಜಿಗೆ ಮಕ್ಕಳನ್ನು ಸೇರಿಸಿಕೊಳ್ಳುವಲ್ಲಿ, ಅಧ್ಯಾಪಕರನ್ನು ನೋಡಿಕೊಳ್ಳುವುದರಲ್ಲಿ, ಕಾಪಿ ಹೊಡೆಯಲು ...ಶ ಕೊಡದೆ ಇರುವಲ್ಲಿ ಕಟ್ಟುನಿಟ್ಟಾಗಿದ್ದ ಖಯೂಂ ಮೇಲೆ ಇಡೀ ಕಾಲೇಜಿನ ಜಾತಿವಾದಿಗಳಾದ ಅಧ್ಯಾಪಕರು, ...ರ್ಥಿಗಳು ಬಿದ್ದರು. ಸೈದ್ಧಾಂತಿಕವಾಗಿ ಖಯೂಂ ನಿಷ್ಠುರ ಎಡಪಂಥೀಯ; ಜಾತ್ಯತೀತತೆ ಈತನ ಉಸಿರು. ನಿಷ್ಠುರ ...ಷ್ಟನಾದ ಖಯೂಂ ಎಲ್ಲರನ್ನೂ ಸಮಾನರಂತೆ ಕಾಣುತ್ತಿದ್ದುದು, ಕಾಲೇಜಿನ ಖದೀಮರ ಹಲ್ಕಟ್ ಕೆಲಸಗಳನ್ನು ...ದಿದ್ದುದು ಇಲ್ಲಿಯ ಹುಳಗಳಿಗೆ ಹಿಡಿಸಲಿಲ್ಲ. ಖಯೂಂ ಜಾತಿವಾದಿಯೆಂದು ವಾದಿಸಲು ಯತ್ನಿಸಿದರು; ಆಗಲಿಲ್ಲ. ...ಜಿನಲ್ಲಿ ಗಣಪತಿ ಇಡಲು ಯತ್ನಿಸಿದರು; ಖಯೂಂ ಅದಕ್ಕೆ ಅವಕಾಶ ಕೊಡಲಿಲ್ಲ. ಮುಸ್ಲಿಮನೊಬ್ಬ ಇಷ್ಟೊಂದು ...ಾಗಿ ವರ್ತಿಸುತ್ತಿದ್ದುದು ಇಲ್ಲಿಯ ಚಿಡ್ಡಿಗಳಿಗೆ, ಅವರ ಬೆಂಬಲಿಗ ಜಾತಿವಾದಿಗಳಿಗೆ ನುಂಗಲಾರದ ತುತ್ತಾಯಿತು. ಸಲ್ಲದ ...ಎಬ್ಬಿಸಿ ಖಯೂಂ ಕೆಲಸ ಮಾಡದಂತೆ ತಡೆಯತೊಡಗಿದರು.

...ಈ ಜಾತಿವಾದಿಗಳ ಕೆಲಸ ಇಷ್ಟಕ್ಕೆ ಮುಗಿಯಲಿಲ್ಲ.

...ನಿಯಾರಿಟಿ ಪ್ರಕಾರ ಖಯೂಂ ಆಗಲೇ ಕೊಲಿಜಿಯೇಟ್ ಡೈರೆಕ್ಟರ್ ಆಗಬೇಕಿತ್ತು, ಕಾಲೇಜಿನ ಪ್ರಿನ್ಸಿಪಲ್‌ಗಿರಿಯ ...ಯಿಂದ ಅವರನ್ನು ಮುಕ್ತಗೊಳಿಸಬಹುದಿತ್ತು, ಆದರೆ ಈ ಸಲ "ಕ್ರಾಂತಿಕಾರಿಗಳು" ಇದು ಆಗದಂತೆ ನೋಡಿಕೊಂಡರು. ...ನಾಟಕ ವಿಮರ್ಶಕ, ಒಬ್ಬ ಕವಿ (ಇಬ್ಬರೂ ಲಿಂಗಾಯತರು ಮತ್ತು ಸಮಯ ಸಿಕ್ಕಾಗಲೆಲ್ಲ ಬಂಡಾಯ, ಕ್ರಾಂತಿ, ...ಸತೆಯ ಮಾತಾಡುವವರು) ರೆಡ್ಡಿ ಜಾತಿಯ ಬುದ್ಧಿಜೀವಿಯೊಬ್ಬನನ್ನು ಹಿಡಿದುಕೊಂಡು ಆತನ ಮೂಲಕ ಮಂತ್ರಿಯಾಗಿದ್ದ ಎಂ. ಚಂದ್ರಶೇಖರ್ ...ನ್ನು ಸಂಪರ್ಕಿಸಿದರು; ಇವರೆಲ್ಲ ಪ್ರಯತ್ನಿಸಿದ್ದು ಈಶ್ವರಪ್ಪ ಎಂಬ ಲಿಂಗಾಯತನೊಬ್ಬನನ್ನು ಡೈರೆಕ್ಟರ್ ಮಾಡಲು; ಲಿಂಗಾಯತ ನಾಟಕ ...ರ್ಶಕನೂ ಸೋಂಬ ಲಿಂಗಾಯತ. ಈ ಈಶ್ವರಪ್ಪನೂ ಸೋಂಬ ಲಿಂಗಾಯತ ಎಂಬುದು ಕಾಕತಾಳೀಯವಿರಲಾರದು. ರೆಡ್ಡಿ ಬುದ್ಧಿಜೀವಿಯ ...ು ಕೇಳಿದ ಎಂ. ಚಂದ್ರಶೇಖರ್ ಈಶ್ವರಪ್ಪನನ್ನು ಡೈರೆಕ್ಟರ್ ಮಾಡಿದರು. ಈ ಈಶ್ವರಪ್ಪ ಡೈರೆಕ್ಟರ್ ಆದ ಮೊದಲ ದಿನದಿಂದಲೇ ಈ ...ಯನ್ನು ಸುಲಿದು ತಿನ್ನತೊಡಗಿದ. ಈ ಬಗ್ಗೆ ನಮ್ಮಲ್ಲಿ ವರದಿ ಬಂದಿದೆ.

...ಈ ಕವಿ, ವಿಮರ್ಶಕ, ಬುದ್ಧಿಜೀವಿಗಳೆಲ್ಲ ಈಗ ಅಮಲು ಇಳಿದಂತೆ ಸಂತೋಷದಿಂದ ಖಯೂಂ ಡೈರೆಕ್ಟರಾದದ್ದನ್ನು ಸ್ವಾಗತಿಸುತ್ತಿದ್ದಾರೆ. ಇವರು ...ರೆಡ್ಡಿಯೊಬ್ಬನನ್ನು ಕಟ್ಟಿಕೊಂಡು ವಿಧಾನಸೌಧದ ಕಾರಿಡಾರ್ ತುಳಿಯದಿದ್ದುದು ಖಯೂಂ "ಅದೃಷ್ಟ"

...ಖಯೂಂ ಅವರಿಗೆ ಇನ್ನೂ ಸರ್ವೀಸ್ ಇರುವಂತಿದೆ; ಈ ಇಲಾಖೆಗೆ ಒಳ್ಳೆಯದನ್ನು ಮಾಡುವ ಅವಕಾಶ ಉತ್ತಮ ವ್ಯಕ್ತಿಯೊಬ್ಬರಿಗೆ ಸಿಕ್ಕಿದೆ.



ಕ್ರೈಸ್ಟ್ ಕಾಲೇಜು ಮತ್ತು ಶ್ರೀನಿವಾಸರಾಜು

ಕ್ರೈಸ್ಟ್ ಕಾಲೇಜಿನ ಇನ್ನೊಂದು ಪುಸ್ತಕ ಹೊರಬಂದಿದೆ. ಇದು ಹೆಣ್ಣುಮಗಳೊಬ್ಬಳ ಕವನ ಸಂಕಲನ. ಕ್ರೈಸ್ಟ್ ಕಾಲೇಜ್ ಮತ್ತು ಕನ್ನಡ ಪುಸ್ತಕ.... ಓದುಗರು ಹೆಮ್ಮೆಪಡಬೇಕಾದ ವಿಚಿತ್ರ ಇದು. ಕ್ರಿಶ್ಚಿಯನ್ನರ, ಬಹುಪಾಲು ಅಲ್ಪಸಂಖ್ಯಾತರ ಈ ಕಾಲೇಜಿನಿಂದ 25 ಕವನ ಸಂಕಲನಗಳೇ ಬಂದಿವೆ; ವಿದ್ಯಾರ್ಥಿಗಳು, ಹಿರಿಯರು, ಮಹತ್ವದ ಸಾಹಿತಿಗಳು ಬರೆದ ಅನೇಕ ಕನ್ನಡ ಪುಸ್ತಕಗಳು ಈ ಕಾಲೇಜಿನಿಂದ ಪ್ರಕಟವಾಗಿವೆ.


ಇದಕ್ಕೆಲ್ಲ ಕಾರಣ ಜಿ. ಶ್ರೀನಿವಾಸರಾಜು. ಇಲ್ಲಿ ಕನ್ನಡ ಪ್ರಾಧ್ಯಾಪಕರಾದ ಶ್ರೀನಿವಾಸರಾಜು ಎಂಥವರೆಂದು ಅವರ ಸ್ನೇಹಿತರಿಗೆ ಮಾತ್ರ ಗೊತ್ತು. ಸಂಕೋಚ ಸ್ವಭಾವದ, ಧ್ವನಿಯೆತ್ತಿ ಮಾತಾಡಲೂ ಹಿಂಜರಿಯುವ, ಮಾಡಿದ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವ, ಕನ್ನಡಾಭಿಮಾನದ ಸೊಕ್ಕು ಕಿಂಚಿತ್ತೂ ಇಲ್ಲದ ಸಜ್ಜನ ಈ ಶ್ರೀನಿವಾಸರಾಜು. ಎಂದೂ ಕ್ರಾಂತಿಯ ಕಹಳೆ ಊದದ ಶ್ರೀನಿವಾಸರಾಜು ಕ್ರೈಸ್ಟ್ ಕಾಲೇಜಿನಲ್ಲಿ ನಡೆಸಿರುವುದು ನಿಜವಾದ ಕ್ರಾಂತಿ.

ಉತ್ತಮ ಅಧ್ಯಾಪಕರೇ ವಿರಳವಾಗುತ್ತಿರುವ ಈ ಕಾಲದಲ್ಲಿ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಎಳೆಯ ಜೀವಗಳಲ್ಲಿ ಹುಮ್ಮಸ್ಸು ಹುಟ್ಟಿಸುವ ಶ್ರೀನಿವಾಸರಾಜು ತರಹದವರು ರಾಜರತ್ನಂ, ಎ.ಆರ್ ಕೃಷ್ಣಶಾಸ್ತ್ರಿ, ಶಿವರುದ್ರಪ್ಪ, ಕುವೆಂಪು ಮುಂತಾದವರ ಪರಂಪರೆಗೆ ಸೇರಿದವರು; ಹಾಗೆಯೇ ಈಚಿನ ಕಿ.ರಂ. ನಾಗರಾಜ, ಎಚ್.ಎಸ್. ರಾಘವೇಂದ್ರ ರಾವ್, ಸಿದ್ದಲಿಂಗಯ್ಯ, ರಾಮದಾಸ್ ಮುಂತಾದವರು ಶ್ರೀನಿವಾಸರಾಜು ಅವರ ಅರ್ಥಪೂರ್ಣ ಸಮಕಾಲೀನರು.



ಜುಲೈ 21, 1991

ಹಲವು ಧರ್ಮಗಳು, ಹಲವಾರು ಭಾಷೆಗಳು, ನೂರಾರು ಜಾತಿಗಳಿರುವ ಈ ದೇಶದ ಈ ವಿವಿಧತೆಯಲ್ಲಿ ಏಕತೆಯನ್ನು ಕಾಂಗ್ರೆಸ್ ಪಕ್ಷ ಸಂರಕ್ಷಿಸುತ್ತಾ ಬಂದಿದೆ. ತನ್ನ ಜಾತ್ಯತೀತ ನಿಲುವಿನಿಂದ ಅದೆಂದೂ ಹಿಂದೆ ಸರಿದಿಲ್ಲ. ಈ ಪಕ್ಷದ ಮುಖಂಡರೆಲ್ಲರೂ ಅತ್ಯುತ್ತಮ ಚಾರಿತ್ರ್ಯವುಳ್ಳವರೆಂಬುದು ಇದರರ್ಥವಲ್ಲ. ಆದರೆ ಇವರು ಎಡವಿದರೆ ಮತ್ತೊಮ್ಮೆ ಚುನಾವಣೆಯ ಮೂಲಕ ಇವರನ್ನು ಒದ್ದೋಡಿಸುವ ಶಕ್ತಿ ನಮಗಿದೆ. ಆದರೆ ಈ ಹಿಂದೂತ್ವವಾದಿಗಳು ಅಧಿಕಾರದ ಕುರ್ಚಿಗೆ ಅಂಟಿಕೊಂಡರೆ ಅವರನ್ನು ಕೆಳಗಿಳಿಸುವುದು ಅಷ್ಟು ಸುಲಭವಲ್ಲ.



ಕಾಂಗ್ರೆಸ್ ಶ್ರೇಷ್ಠವಲ್ಲ, ಆದರೆ ಬಿಜೆಪಿಗಿಂತಲೂ ವಾಸಿ

"ಇಂದಿನ ಚುನಾವಣಾ ರಾಜಕೀಯ ಮತ್ತು ರಾಜಕಾರಣಿಗಳ 'ಕತ್ತರಿಸುವ' ಭಾಷಣ ಕೇಳಿ ನೆಮ್ಮದಿ ಕಳೆದುಕೊಂಡಿದ್ದ ನನ್ನಂತಹವರ ಮನಸ್ಸಿಗೆ ಸೋನಿಯಾ ಮತ್ತು ಇಂದಿರಾ ಗಾಂಧಿಯವರ ಕುರಿತ ಲೇಖನದಿಂದ ಕೊಂಚ ತುಹಿನ ಸಿಂಚನ ದೊರೆತಂತಾಯಿತು. ಸೋನಿಯಾ ಮತ್ತು ಇಂದಿರಾ ಗಾಂಧಿಯವರ ಸಂಬಂಧ ಕುರಿತು ಇನ್ನಷ್ಟು ಬೆಳಕು ಬೀರಿದ್ದರೆ ಚೆನ್ನಾಗಿತ್ತು. ಅವರ ಸಂಬಂಧ ಎಂದೂ ಅತ್ತೆಸೊಸೆಯರ ಸಂಬಂಧವಾಗಿರದೆ ಅದು ತಾಯಿ ಮಗಳ ಸಂಬಂಧವಾಗಿತ್ತು. ಆ ಸಂಬಂಧದಲ್ಲಿ ಎಂದೂ ಬಿರುಕು ಕಾಣಿಸಿಕೊಂಡಿರಲಿಲ್ಲ. ಇಟಲಿ ದೇಶದ ಕ್ರೈಸ್ತ ಮಹಿಳೆಯಾದ ಸೋನಿಯಾ ತನ್ನ ಸೊಸೆಯಾಗಿ ಮನೆಯೊಳಗೆ ಕಾಲಿಡುವುದು ಇಂದಿರಾ ಗಾಂಧಿಯವರಲ್ಲಿ ಅಸಹನೆಯನ್ನೇನೂ ಉಂಟುಮಾಡಿರಲಿಲ್ಲ. ಅವರ ಜಾತ್ಯತೀತ ಧೋರಣೆಗೆ ಇದೊಂದು ಉತ್ತಮ ಉದಾಹರಣೆಯಾಗಿದೆ. ಈ ಸಂದರ್ಭದಲ್ಲಿ ನಾವು ಇಂದಿರಾ ಗಾಂಧಿಯವರ ಕುರಿತು ಇನ್ನೂ ಒಂದಷ್ಟು ತಿಳಿದುಕೊಳ್ಳುವುದೊಳ್ಳೆಯದೆನ್ನಿಸಿತು.

ಕಾಂಗ್ರೆಸ್ ಪಕ್ಷದ ಹಳೆಯ ತಲೆಮಾರುಗಳು ಕಣ್ಮರೆಯಾದಂತೆ ಹೊಸ ತಲೆಮಾರುಗಳು ಹೊಸ ಆಲೋಚನೆಗಳೊಡನೆ ದೇಶದ ಚುಕ್ಕಾಣಿ .ಹಿಡಿಯಲಾರಂಭಿಸಿದರು. ಈ ರೀತಿ ದೇಶದ ಚುಕ್ಕಾಣಿ ಹಿಡಿದವರಲ್ಲಿ ಇಂದಿರಾ ಗಾಂಧಿ ಪ್ರಮುಖರು. ಇಂದಿರಾ ಗಾಂಧಿಯವರಲ್ಲಿ ಹಲವು ನ್ಯೂನತೆಗಳಿದ್ದಿರಬಹುದು; ಹಲವು ದೌರ್ಬಲ್ಯಗಳಿದ್ದಿರಬಹುದು. ಆದರೆ ಅವರೆಂದೂ ಕಾಂಗ್ರೆಸ್ ಪಕ್ಷದ ಜಾತ್ಯತೀತ ಧೋರಣೆಯಿಂದ ಹಿಂದೆ ಸರಿದವರಲ್ಲ. ಅವರ ಕುಟುಂಬವನ್ನೇ ನೋಡಿ. ಅವರು ಸ್ವತಃ ಮದುವೆಯಾದುದು ಓರ್ವ ಪಾರ್ಸಿ ಮತಾನುಯಾಯಿಯಾದ ಫಿರೋಜ್ ಗಾಂಧಿಯವರನ್ನು. ರಾಜೀವ್ ಗಾಂಧಿ ಕ್ರೈಸ್ತ ಧರ್ಮೀಯಳನ್ನು ಮದುವೆಯಾದರೆ ಸಂಜಯ ಗಾಂಧಿ ವರಿಸಿದ್ದು ಓರ್ವ ಸಿಖ್ ಧರ್ಮದ ಯುವತಿಯನ್ನು. ದೇಶದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ತಮ್ಮ ಮಕ್ಕಳ ಮದುವೆಯನ್ನು ತೀರಾ ಸರಳವಾಗಿ ನೆರವೇರಿಸಿದ್ದರು. ಈಗಿನ ರಾಜಕಾರಣಿಗಳು ತಮ್ಮ ಮಕ್ಕಳ ಮದುವೆಗಳನ್ನು ಹೇಗೆ ಆಡಂಬರದಿಂದ ಮಾಡುತ್ತಿದ್ದಾರೆ ಎಂಬುದನ್ನು ವಿವರಿಸಬೇಕಾಗಿಲ್ಲವಲ್ಲ? ಇಂದಿರಾ ಅವರು ಅಂತಹ ಶ್ರೀಮಂತಿಕೆಯ ಪ್ರದರ್ಶನವನ್ನು ಎಂದೂ ತೋರ್ಪಡಿಸಿದ್ದಿಲ್ಲ. ಸಂಜಯ್ ಗಾಂಧಿ ರಿಜಿಸ್ಟರ್ಡ್ ಮದುವೆಯಾದುದು ಓರ್ವ ಮುಸ್ಲಿಂ ಲೋಕಸಭಾ ಸದಸ್ಯನ ಮನೆಯಲ್ಲಿ! ಪ್ರಧಾನಿಯಾಗಿದ್ದ ಅವರ ಮನೆ ದೊಡ್ಡ ಬಂಗಲೆಯಾಗಿರದೆ ತೀರಾ ಸಾಮಾನ್ಯವಾದ ಮನೆಯಾಗಿತ್ತು. ಇಂತಹ ಜಾತ್ಯತೀತ, ನಿರಾಡಂಬರದ ಪ್ರಧಾನಿಯೋರ್ವರು ನಮ್ಮ ದೇಶವನ್ನು 16 ವರ್ಷಗಳವರೆಗೆ ಆಳಿ ನಮಗೆಲ್ಲರಿಗೂ ಆದರ್ಶ ಕುಟುಂಬದ ಮೇಲ್ಪಂಕ್ತಿ ಹಾಕಿಕೊಟ್ಟರು.




ಇನ್ನೊಂದೆಡೆ ಅವರು ಕೈಗೊಂಡ ಆರ್ಥಿಕ ಕ್ರಮಗಳು. 1970 ರವರೆಗೆ ತೆರಿಗೆದಾರರ ಹಣವನ್ನು ಯಾವುದೇ ಜವಾಬ್ದಾರಿ ನಿರ್ವಹಿಸದೆ ಕುಳಿತುಣ್ಣುವ ರಾಜರಿಗೆ ಗೌರವ ಧನವೆಂದು ಅರ್ಪಿಸಲಾಗುತ್ತಿತ್ತು. ಇಂದಿರಾ ಗಾಂಧಿ ಈ ರಾಜಧನವನ್ನು ರದ್ದುಪಡಿಸಿ ಆ ಹಣವನ್ನು ದೇಶದ ಅಭಿವೃದ್ಧಿಗಾಗಿ ಉಪಯೋಗಿಸತೊಡಗಿದರು. ಈ ರಾಜಧನ ನೀಡಿಕೆಯನ್ನು ಆವರೆಗೆ ಯಾರೂ ಪ್ರಶ್ನಿಸಿರಲಿಲ್ಲ. ಆ ಬಳಿಕ ಅವರು ಕೈಗೊಂಡ ಬಹುಮುಖ್ಯ ಕ್ರಮ ಬ್ಯಾಂಕಿನ ರಾಷ್ಟ್ರೀಕರಣ. ಆವರೆಗೂ ಈ ದೇಶದ ಬಡವರಿಗೂ ಬ್ಯಾಂಕಿಗೂ ಸಂಬಂಧವಿರಲಿಲ್ಲ. ಬ್ಯಾಂಕಿನಿಂದ ಸಾಲ ದೊರೆಯುವ ಸಾಧ್ಯತೆ ಇದೆಯೆಂಬುದನ್ನು ಈ ಬಡಜನತೆ ತಿಳಿದೇ ಇರಲಿಲ್ಲ. ಈ ರಾಷ್ಟ್ರೀಕರಣದ ಬಳಿಕ ಎಷ್ಟೋ ಜನರು ಬ್ಯಾಂಕಿನಿಂದ ಸಾಲ ಪಡೆದು ಸಣ್ಣಪುಟ್ಟ ವ್ಯಾಪಾರ ಮಾಡಿ ತಮ್ಮ ಬದುಕಿಗೊಂದು ಹಾದಿ ಕಂಡುಕೊಂಡರು. ನಮ್ಮ ದಕ್ಷಿಣ ಕನ್ನಡದ ಜನಾರ್ಧನ ಪೂಜಾರಿಯವರು ಅರ್ಥ ಮಂತ್ರಿಯಾಗಿ ಈ ಸಾಲ ಯೋಜನೆಯನ್ನು ಸಮನಾಗಿ ಅನುಷ್ಠಾನಗೊಳಿಸಿದರು. ಎಷ್ಟೋ ಜನ ಬಡ ಮುಸ್ಲಿಮರು ಹೆಣ್ಣುಮಕ್ಕಳ ಮದುವೆ ಮಾಡಿದರು. ಬ್ಯಾಂಕ್ ರಾಷ್ಟ್ರೀಕರಣವೆಂಬುದು ಬಡವರ ಪಾಲಿಗೆ ವರವೇ ಆಯಿತು. "ಸನ್ಮಾನ್ಯ ಪೂಜಾರಿಯವರಿಂದಾಗಿ ನಾವು ಇಂದು ಎರಡು ಹೊತ್ತು-ಊಟ ಮಾಡುತ್ತಿದ್ದೇವೆ" ಎಂದು ಎಷ್ಟೋ ಜನರು ಹೇಳಿಕೊಳ್ಳುತ್ತಿದ್ದಾರೆ. ಈ ದೇಶದ ಬಡ ಜನತೆಯ ಕುರಿತು ಇಂದಿರಾ ಗಾಂಧಿಯವರಿಗೆ ಕಾಳಜಿ ಇದ್ದೇ ಇತ್ತು. ಅವರೆಂದೂ ಜಾತಿ, ಧರ್ಮದ ಹೆಸರಿನಲ್ಲಿ ಜನರ ನಡುವೆ ಗೋಡೆಗಳನ್ನೆಬ್ಬಿಸಲು ಪ್ರಯತ್ನಿಸಲಿಲ್ಲ. ದೇವರಾಜ ಅರಸರು ಭೂಸುಧಾರಣ ಕಾನೂನು ಜಾರಿಗೆ ತಂದಾಗಲೂ ಇಂದಿರಾ ಗಾಂಧಿಯವರು ಕೇಂದ್ರದಲ್ಲಿ ಪ್ರಧಾನಿಯಾಗಿದ್ದರು.

ಇಂದಿರಾ ಗಾಂಧಿಯವರ ಜನಪರ ಕಾಳಜಿಯ ಒಂದೆರಡು ಉದಾಹರಣೆಗಳನ್ನು ಹೇಳಲೇಬೇಕಾಗಿದೆ. ಇಂದು ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ಮಹಿಳಾ ಅಧ್ಯಯನ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. "ನಮ್ಮ ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನಕ್ಕಾಗಿ ಏನಾದರೂ ಕಾರ್ಯಕ್ರಮ ರೂಪಿಸಲಾಗಿದೆಯೇ?" ಎಂಬ ಪ್ರಶ್ನೆಯನ್ನೆತ್ತಿ ಈ ಯೋಜನೆಗೆ ಚಾಲನೆ ನೀಡಿದವರು ಇಂದಿರಾ ಗಾಂಧಿಯವರು. ಇಂದು ವಿಶ್ವವಿದ್ಯಾಲಯಗಳ ಮಹಿಳಾ ಪರ ಕಾರ್ಯಕ್ರಮಗಳಿಗೆ ಸಾಕಷ್ಟು ಅನುದಾನ ಬರುತ್ತಿದೆ.

ಹಾಗೆಯೇ ಅವರ ಚಿಂತನೆ ಇನ್ನೊಂದು ವಿಷಯದೆಡೆಗೂ ಹರಿಯತೊಡಗಿತು. ನಮ್ಮ ಶಾಲಾ ಪಠ್ಯಪುಸ್ತಕಗಳಲ್ಲಿ ಘಜನಿ ಮಹಮ್ಮದ್, ಘೋರಿ ಮಹಮ್ಮದ ಪಾಠಗಳಿರಬೇಕಾದ ಅಗತ್ಯವಿದೆಯೇ ಎಂದು NCERT ಯಲ್ಲಿ ಚರ್ಚಿಸಬೇಕೆಂದವರು ಇಂದಿರಾ ಗಾಂಧಿ. ಯಾಕೆಂದರೆ ಹಿಂದೂ ಮುಸ್ಲಿಂ ವಿದ್ಯಾರ್ಥಿಗಳು ಒಟ್ಟಾಗಿ ಕುಳಿತು ಪಾಠ ಕೇಳುವಾಗ ಘಜನಿ ಮತ್ತು ಘೋರಿ ಮಹಮ್ಮದ್ ಪಾಠಗಳು ಈ ಮಕ್ಕಳ ಮನಸ್ಸನ್ನು ವಿಷಮಯಗೊಳಿಸುವ ಮತ್ತು ಅವರ ಮಧ್ಯೆ ಬಿರುಕು ಮೂಡಿಸುವ ಸಾಧ್ಯತೆ ಇಲ್ಲವೇ? ಇಂತಹ ಪಾಠಗಳ ಅಗತ್ಯವೇನು? ಈ ಪಾಠಗಳನ್ನು ಪಠ್ಯಪುಸ್ತಕಗಳಿಂದ ತೆಗೆಯುವುದು ಒಳ್ಳೆಯದಲ್ಲವೇ? ಎಂಬ ಚಿಂತನೆ ಅವರದಾಗಿತ್ತು. ಈ ಚರ್ಚೆ ಪ್ರಾರಂಭವಾದಾಗ ಈ ಸಂಸ್ಥೆಯ ಸದಸ್ಯರಾಗಿದ್ದ ಎಸ್.ಎಲ್. ಭೈರಪ್ಪನವರು ಈ ಪಾಠಗಳು ಪಠ್ಯಪುಸ್ತಕಗಳಲ್ಲಿ ಇರಲೇಬೇಕೆಂದು ವಾದಿಸಿದರು. ಅವರು ಹೀಗೆ ವಾದಿಸಿದ್ದಕ್ಕಾಗಿ ಮುಂದಿನ ಸಭೆಗೆ ಭೈರಪ್ಪನವರನ್ನು ಆಹ್ವಾನಿಸಲಿಲ್ಲವೆಂದು ಭೈರಪ್ಪನವರೇ ಮೂಡಬಿದ್ರೆಯ 'ನುಡಿಸಿರಿ' ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಹೇಳಿದ್ದರು. ನಮ್ಮ ಪಠ್ಯ ಪುಸ್ತಕಗಳಲ್ಲಿ ಈಗಲೂ ಈ ಪಾಠಗಳಿವೆಯೇ ಎಂದು ನನಗೆ ತಿಳಿಯದು.

ಮೇಲ್ಜಾತಿಯ ಮೇಲ್ವರ್ಗದ ಜಮೀನ್ದಾರರಿಗೆ ಮತ್ತು ಶ್ರೀಮಂತರಿಗೆ ಇಂದಿರಾ ಗಾಂಧಿಯವರ ಈ ಯಾವ ಧೋರಣೆಗಳೂ ಇಷ್ಟವಾಗುವ ಸಾಧ್ಯತೆ ಇರಲಿಲ್ಲ. ಈ ಸಂದರ್ಭದಲ್ಲಿ ಇಂದಿರಾ ಗಾಂಧಿಯವರೂ ಎಡವಿದರು. ಅಲಹಾಬಾದ್ ಹೈಕೋರ್ಟ್ ಅವರ ಚುನಾವಣೆ ಅಸಿಂಧು ಎಂದು ತೀರ್ಪು ನೀಡಿದಾಗ ಇಂದಿರಾ ಅವರು ರಾಜೀನಾಮೆ ನೀಡಿದ್ದರೆ ಮುಂದಿನ ಚುನಾವಣೆಯಲ್ಲಿ ಅವರು ಗೆದ್ದೇ ಗೆಲ್ಲುತ್ತಿದ್ದರು. ಆದರೆ ಅವರು ರಾಜೀನಾಮೆ ನೀಡದೆ ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿದರು. ಅವರ ಈ ಒಂದು ಹೆಜ್ಜೆಯೇ ಇಂದಿನ ಕೋಮುವಾದೀ ಸಂಘಟನೆಗಳ ಬೆಳವಣಿಗೆಗೆ ಗೊಬ್ಬರವಾಯಿತು. ಆ ಬಳಿಕ ಅವರು 1977 ರಲ್ಲಿ ಚುನಾವಣೆಯ ಮೂಲಕವೇ ಅಧಿಕಾರ ಕಳೆದುಕೊಂಡಾಗ ಅಧಿಕಾರದ ಗದ್ದುಗೆ ಏರಿದ ಮೊರಾರ್ಜಿ ದೇಸಾಯಿ ಮಂತ್ರಿಮಂಡಳದಲ್ಲಿ ಜನಸಂಘದ ಸದಸ್ಯರು ಸ್ಥಾನ ಪಡೆದರು. ವಾಮನಾವತಾರ ಅಲ್ಲಿಂದಲೇ ಪ್ರಾರಂಭವಾಯಿತೆನ್ನಬಹುದು. ಬೆರಳು ದೊರೆತೊಡನೆ ಹಸ್ತವನ್ನೇ ನುಂಗುವ ಛಾತಿ ಇರುವವರಲ್ಲವಾ? ಇಂದಿರಾ ಗಾಂಧಿಯವರ ಈ ಒಂದು ತಪ್ಪು ಹೆಜ್ಜೆ ಮುಂದಿನ ಎಲ್ಲ ದುರ್ಘಟನೆಗಳಿಗೆ ನಾಂದಿಯಾಯಿತು. ಹೊಸದಾಗಿ ಅಧಿಕಾರ ಪಡೆದವರು ಇಂದಿರಾ ಗಾಂಧಿಯನ್ನು ಜೈಲಿಗೂ ಕಳುಹಿಸಿದರು. ಅವರು ಜೈಲು ಶಿಕ್ಷೆಯನ್ನನುಭವಿಸಿ ಮುಂದಿನ ಚುನಾವಣೆಯಲ್ಲಿ ಮತ್ತೊಮ್ಮೆ ಗೆದ್ದು ಪ್ರಧಾನಿಯಾದರು.

ಬೋಫೋರ್ಸ್ ಹಗರಣದ ಕಾರಣದಿಂದ ವಿ.ಪಿ. ಸಿಂಗ್ ಅವರು ಕಾಂಗ್ರೆಸ್ಸಿನಿಂದ ಹೊರ ಬಂದು ಪ್ರಧಾನಿಯಾದಾಗ ಆಗಲೂ ಬಿಜೆಪಿ ಪಕ್ಷ ಮಂತ್ರಿ ಮಂಡಲದಲ್ಲಿ ಸ್ಥಾನ ಪಡೆಯಿತು. ವಿ.ಪಿ. ಸಿಂಗ್ ಹಿಂದುಳಿದವರ ಪರವಾಗಿ ಮಂಡಲ್ ವರದಿಯನ್ನು ಜಾರಿ ಮಾಡಿದಾಗ ಮೇಲ್ಜಾತಿಯರ ಹೊಟ್ಟೆಗೆ ಬೆಂಕಿ ಬಿದ್ದಂತಾಯಿತು. ಇಷ್ಟು ವರ್ಷಗಳಿಂದಲೂ ತಾವು ಅನುಭವಿಸುತ್ತಲೇ ಬಂದ ಅಧಿಕಾರ ಕೈ ಜಾರುತ್ತದೆಯೆಂಬ ಅನಿಸಿಕೆಯಿಂದ ಅವರ ಮನಃಶಾಂತಿ ನಾಶವಾಯಿತು. ವಿ.ಪಿ. ಸಿಂಗರನ್ನು ಪ್ರಧಾನಮಂತ್ರಿ ಪದವಿಯಿಂದ ಕೆಳಗಿಳಿಸಲು ಅವರು ಕೈಗೊಂಡ ಉಪಾಯ ಕಮಂಡಲ! ರಾಮಮಂದಿರಕ್ಕಾಗಿ ರಥಯಾತ್ರೆ. ಬಾಬ್ರಿ ಮಸೀದಿಯ ನಾಶ. ಈ ದೇಶದ ಅಮಾಯಕ ಜನತೆಯನ್ನು ರಾಮನ ಹೆಸರಿನಲ್ಲಿ ಮತ್ತು ಧರ್ಮದ ಹೆಸರಿನಲ್ಲಿ ಎತ್ತಿ ಕಟ್ಟುವುದು, ಒಂದುಗೂಡಿಸುವುದು ಸುಲಭ ತಾನೇ? ಅದನ್ನು ಈ ಕೋಮುವಾದಿಗಳು ಇಂದಿಗೂ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ.



ಇದೆಲ್ಲವೂ ಚರಿತ್ರೆಯಲ್ಲಿ ಸೇರಿಹೋಗಿದೆ. ಇಂದು ನಮ್ಮ ಮುಂದಿರುವ ಪ್ರಶ್ನೆ ನಾವು ಕೋಮುವಾದಿಗಳ ಕುತಂತ್ರಕ್ಕೆ ಬಲಿ ಬೀಳಬೇಕೇ ಅಥವಾ ಇಂದಿಗೂ ಜಾತ್ಯತೀತತೆ ಮತ್ತು ಸಮಾನತೆಯ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡಿರುವ ಕಾಂಗ್ರೆಸ್ ಪಕ್ಷವನ್ನು ಆರಿಸಬೇಕೇ ಎಂಬುದು.


ಕಾಂಗ್ರೆಸ್ಸಿನಲ್ಲೇ ಬೆಳೆದು ಕಾಂಗ್ರೆಸ್ ಪಕ್ಷದಿಂದ ಎಲ್ಲ ಸೌಲಭ್ಯಗಳನ್ನೂ ಪಡೆದ ಹಲವರು ಇಂದು ಬಿಜೆಪಿಗೆ ಪಕ್ಷಾಂತರಗೊಳ್ಳುತ್ತಿದ್ದಾರೆ. ರಾಜ್ಯಸಭಾ ಸದಸ್ಯೆ ನಜ್ಮಾ ಹೆಪ್ತುಲ್ಲಾ ಇವರಲ್ಲಿ ಮೊದಲಿಗರು. ಕಾಂಗ್ರೆಸ್ ಪಕ್ಷದಿಂದ ಸಾಕಷ್ಟು ಪಡೆದು ಅಲ್ಲಿ ಇನ್ನೇನೂ ಉಳಿದಿಲ್ಲವೆನ್ನುವಾಗ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಟಿಕೆಟ್ ದೊರೆಯದ ಕಾರಣಕ್ಕಾಗಿ ಪಕ್ಷಾಂತರ ಮಾಡಿದರು. ಹತ್ತು ಲಕ್ಷ ಅಥವಾ ಹತ್ತು ಕೋಟಿ, ಎಷ್ಟಾದರೂ ಸರಿ ಈ ಅತೃಪ್ತರನ್ನು ಖರೀದಿಸಲು ಬಿಜೆಪಿ ಸಿದ್ಧವಾಗಿಯೇ ಇದೆ. ಹಾಗಾದರೆ ಕಾಂಗ್ರೆಸ್ ಪಕ್ಷ ಇಷ್ಟು ವರ್ಷ ಎಲ್ಲ ಸೌಲಭ್ಯವನ್ನೂ ನೀಡಿ ಸಾಕಿದ್ದು ಇಂತಹ ತೋಳ ಮತ್ತು ನರಿಗಳನ್ನೇ? ನಾವು ಇಷ್ಟು ವರ್ಷ ಮತ ನೀಡಿ ಅಧಿಕಾರಕ್ಕೆ ಏರಿಸಿದ್ದು ಇಂತಹ ಮಾನ, ಮರ್ಯಾದೆ ಇಲ್ಲದ ಜನರನ್ನೇ?

ಕಾಂಗ್ರೆಸ್ ಪಕ್ಷದ ಮೇಲೆ ಬೋಫೋರ್ಸ್ ಹಗರಣವನ್ನೆತ್ತಿಕೊಂಡು ಬಹಳ ಕೆಸರೆರಚಲಾಯಿತು. ಆದರೆ ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಬಂದ ಮೇಲೆ ಹಗರಣಗಳ ಸರಮಾಲೆಗಳೇ ಕಾಣಿಸಿಕೊಂಡಿವೆ. ತೆಹೆಲ್ಕಾ ಹಗರಣ, ಶವಪೆಟ್ಟಿಗೆ ಹಗರಣ, ಪೆಟ್ರೋಲ್ ಪಂಪ್ ಹಗರಣ, ಕೇಂದ್ರ ಸರ್ಕಾರದ ಅಧೀನದಲ್ಲಿರುವ ಮುದ್ರಣಾಲಯದ ಛಾಪಾಕಾಗದ ಹಗರಣ ಮುಂತಾದವು. ಸಾವಿರ ಸಾವಿರ ಕೋಟಿಗಳ ಹಗರಣಗಳಿವು. ಇವುಗಳಿಗೆ ಹೋಲಿಸಿದರೆ ಬೋಫೋರ್ಸ್‌ನ 65 ಕೋಟಿ ಏನೇನೂ ಅಲ್ಲ! ಅದೊಂದು ಜುಜುಬಿ ಮೊತ್ತ. ಕಾಂಗ್ರೆಸ್ ಪಕ್ಷ 50 ವರ್ಷಗಳಿಂದಲೂ ಮಾಡದೇ ಇದ್ದಷ್ಟನ್ನು ಎನ್‌ಡಿಎ ಸರ್ಕಾರ ಕೇವಲ ಐದು ವರ್ಷಗಳಲ್ಲಿ ಮಾಡಿ ಮುಗಿಸಿಲ್ಲವೇ?

ಈ ಸಂದರ್ಭದಲ್ಲಿ ನಮಗೆ ಕಾಂಗ್ರೆಸ್ ಪಕ್ಷದಲ್ಲಿ ಇನ್ನೂ ಕೈ ಶುದ್ಧವಾಗಿಟ್ಟುಕೊಂಡು ಯಾವುದೇ ಆಮಿಷಕ್ಕೂ ಒಳಗಾಗದೆ ನಿಷ್ಠಾವಂತರಾಗಿರುವ ಕೆಲವರಾದರೂ ಕಾಣಸಿಗುತ್ತಾರೆ. ಜನಾರ್ಧನ ಪೂಜಾರಿ ಅಂತಹವರಲ್ಲಿ ಒಬ್ಬರು. ತಮ್ಮ ಮಕ್ಕಳಿಗಾಗಿ ಅವರು ಟಿಕೆಟ್‌ಗೆ ಬೇಡಿಕೆ ಮುಂದಿಟ್ಟಿಲ್ಲ. ಕೋಟಿ ಕೋಟಿ ಸಂಪಾದನೆಯನ್ನೂ ಮಾಡಿಲ್ಲ. ಹಾಗೆಯೇ ರೇಣುಕಾ ಚೌಧುರಿ, ಜಯಂತಿ ನಟರಾಜನ್, ಶೀಲಾ ದೀಕ್ಷಿತ್ ಮುಂತಾದ ಸಮರ್ಥ ಮಹಿಳೆಯರೂ ಕಾಂಗ್ರೆಸ್ಸಿನಲ್ಲಿದ್ದಾರೆ.

ಹಲವು ಧರ್ಮಗಳು, ಹಲವಾರು ಭಾಷೆಗಳು, ನೂರಾರು ಜಾತಿಗಳಿರುವ ಈ ದೇಶದ ಈ ವಿವಿಧತೆಯಲ್ಲಿ ಏಕತೆಯನ್ನು ಕಾಂಗ್ರೆಸ್ ಪಕ್ಷ ಸಂರಕ್ಷಿಸುತ್ತಾ ಬಂದಿದೆ. ತನ್ನ ಜಾತ್ಯತೀತ ನಿಲುವಿನಿಂದ ಅದೆಂದೂ ಹಿಂದೆ ಸರಿದಿಲ್ಲ. ಈ ಪಕ್ಷದ ಮುಖಂಡರೆಲ್ಲರೂ ಅತ್ಯುತ್ತಮ ಚಾರಿತ್ರ್ಯವುಳ್ಳವರೆಂಬುದು ಇದರರ್ಥವಲ್ಲ. ಆದರೆ ಇವರು ಎಡವಿದರೆ ಮತ್ತೊಮ್ಮೆ ಚುನಾವಣೆಯ ಮೂಲಕ ಇವರನ್ನು ಒದ್ದೋಡಿಸುವ ಶಕ್ತಿ ನಮಗಿದೆ. ಇಂದಿರಾ ಗಾಂಧಿಯಂತಹವರನ್ನೇ ನಾವು ಕೆಳಗಿಳಿಸಿದ್ದೇವೆ. ಮತ್ತೊಮ್ಮೆ ಅವರಿಗೆ ಅಧಿಕಾರದ ಗದ್ದುಗೆ ನೀಡಿದ್ದೇವೆ. ಆದರೆ ಈ ಹಿಂದೂತ್ವವಾದಿಗಳು ಅಧಿಕಾರದ ಕುರ್ಚಿಗೆ ಅಂಟಿಕೊಂಡರೆ ಅವರನ್ನು ಕೆಳಗಿಳಿಸುವುದು ಅಷ್ಟು ಸುಲಭವಲ್ಲ. ಇವರಿಗೆ ಅಧಿಕಾರ ದೊರೆತರೆ ಇವರು ಕೈ, ಕಾಲು, ತಲೆ ಕತ್ತರಿಸುವುದನ್ನೇ ಮುಂದುವರಿಸುತ್ತಾರೆ. ಇವರಿಗೆ ಅಧಿಕಾರ ದೊರೆತರೆ ಏನು ಮಾಡುತ್ತಾರೆಂಬುದನ್ನು ಈ ಆರು ತಿಂಗಳಲ್ಲಿ ಚೆನ್ನಾಗಿ ನಮಗೆ ಮನವರಿಕೆ ಮಾಡಿಸಿದ್ದಾರೆ. ಮಂಗಳೂರಿನ ನ್ಯಾಯವಾದಿ ನೌಷಾದ್ ಎಂಬವರ ಕೊಲೆಯೇ ಇತ್ತೀಚೆಗಿನ ಉದಾಹರಣೆ. ಮಹಿಳೆಯರಿಗೆ ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ರಕ್ಷಣೆ ಎಂಬುದು ಕನಸಿನಲ್ಲೂ ದೊರೆಯಲಾರದು.

● ಸಾರಾ ಅಬೂಬಕ್ಕರ್



ಅನಂತ ವಾಣಿ

ಬೆಂಗ್ಳೂರೆಂದರೆ ಏನಂತೀರಿ?
ಭಾರತ ದೇಶದ ಪ್ರತಿಬಿಂಬ
ಐಟೀಬೀಟಿ ಸಿಲಿಕನ್ ಸಿಟಿ ಇದು
ಇಡೀ ಜಗತ್ತಿನ ಗತಿಬಿಂಬ ॥೧॥

ರಸ್ತೆಯ ತುಂಬಾ ಗುಂಡಿಗಳಿದ್ದರು
ಕಿಲಿಕಾಪ್ಟರಿನಲಿ ಹಾರಾಟ
ಸರಕಾರದ ಬುಡ ಭದ್ರಗೊಳಿಸಲು
ಶಮ್ಮೆಲ್ಲೆಗಳ ಮಾರಾಟ ॥೨॥

ನಮ್ಮ ಕಪ್ಪು ಹಣ ಸ್ವಿಸ್ ಬ್ಯಾಂಕ್ ಬದಲಿಗೆ
ಇಲ್ಲೇ ಮಡಗಲುಬಹುದು
ಪಾಪ್ಪ ಧುರೀಣರ ವಧಿಸಿದ ಧೀರರು
ಇಲ್ಲೇ ಅಡಗಲುಬಹುದು ॥೩॥

ಸರ್ವಜನಾಂಗದ ಶಾಂತಿಯ ತೋಟದಿ
ಬಾಂಗು ಮಚ್ಚುಗಳ ಸಂಗೀತ.
ಉತ್ತರಪೀಠವೇ ಅಯೋಧ್ಯೆಯಾಗಲಿ
ಕರ್ನಾಟಕವೇ ಗುಜರಾತ ॥೪॥

ಸಮ್ಮೇದಗಳಲಿ ಧಗಧಗ ಎಂದು
ದೇಶಪ್ರೇಮವ ಹೊತ್ತಿಸುವೆ
ಮತ್ತೆ ಕೇಂದ್ರದಲಿ ಮಂತ್ರಿಯಾಗುವೆ
ವಿರೋಪ್ಲೇನನು ಹತ್ತಿಸುವೆ ॥೫॥


● ಚಂಪಾ

ms ಜೋಕ್ಸ್

ಕ್ರಿಕೆಟಿಗರು ವೃಷಣ ರಕ್ಷಣಾ ಕವಚವನ್ನು
ಧರಿಸಲು ಪ್ರಾರಂಭಿಸಿದ್ದು 1874 ರಲ್ಲಿ. ಹಾಗೆಯೇ
ಹೆಲ್ಮೆಟ್‌ಗಳನ್ನು ಧರಿಸಲು ಆರಂಭಿಸಿದ್ದು 1974ರಲ್ಲಿ.
ಇದರರ್ಥ: ಪುರುಷರಿಗೆ ತಮ್ಮ ತಲೆಯನ್ನೂ
ರಕ್ಷಿಸಿಕೊಳ್ಳಬೇಕು ಎಂದು ಮನದಟ್ಟಾಗುವುದಕ್ಕೆ
ನೂರು ವರ್ಷಗಳೇ ಬೇಕಾದವು!

******


ತಮಿಳು ಸೂಪರ್‌ಸ್ಟಾರ್ ರಜನೀಕಾಂತರ
ಮುಂದಿನ ಯೋಜನೆ 'ಟೈಟಾನಿಕ್' ಚಿತ್ರವನ್ನು
ತಮಿಳಿನಲ್ಲಿ ರೀಮೇಕ್
ಮಾಡುವುದು. ಆದರೆ
ಕತೆಯ ಕ್ಲೈಮಾಕ್ಸ್
ಬದಲಾಗುತ್ತಿದೆ.
ಚಿತ್ರದ ಕೊನೆಯಲ್ಲಿ
ಹೀರೋ ಮತ್ತು
ಹೀರೋಯಿನ್ ಇಬ್ಬರೂ
ಜೀವಂತವಾಗಿ
ಉಳಿಯುತ್ತಾರಲ್ಲದೆ. ರಜನಿ
ಒಂದು ಕೈಯಲ್ಲಿ
ಹೀರೋಯಿನ್‌ಳನ್ನೂ,
ಇನ್ನೊಂದು ಕೈಯಲ್ಲಿ
ಟೈಟಾನಿಕ್ ಹಡಗನ್ನೂ
ದಡಕ್ಕೆ ಎಳೆದು
ತರುತ್ತಾರೆ!



ರೈತರ ಬೆಂಗಳೂರು ಪಾದಯಾತ್ರೆ

ಕಡಿದಾಳು ಶಾಮಣ್ಣ


ಕಾಡ ತೊರೆಯ ಹಾಡು 18



ಅಕ್ಷರ ರೂಪ: **ಅಕ್ಷತಾ ಕೆ.**

1983ರ ಚುನಾವಣೆಯಲ್ಲಿ ಗುಂಡೂರಾಯರ ಸರ್ಕಾರ ಅಧಿಕಾರ ಕಳೆದುಕೊಂಡು ಜನತಾ ಪಕ್ಷ ಅಧಿಕಾರಕ್ಕೆ ಬಂದು ರಾಮಕೃಷ್ಣ ಹೆಗ್ಡೆ ಮುಖ್ಯಮಂತ್ರಿಯಾದರು. ಗುಂಡೂರಾಯರ ಸರ್ಕಾರವನ್ನು ಉರುಳಿಸುವಲ್ಲಿ ರೈತ ಸಂಘ ಹಾಗೂ 'ಲಂಕೇಶ್ ಪತ್ರಿಕೆ'ಯ ಪಾತ್ರ ಬಹು ಮುಖ್ಯವಾಗಿತ್ತು. ಆದರೆ ವಿಪರ್ಯಾಸವೆಂದರೆ ಹೆಗ್ಡೆಯವರ ಸರ್ಕಾರ ಸಹ ಗುಂಡೂರಾಯರಂತೆ ರೈತ ವಿರೋಧಿ ನೀತಿಯನ್ನು ಮುಂದುವರೆಸಿದ್ದು. ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ರೈತರಿಗೆ ಮಾರಕವಾದ 101 ಸಿ ಸಹಕಾರಿ ಕಾನೂನನ್ನು ಜಾರಿಗೆ ತಂದಿತು. ಅದನ್ನು ವಿರೋಧಿಸಿ ರೈತ ಸಂಘ ರಸ್ತೆ ತಡೆ ಚಳವಳಿಗೆ ಕರೆಕೊಟ್ಟಿತು. ಸಹಕಾರಿ ಕಾನೂನನ್ನು ವಿರೋಧಿಸಿ ರಸ್ತೆ ತಡೆ ನಡೆಸಿದ ರೈತರನ್ನು ಬಂಧಿಸಿ ಜೈಲಿಗೆ ಕಳಿಸಲಾಯಿತು. ಯಾವಾಗ ಜೈಲುಗಳಲ್ಲಿ ಜಾಗ ಸಾಲದೆ ಹೋಯಿತೋ ಚಳವಳಿ ನಿರತ ರೈತರನ್ನು ಬಯಲು ಬಂಧಿಖಾನೆಗೆ ತಳ್ಳಲು ಸರ್ಕಾರ ಆದೇಶ ನೀಡಿತು. ಚಳವಳಿ ನಡೆಸಿದ ರೈತರನ್ನು ಪೊಲೀಸರು ಬಂಧಿಸಿ ಕೋರ್ಟಿಗೆ ಹಾಜರುಪಡಿಸಿ ನಂತರ ಜೈಲಿಗೆ ಕರೆದೊಯ್ಯುವ ಬದಲು ರೈತರನ್ನು ಬಂಧಿಸಿ ಎಲ್ಲೋ ಮಧ್ಯದಾರಿಯಲ್ಲಿ ಕಾಡಿನ ಮಧ್ಯದಲ್ಲಿ ಇಳಿಸಿಹೋಗೋರು. ಬೀದಿ ನಾಯಿಗಳನ್ನು ಲಾರಿಯಲ್ಲಿ ತುಂಬಿಕೊಂಡು ಊರಿಂದ ಹೊರಗೆ ಕರೆದೊಯ್ದು ಇಳಿಸಿ ಬರುತ್ತಾರಲ್ಲ ಅದೇ ಸ್ಥಿತಿಗೆ ಚಳವಳಿ ಮಾಡುತಿದ್ದ ರೈತರನ್ನು ತಂದಿತು ಬಯಲು ಬಂಧಿಖಾನೆ.

ನಾವೆಲ್ಲ ಅರಹತೊಳಲು ಕೈಮರದಲ್ಲಿ ಚಳವಳಿ ನಡೆಸುತಿದ್ದ ಸಂದರ್ಭದಲ್ಲಿ ನಮ್ಮನ್ನೆಲ್ಲ ಬಂಧಿಸಿ ತುಂಗಾಭದ್ರ ಸಕ್ಕರೆ ಕಾರ್ಖಾನೆಯ ಹಿಂಭಾಗದಲ್ಲಿ ಬಯಲು ಬಂಧಿಖಾನೆ ರಚಿಸಿ ಸಾವಿರಾರು ಸಂಖ್ಯೆಯ ರೈತರನ್ನು ತಂದು ಬಿಟ್ಟರು. ಊಟ ಇಲ್ಲ ತಿಂಡಿ ಇಲ್ಲ. ಜೈಲಿನ ಅನುಭವವೇ ಇಲ್ಲ. ವಾಪಸ್ ಅಲ್ಲಿಂದ ಹೋದರೆ ಪೊಲೀಸರು ಕೇಳುತ್ತಲೂ ಇರಲಿಲ್ಲ. ಇದರಿಂದ ಬಹಳಷ್ಟು ರೈತರು ಚಳವಳಿ ಮಾಡುವ ಉಮೇದನ್ನೆ ಕಳೆದುಕೊಂಡು ಚಳವಳಿಯನ್ನು ಅರ್ಧಕ್ಕೆ ಬಿಟ್ಟು ತಮ್ಮ ತಮ್ಮ ಮನೆಗೆ ತೆರಳಿದರು. ನಾವೊಂದಿಷ್ಟು ಜನ ನಿಷ್ಠಾವಂತ ಕಾರ್ಯಕರ್ತರು ಮಾತ್ರ ಪೊಲೀಸರು ನಮ್ಮನ್ನು ಬಂಧಿಸಿ ಇಟ್ಟ ಸ್ಥಳದಲ್ಲೆ ನಮ್ಮ ಚಳವಳಿಯನ್ನು ಮುಂದುವರೆಸಿದೆವು. ಸರ್ಕಾರದ ಈ ಬಯಲು ಬಂಧಿಖಾನೆ ತಂತ್ರಗಾರಿಕೆ ರೈತ ಸಂಘದ



ಸಂಘಟನಾ ಶಿಸ್ತನ್ನು ಒಡೆಯಲು ಕಾರಣವಾಯ್ತು. ಜೊತೆಗೆ ರಾಸ್ತಾ ರೋಖೋ ಚಳವಳಿಯಿಂದ ಜನರಿಗೆ ಆಗುವ ತೊಂದರೆಗಳ ಬಗ್ಗೆ ಸರ್ಕಾರಿ ಪ್ರಾಯೋಜಿತ ಪ್ರಚಾರ ನಡೆದು ರೈತರ ರಾಸ್ತಾ ರೋಖೋ ಚಳವಳಿ ಜನರ ಸಹಾನುಭೂತಿಯನ್ನು ನಿಧಾನವಾಗಿ ಕಳೆದುಕೊಳ್ಳತೊಡಗಿತು.

ಆಗ ರೈತ ಸಂಘಟನೆಯ ಮುಖಂಡರು ಕೂಡಲೆ ರಸ್ತೆ ತಡೆಯನ್ನು ನಿಲ್ಲಿಸಿ 101 ಸಿ ಕಾನೂನನ್ನು ವಿರೋಧಿಸಲು ಪಾದಯಾತ್ರೆಯಲ್ಲಿ ರಾಜ್ಯದ ಎಲ್ಲ ಭಾಗಗಳಿಂದ ರೈತರು ಬೆಂಗಳೂರಿಗೆ ಹೋಗಿ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ತೀರ್ಮಾನ ಕೈಗೊಂಡರು. ಗಾಂಧಿಜಯಂತಿಯಂದು ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಕಾರ್ಯಕ್ರಮ ಹಮ್ಮಿಕೊಂಡಿದ್ದರಿಂದ ಆ ದಿನ ಬೆಂಗಳೂರಿಗೆ ತಲುಪುವಂತೆ ನಾವು ಪಾದಯಾತ್ರೆಯನ್ನು ರೂಪಿಸಿಕೊಂಡು ಹೊರಟೆವು. ಸುಂದರೇಶ್ ನೇತೃತ್ವದಲ್ಲಿ ನಮ್ಮ ಪಾದಯಾತ್ರೆ ಪ್ರಥಮದಿನ ಭದ್ರಾವತಿಯಿಂದ ಮುಂದೆ ಸಾಗಿ ಹ.ಬ. ವೀರಬಸಪ್ಪನವರ ಊರು ಬಾರಂದೂರಿನಲ್ಲಿ ರಾತ್ರಿ ಉಳಿದುಕೊಂಡೆವು. ಅಲ್ಲಿಂದಲೂ ಮುಂದೆ ಸಾಗಬಹುದಿತ್ತು, ಆದರೆ ನಮ್ಮ ತಂಡದ ನೂರಾರು ಜನ ಪಾದಯಾತ್ರೆಗೆ ಬರಲಿದ್ದವರು ಇನ್ನೂ ಬಂದಿರಲಿಲ್ಲ, ಅವರುಗಳೆಲ್ಲ ಬಂದ ಮೇಲೆ ಮುಂದೆ ಸಾಗುವುದೆಂದು ತೀರ್ಮಾನಿಸಿ ಆ ರಾತ್ರಿ ಅಲ್ಲೆ ಉಳಿದೆವು. ಕೆಲವರು ಬಂದರು ಹಲವರು ಬರಲಿಲ್ಲ, ನಮ್ಮ ಪಾದಯಾತ್ರೆ ಮುಂದೆ ಸಾಗಿತು. ದಿನಕ್ಕಿಷ್ಟು ದೂರ ಸಾಗಲೇಬೇಕು ಎಂದು ತೀರ್ಮಾನಿಸಿಕೊಂಡಿದ್ದೆವು. ರಾತ್ರಿ ವೇಳೆ ಶಾಲೆಯ ಕಟ್ಟೆಯ ಮೇಲೆ ಉಳಿದುಕೊಳ್ಳುತಿದ್ದೆವು. ಅಡಿಗೆಯ ಅಷ್ಟೆ, ಎಷ್ಟೋ ಊರುಗಳಲ್ಲಿ ಊರ ಜನರೇ ನಮಗೆಲ್ಲ ಊಟ ಹಾಕುತಿದ್ದರು. ನಾವು ನಮ್ಮ ಜೊತೆ ಒಂದು ಟ್ರಾಕ್ಟರ್‌ನಲ್ಲಿ ಅಡಿಗೆ ಪಾತ್ರೆ ಮತ್ತು ಸಾಮಾನುಗಳನ್ನು ತೆಗೆದುಕೊಂಡೆ ಹೊರಟಿದ್ದೆವು. ಅಡಿಗೆ ಮಾಡಲು ಯಥಾಪ್ರಕಾರ ಈಶಣ್ಣ ಮತ್ತವರ ತಂಡ ರೆಡಿ ಇದ್ದರು.

ಪಾದಯಾತ್ರೆಯಂತಹ ಚಳವಳಿಗಳಲ್ಲಿ ಮೊದಲಿಗಿದ್ದ ಉತ್ಸಾಹ ದಿನದಿನಕ್ಕೂ ಕಡಿಮೆಯಾಗುತ್ತಾ ಹೋಗುತ್ತದೆ. ಹಾಗಾಗದೆ ಇರಲೆಂದು ಹಾಡು ಹೇಳುತ್ತಾ ಸಾಗುವುದು, ಅಲ್ಲಲ್ಲಿ ಸಭೆ ನಡೆಸಿ ರೈತರಿಂದಲೇ ಭಾಷಣ ಮಾಡಿಸುವುದು ಮಾಡುತಿದ್ದೆವು. ನಾನಂತೂ ರೈತರ ಫೋಟೊ ತೆಗೆಯುವುದು, ದಾರಿಯಲ್ಲಿ ಯಾವುದಾದರೂ ಲ್ಯಾಬ್ ಸಿಕ್ಕದರೆ ಪ್ರಿಂಟ್ ಮಾಡಿಸಿ ಅವರಿಗೆ ಫೋಟೊ ಹಂಚುವುದು, ಜೊತೆಗೆ ರೈತರ ಕೈಗೆ ಕ್ಯಾಮರಾ ಕೊಟ್ಟು ಅವರಿಗೆ ಫೋಟೊ ತೆಗೆಯುವುದನ್ನು ಕಲಿಸಿಕೊಡುವುದು ಮಾಡುತ್ತಿದ್ದೆ.

ಆದರೆ ಇಷ್ಟೆಲ್ಲದರ ನಡುವೆಯು ಹಲವಾರು ರೈತರು ವಿವಿಧ ಕಾರಣಗಳನ್ನೊಡ್ಡಿ ಅರ್ಧದಾರಿಯಲ್ಲೆ ವಾಪಸ್ ಮನೆಗೆ ತೆರಳಿದ್ದರು. ಪಾದಯಾತ್ರೆಗೆ ಹೊರಡುವಾಗ ರೈತರ ಸಂಖ್ಯೆ ಎರಡ್ಮೂರು ಸಾವಿರದಷ್ಟಿದ್ದರೆ ಅದು ಶಿವಮೊಗ್ಗ ಜಿಲ್ಲೆಯೊಂದರಿಂದಲೇ ಅರಸೀಕೆರೆಗೆ ಬರುವಷ್ಟರಲ್ಲಿ ಮುನ್ನೂರಕ್ಕೆ ತಲುಪಿತ್ತು. ಇದರಿಂದ ಬೇಸರಗೊಂಡ ಎನ್.ಡಿ. ಸುಂದರೇಶ್ "ನಾವೆಲ್ಲ ವಾಪಸ್ ಊರಿಗೆ ಹೋಗಿ ಮತ್ತೆ ರೈತರನ್ನು ಸಂಘಟಿಸಿಕೊಂಡು ಕರೆತರೋಣ" ಎಂದು ನಿರ್ಧಾರ ಪ್ರಕಟಿಸಿದರು. ನಾನು ಅವರ ಮಾತನ್ನು ಬಿಲ್‌ಕುಲ್ ಒಪ್ಪಲಿಲ್ಲ.

"ಚಳವಳಿಯನ್ನು ಅರ್ಧಕ್ಕೆ ಮುರಿದು ವಾಪಸ್ ಹೋಗೋದು ಸರಿ ಅಲ್ಲ. ಎಷ್ಟು ಜನ ಪಾಲ್ಗೊಳ್ಳುತ್ತಾರೆ ಅನ್ನೋದರ ಮೇಲೆ ಚಳವಳಿಯ ಯಶಸ್ಸು ನಿಂತಿಲ್ಲ. ನಿಜವಾದ ಕಾರಣಕ್ಕಾಗಿ ಒಬ್ಬನೇ ಒಬ್ಬ ಹೋರಾಟ ಮಾಡಿದರೂ ಅದು ಚಳವಳಿನೇ. ಯಾವುದೇ ಕಾರಣಕ್ಕೂ ವಾಪಸ್ ಹೋಗೋದು ಬೇಡ. ಎಷ್ಟು ಜನ ಬರ್‍ತಾರೋ ಬರಲಿ. ವಾಪಸ್ ಹೋದರೆ ನಮ್ಮ ಮೇಲಿನ ನಂಬಿಕೇನೆ ಹೊರಟುಹೋಗಿ ಈಗಿರುವಷ್ಟೂ ಜನವು ಬರೋದಿಲ್ಲ. ಇಷ್ಟರ ಮೇಲೂ ವಾಪಸ್ ಹೋಗೋದೆ ಸೈ ಅಂತಾದ್ರೆ ಯಾರ್‍ಯಾರು ಹೋಗ್ತಿರೋ ಹೋಗಿ ನಾನಂತೂ ಒಬ್ಬನೆ ಉಳಿದರೂ ಸರಿ ಪಾದಯಾತ್ರೆಯಲ್ಲಿ ಬೆಂಗಳೂರು ತಲುಪೋ ತನಕ ಮತ್ತೆ ತಿರುಗಿ ನೋಡೋದಿಲ್ಲ" ಎಂದೆ. ಸುಂದರೇಶ್‌ಗೂ ವಾಸ್ತವ ಅರ್ಥವಾಯಿತು. ಪಾದಯಾತ್ರೆ ನಿಲ್ಲಿಸುವುದು ಬೇಡ ಮುಂದುವರೆಸೋಣ ಎಂದು ನಿರ್ಧಾರ ಮಾಡಿದರು. ಸುಂದರೇಶ್ ಸ್ವಲ್ಪ ಸುಖಪಾಣಿ ಮನುಷ್ಯ. ನಡೆದು ನಡೆದು ಅವರ ಪಾದಗಳಿಗೆ ಗುಳ್ಳೆ ಏಳೋದು. ಹಗಲಿಡಿ ನಡೆಯೋ ಉತ್ಸಾಹದಲ್ಲಿ ಅದನ್ನು ಲೆಕ್ಕಿಸುತ್ತಿರಲಿಲ್ಲ, ರಾತ್ರಿ "ಅಯ್ಯೋ ನೋವು ಕಣ್ರಿ" ಅಂತ ನರಳೋರು. ಸುಂದರೇಶ್‌ರ ಊರಿನವರೇ ಆದ ಅಪ್ಪಣ್ಣ ಅನ್ನೋ ರೈತರು ಸುಂದ್ರೇಶ್ ಕಾಲಿಗೆ ಎಣ್ಣೆ ತಿಕ್ಕಿ, ಬಿಸಿನೀರು ಕಾಯಿಸಿ ಶಾಖ ಕೊಟ್ಟು ಉಪಚಾರ ಮಾಡೋರು. ಹಾಸನ, ತಿಪಟೂರು ಕಡೆಯ ರೈತ ಸಂಘಟನೆಯವರು ಪಾದಯಾತ್ರೆಯಲ್ಲಿ ನಮಗೆ ಜೊತೆಯಾದರು. ಅರಸೀಕೆರೆಯಿಂದ ಮುಂದೆ ಅದ್ಯಾವುದೋ ಊರಿನ ಕಾಡುದಾರಿಯಲ್ಲಿ ಸಾಗುತ್ತಿರುವಾಗ ಜೇನುನೊಣಗಳೆದ್ದು ಪಾದಯಾತ್ರೆಗೆ ಹೊರಟ ನಮ್ಮ ಮೇಲೆ ದಾಳಿ ನಡೆಸಿದವು. ನಾವು ಸಾವಿರಾರು ಸಂಖ್ಯೆಯಲ್ಲಿದ್ದರಿಂದ ಹೆಚ್ಚಿನ ಅಪಾಯವಾಗಲಿಲ್ಲ, ಒಬ್ಬೊಬ್ಬರು ಒಂದೊಂದು ನೊಣದ ಕೈಲಿ ಕಚ್ಚಿಸಿಕೊಂಡೆವು ಅಷ್ಟೆ.

ನಾನು ಪಾದಯಾತ್ರೆಗೆ ಹೊರಡುವಾಗ ಶಿವಮೊಗ್ಗದಲ್ಲಿ ಬಟ್ಟೆಯ ಶೂ ಕೊಂಡಿದ್ದೆ, ಬಾಟಾ ಕಂಪನಿಯದು. ಅದು ತಿಪಟೂರಿಗೆ ಹೋಗುವಷ್ಟರಲ್ಲಿ ಒಂದು ಬೂಟಿನ ಮುಂಭಾಗ ಸ್ವಲ್ಪ ಸವೆದು ಹೋಗಿ ಕಾಲಿಗೆ ಕಲ್ಲುಮುಳ್ಳು ಚುಚ್ಚತೊಡಗಿದವು. ತುಮಕೂರಿನಲ್ಲಿ ಒಂದು ಬಾಟಾ ಕಂಪನಿಯ ಶೋ ರೂಂ ನೋಡಿದ ಕೂಡಲೇ ಓಡಿಹೋಗಿ "ಹೀಗೆ ಹೊಸ ಬೂಟು ಶಿವಮೊಗ್ಗದಲ್ಲಿ ಕೊಂಡು 15 ದಿನಗಳೂ ಆಗಿಲ್ಲ, ಸವೆದುಹೋಗಿದೆ .ನಿಮ್ಮದೆ ಕಂಪನಿ ಆದ್ದರಿಂದ ಬದಲಾಯಿಸಿ ಬೇರೆ ಬೂಟು ಕೊಡಿ" ಎಂದು ಬೇಡಿದೆ. ಅದೆಲ್ಲ ಆಗಲ್ಲ ನೀವು ಎಲ್ಲಿ ಕೊಂಡಿದ್ದೀರೋ ಅದೇ ಶೂ ರೂಂಗೆ ಒಯ್ದು ಬದಲಾಯಿಸಿಕೊಳ್ಳಬೇಕು ಎಂದರು. ಬೇರೆ ಬೂಟು ಕೊಳ್ಳುವಷ್ಟು ಹಣವೂ ಇಲ್ಲದ್ದರಿಂದ ಕಲ್ಲು ಮುಳ್ಳು ಚುಚ್ಚಿಸಿಕೊಂಡೇ ನಡೆದೆ.

ಉತ್ತರ ಕರ್ನಾಟಕ ಕಡೆಯ ರೈತರು ಬೃಹತ್ ಸಂಖ್ಯೆಯಲ್ಲಿ ಬಾಬಾಗೌಡ ಪಾಟೀಲರ ನೇತೃತ್ವದಲ್ಲಿ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಅವರ ಗುಂಪಿನಲ್ಲಿ ಮಹಿಳೆಯರ ಸಂಖ್ಯೆ ಜಾಸ್ತಿಯಿತ್ತು, ಆ ತಾಯಂದಿರು ಪಾದಯಾತ್ರೆಯುದ್ದಕ್ಕೂ ಸಾಕಾಗುವಷ್ಟು ಕಟಕಲು ರೊಟ್ಟಿಯ ಬುತ್ತಿಯನ್ನು ಹೊತ್ತು ತಂದಿದ್ದರು. ಅವರಲ್ಲಿ ಒಂದಿಬ್ಬರು ಮಹಿಳೆಯರು ನನ್ನ ಬೂಟು ಸವೆದು ನಾನು ಪಡುತ್ತಿರುವ ಪಾಡನ್ನು ನೋಡಿ "ಅಣ್ಣಾವ್ರೆ, ನಾವು ಸರಿ ಮಾಡಿಕೊಡುತ್ತೇವೆ ಕೊಡ್ರಿ" ಎಂದು ಪಡೆದು ಸವೆದ ಬಾಗಕ್ಕೆ ಕಟಕಲು ರೊಟ್ಟಿಯ ತುಂಡೊಂದನ್ನು ಅಂಟಿಸಿ ಹೊಲಿದು ವಾಪಸ್ ಕೊಟ್ಟರು. ಆ ರೊಟ್ಟಿಯ ತುಂಡು ಬೂಟಿನ ಬಟ್ಟೆಗಿಂತಲೂ ಗಟ್ಟಿಯಾಗಿದ್ದು ಪಾದಯಾತ್ರೆ ಮುಗಿಸಿ ಊರಿಗೆ ಬಂದು ಬಹಳ ದಿನದ ಮೇಲೂ ಒಂದು ಚೂರೂ ಸವೆದಿರಲಿಲ್ಲ.

ಬೆಂಗಳೂರು ತಲುಪುವ ಹೊತ್ತಿಗೆ ಎಲ್ಲೆಡೆಯಿಂದ ಬಂದ ರೈತರ ಸಂಖ್ಯೆ ಬರೊಬ್ಬರಿಯಾಗಿತ್ತು. 19 ದಿನಗಳ ದೀರ್ಘ ಪಾದಯಾತ್ರೆ ಮಾಡಿ ಬೆಂಗಳೂರು ತಲುಪಿದ ನಮ್ಮನ್ನು ಬೆಂಗಳೂರಿನ ಜನತೆ ತಂಪು ಪಾನೀಯ, ಚಪಾತಿ ಪಲ್ಯ ಕೊಟ್ಟು ದಾರಿಯುದ್ದಕ್ಕೂ ಸತ್ಕರಿಸಿತು. ರೈತರ ಪಾದಯಾತ್ರೆಯ ಅನುಭವವನ್ನು ಸಂಗ್ರಹಿಸಿ ವರದಿ ಮಾಡಲು ಲಂಕೇಶ್ ಟಿ.ಎನ್. ಸೀತಾರಾಂ ಅವರನ್ನು ಕಳಿಸಿದ್ದರು. "ನಂಜನಗೂಡಿನಿಂದ ಪಾದಯಾತ್ರೆ ಹೊರಡುತ್ತೇನೆ. ಅದಕ್ಕಾಗಿ ಗಿರಕಿ ಚಡಾವಿನ ಪಂಪ್ ಶೂ ತೆಗೆದುಕೊಂಡಿದ್ದೇನೆ" ಎಂದು ಸಾರಿದ್ದ ನಂಜುಂಡಸ್ವಾಮಿಯವರು ಮಾತ್ರ ಪಾದಯಾತ್ರೆ ಮಾಡೇ ಇರಲಿಲ್ಲ, ಬೆಂಗಳೂರಿನ ಸಭೆಯಲ್ಲಿ "ಏನ್ಸಾರ್, ಗಿರಕಿ ಚಡಾವಿನ ಬೂಟು ಹೊಲೆಸಿದ್ದು ಹೊರಗೆ ತೆಗೆದೆ ಇಲ್ಲ?" ಎಂದರೆ, "ನಾನು ಪಾದಯಾತ್ರೆ ಹೊರಟರೆ ಇಲ್ಲಿ ಬೆಂಗಳೂರಿನಲ್ಲಿ ಕಾರ್ಯಕ್ರಮ ಆಯೋಜಿಸುವವರು ಯಾರ್‍ರಿ?" ಅಂದ್ರು. ಅವರು ಹೇಳಿದ್ದರಲ್ಲಿ ಸುಳ್ಳಿರಲಿಲ್ಲ, ಪಾದಯಾತ್ರೆ ಹೊರಟೋಕೆ, ಹೊರಡಿಸೋಕೆ ನಮ್ಮಿಂದ ಸಾಧ್ಯವಿತ್ತು, ಆದರೆ ಬೆಂಗಳೂರಿಗೆ ನಮ್ಮ ಕೂಗನ್ನು ತಲುಪಿಸಲಿಕ್ಕೆ ಪ್ರೊಫೆಸರ್ ಬೇಕೇ ಬೇಕಿತ್ತು. ■

R B P LANKESH, Kannada Weekly Price Rs. 12/- 6-05 -2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ಅಭಿನಯದಲ್ಲಿ ಚೆಲ್ಲಿದ ಸಂಪಿಗೆ!



ಹಿಂದಿ ಚಿತ್ರಗಳನ್ನೇ ಪ್ರದರ್ಶನ ಮಾಡುವ ಅಭಿನಯ ಚಿತ್ರಮಂದಿರದಲ್ಲಿ ಕಳೆದ ವಾರ ಪ್ರಶಾಂತ್ ಅಭಿನಯದ 'ಹೃದಯಗಳ ವಿಷಯ' ಬಿಡುಗಡೆಯಾಗಿತ್ತು, ಅದಾದ ಮೂರೇ ದಿನಕ್ಕೆ ಆ ಚಿತ್ರ ಥಿಯೇಟರ್‌ನಿಂದ ಎತ್ತಂಗಡಿಯಾಗಿತ್ತು, ಈಗ ಮತ್ತೆ ಪ್ರಶಾಂತ್ ಅಭಿನಯದ ಎಸ್.ನಾರಾಯಣ್ ನಿರ್ದೇಶನದ 'ಚೆಲ್ಲಿದರು ಸಂಪಿಗೆಯಾ' ಅದೇ ಅಭಿನಯದಲ್ಲಿ ತೆರೆ ಕಾಣುತ್ತಿದೆ. 'ಹೋದೆಯಾ ಪಿಶಾಚಿ ಅಂದ್ರೆ, ಬಂದೇ ಗವಾಕ್ಷೀಲಿ..' ಎಂದು ಅಭಿನಯದ ಸಿಬ್ಬಂದಿಗಳು ಗೊಣಗುತ್ತಿದ್ದಾರೆ.

ಜಂಗ್ಲಿ ಜೋಡಿ–ನೋಡಿ!



ಇತ್ತೀಚೆಗೆ ಯುವ ನಾಯಕ ನಟರೆಲ್ಲ ತಮ್ಮ ಚಿತ್ರಕ್ಕೆ ಮುಂಬೈ ಬೆಡಗಿಯೋ ಅಥವಾ ಚೆನ್ನೈ ಚೆಲುವೆಯೋ ಬೇಕೆಂದು ನಿರ್ಮಾಪಕರ ತಲೆ ತಿನ್ನುವುದು ಸಾಮಾನ್ಯವಾಗಿದೆ. ಆದರೆ ಗುಂಡು ಕಲ್ಲಿನಂತಿರುವ ವಿಜಯ್ ಮಾತ್ರ "ನನ್ನ ನಾಯಕಿಯಾಗಿ ನಮ್ಮ ಕನ್ನಡ ಅಪ್ಪಟ ಪ್ರತಿಭೆ ಶುಭಾ ಪೂಂಜಾಳೆ ಬೇಕು" ಎನ್ನುತ್ತಿರುವುದು ಗಾಂಧಿನಗರದಲ್ಲಿ 'ಅಚ್ಚರಿ' ಹುಟ್ಟಿಸಿದೆ!



ಈ ಹಿಂದೆ 'ಚಂಡ' ಮತ್ತು 'ಸ್ಲಂ ಬಾಲಾ' ಚಿತ್ರಗಳಲ್ಲಿ ನಟಿಸಿದ್ದ ವಿಜಯ್ ಮತ್ತು ಶುಭಾ ಪೂಂಜಾ ಈಗ ಮೂರನೆ ಬಾರಿ 'ತಾಕತ್ತು' ಚಿತ್ರದಲ್ಲಿ ಜೊತೆಯಾಗಿ ನಟಿಸಿದ್ದಾರೆ. ಸದ್ಯದಲ್ಲೇ ಈ ಚಿತ್ರ ಬಿಡುಗಡೆಯಾಗಿ ಈ ಜೋಡಿ ತನ್ನ ತಾಕತ್ತನ್ನು ಬಾಕ್ಸ್ ಆಫೀಸಿನಲ್ಲಿ ತೋರಿಸಬೇಕಿದೆ.

ಇಲ್ಲಿಯತನಕ ಈ ಜೋಡಿ ಅಷ್ಟೇನೂ ಜನ ಮೆಚ್ಚುಗೆ ಪಡೆದಿಲ್ಲ. ಈಗ 'ತಾಕತ್ತು' ಚಿತ್ರ ಗೆದ್ದರೆ ಮಾತ್ರ ಈ ಜೋಡಿಗೆ ಗಾಂಧಿನಗರದಲ್ಲಿ ಡಿಮ್ಯಾಂಡ್ ಬರಬಹುದು.

ನಂಜನಗೂಡ್ನಿಂದ ನಂಜುಂಡ ಬರ್ತಾವ್ನೆ!



'ಪಯಣ' ಚಿತ್ರದ ಮುಖಾಂತರ ಕಿರುತೆರೆಯಿಂದ ಬೆಳ್ಳಿತೆರೆಗೆ ಪಯಣಿಸಿದ 'ಸಿಲ್ಲಿ-ಲಲ್ಲಿ' ಖ್ಯಾತಿಯ ರವಿಶಂಕರ್ ಈಗ 'ನಂಜನಗೂಡಿನ ನಂಜುಂಡ' ಎಂಬ ಚಿತ್ರದಲ್ಲಿ ನಾಯಕನಾಗಿ ನಟಿಸಲಿದ್ದಾರೆ. ಮೊನ್ನೆ ಮೊನ್ನೆ ತಮಿಳಿನಲ್ಲಿ ಜಯಭೇರಿ ಬಾರಿಸಿದ 'ದಿಂಡಿಗಲ್ ಸಾರಥಿ' ಚಿತ್ರದ ಜೆರಾಕ್ಸ್ ಕಾಪಿ ಈ ಚಿತ್ರ. ಅಂದಹಾಗೆ, 'ದಿಂಡಿಗಲ್ ಸಾರಥಿ' ಚಿತ್ರದ ನಾಯಕಿ ಕಾರ್ತಿಕಾಳೇ ಕನ್ನಡದ ರಿಮೇಕ್‌ನಲ್ಲೂ ನಟಿಸಬೇಕೆಂಬುದು ಚಿತ್ರ ತಂಡದ ಹಠವಂತೆ.

ವಿಚಿತ್ರವೆಂದರೆ 'ಗಮ್ಯಂ' ಎಂಬ ತಮಿಳು ಚಿತ್ರದಲ್ಲಿ ನಟಿಸಿದ್ದ ನಾಯಕಿ ಕಮಲಿನಿ ಮುಖರ್ಜಿಯೇ ಅದರ ಕನ್ನಡ ಅವತರಣಿಕೆಯಾದ 'ಸವಾರಿ'ಯಲ್ಲೂ ನಟಿಸಬೇಕೆಂದು ಆ ಚಿತ್ರದ ತಂಡ ಬಯಸಿತ್ತು, ಅದಕ್ಕೆ ಆಕೆ ಒಪ್ಪಿ ನಟಿಸಿದ್ದರೂ 'ಸವಾರಿ' ಬಾಕ್ಸಾಫೀಸಿನಲ್ಲಿ ಮಾತ್ರ ಮುಂದೆ ಸಾಗಲಿಲ್ಲ, ಈ ವಿಷಯ 'ನಂಜನಗೂಡಿನ ನಂಜುಂಡ'ರಿಗೆ ಗೊತ್ತಿರುವಂತಿಲ್ಲ.

ಇಪ್ಪತು ವರ್ಷಗಳ ಹಿಂದೆ ಮಲೆಯಾಳಂನಲ್ಲಿ ತೆರೆಕಂಡ ಈ ಚಿತ್ರದ ಕಥಾವಸ್ತು: ಕೈಹಿಡಿದ ಹೆಂಡತಿಯನ್ನು ಸಂಶಯದಿಂದ ನೋಡುವುದು. ಅಲ್ಲಿ ಹಿಟ್ ಆದ ನಂತರ ತಮಿಳಿಗೆ ಮೊನ್ನೆ ರಿಮೇಕ್ ಆಗಿ ಇದೀಗ ಕನ್ನಡಕ್ಕೆ 'ನಂಜನಗೂಡಿನ ನಂಜುಂಡ'ನಾಗಿ ವಲಸೆ ಬರುತ್ತಿದೆ.

ಕನ್ನಡ ಚಿತ್ರರಂಗ ಎಷ್ಟೊಂದು 'ವೇಗ'ವಾಗಿ ಬೆಳೆಯುತ್ತಿದೆ ನೋಡಿ.

ಕೃತಜ್ಞತೆ ತೋರದ ಕುಳ್ಳ






ನಟಿ ಸೌಂದರ್ಯ ವಿಧಿವಶಳಾಗಿ ಐದು ವರ್ಷಗಳು ಸಂದುಹೋಗಿವೆ. ಆಗ ಚುನಾವಣಾ ಪ್ರಚಾರಕ್ಕಾಗಿ ಹೊರಟ ಲಘುವಿಮಾನ ಅಪಘಾತಕ್ಕೀಡಾಗಿ ಸೌಂದರ್ಯ ದುರ್ಮರಣಕ್ಕೀಡಾದರು. ಕಾಕತಾಳೀಯವೆಂದರೆ ಈಗ ಮತ್ತೆ ಲೋಕಸಭಾ ಚುನಾವಣೆ ನಡೆಯುತ್ತಿದೆ. ಆದರೆ ಬಿಜೆಪಿಯವರು ಅಪ್ಪಿತಪ್ಪಿಯೂ ಈ ಬಾರಿ ಆಕೆಯ ಆತ್ಮಕ್ಕೆ ಶಾಂತಿಕೋರಲಿಲ್ಲ ಅಥವಾ ಕನಿಷ್ಠ ಆಕೆಯನ್ನು ನೆನಪಿಸಿಕೊಳ್ಳುವ ಸೌಜನ್ಯ ಕೂಡಾ ತೋರಿಸಿಲ್ಲ.

ರಾಜಕಾರಣಿಗಳೇ ಹೀಗೆ ಎಂದು ನಾವು ಸುಮ್ಮನಿರಬಹುದು. ಆದರೆ ಸಿನಿಮಾದವರ ವರ್ತನೆ ಇನ್ನೂ ತಲೆತಗ್ಗಿಸುವಹಾಗಿದೆ. ಮೊನ್ನೆ ಸುವರ್ಣ ಚಾನೆಲ್‌ನವರು ಸೌಂದರ್ಯ ಬಗ್ಗೆ ವಿಶೇಷ ಕಾರ್ಯಕ್ರಮದಲ್ಲಿ ಮಾತನಾಡಲು ಅನೇಕರನ್ನು ಸಂಪರ್ಕಿಸಿದಾಗ ಒಬ್ಬೊಬ್ಬರು ಒಂದೊಂದು ಕಾರಣಕೊಟ್ಟು ಜಾರಿಕೊಂಡರಂತೆ. ಅದರಲ್ಲೂ ದ್ವಾರಕೀಶ್ ಮಾತ್ರ ಕಾರ್ಯಕ್ರಮಕ್ಕೆ ಬರಲಾಗದ್ದಕ್ಕೆ ನೀಡಿದ ಕಾರಣ ನಿಜಕ್ಕೂ ವಿಚಿತ್ರವಾಗಿದೆ. "ಎರಡು ವಾರದ ಹಿಂದೆ ನನ್ನ ಮಗ ಅಮೆರಿಕದಿಂದ ಬಂದಿದ್ದಾನೆ, ಹೀಗಾಗಿ ಅವನ ಜೊತೆ ಕಾಲ ಕಳೆಯಬೇಕಾಗಿದೆ" – ಇದು ಕುಳ್ಳ ನೀಡಿದ ಸಬೂಬು.

ಸೌಂದರ್ಯಳ ಅದ್ಭುತ ನಟನೆಯಿಂದಲೇ 'ಆಪ್ತಮಿತ್ರ' ಗೆದ್ದು ಈ ಕುಳ್ಳನಿಗೆ ಪುನರ್‌ಜನ್ಮ ಸಿಕ್ಕಿತ್ತು, ಅವಕಾಶ ಸಿಕ್ಕಾಗಲೆಲ್ಲ ಆಕೆಯ ಬಗ್ಗೆ ಎಮೋಷನಲ್ ಆಗಿ ಮಾತನಾಡುವ ದ್ವಾರಕಿಗೆ ಒಂದರ್ಧ ಗಂಟೆ ಬಿಡುವು ಮಾಡಿಕೊಂಡು ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಬರಲಾಗಲಿಲ್ಲವೆಂದರೆ ಏನು ಹೇಳೋಣ? ಇದು ಸಿನಿಮಾ ಪ್ರಪಂಚದಲ್ಲಿ ಮಾಮೂಲಿ ಎಂದು ಸುಮ್ಮನಿರಬೇಕು ಅಷ್ಟೇ.



ರಾಜ್
ಇಶಾ ಕೊಠಾರಿ

'ರಾಜ್' ಲೆಕ್ಕ ಬುಡಮೇಲು



'ರಾಜ್' ಚಿತ್ರವನ್ನು ಡಾ.ರಾಜ್‌ಕುಮಾರ್ ಹುಟ್ಟುಹಬ್ಬದ ದಿನದಂದೇ ಬಿಡುಗಡೆ ಮಾಡುತ್ತೇನೆಂದು ಮುಹೂರ್ತ ದಿನವೇ ನಿರ್ದೇಶಕ ಪ್ರೇಮ್ ಪ್ರತಿಜ್ಞೆ ಮಾಡಿದ್ದರು. ಆ ಕಾರಣಕ್ಕೆ ಪುನೀತ್ ರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ ಈ ಚಿತ್ರಕ್ಕೆ ಪ್ರೇಮ್ ತುಂಬಾ ಆಲೋಚನೆ ಮಾಡಿ 'ರಾಜ್' ಎಂದು ಹೆಸರಿಟ್ಟಿದ್ದರು. ರಾಜ್ ಹುಟ್ಟುಹಬ್ಬಕ್ಕೆ-'ರಾಜ್' ಬಿಡುಗಡೆ ಎಂದು ಭರ್ಜರಿಯಾಗಿ ಪ್ರಚಾರ ಮಾಡುವ ಸ್ಕೆಚ್ ಹಾಕಿಕೊಂಡಿದ್ದರು. ಆದರೆ ಪಾಪ ಪ್ರೇಮ್ ಲೆಕ್ಕಾಚಾರವೆಲ್ಲ ಬುಡಮೇಲಾಗಿ ರಾಜ್ ಅವರ ಹುಟ್ಟುಹಬ್ಬ ಬಂದುಹೋದರೂ ಚಿತ್ರ ಸಿದ್ಧಗೊಂಡಿಲ್ಲ. ಹೀಗಾಗಿ ಅವರ ಪ್ರಚಾರ ತಂತ್ರಗಳೆಲ್ಲಾ ವೇಸ್ಟಾಗಿದೆ.

ಈಗ ಸದ್ಯಕ್ಕೆ ರಾಜ್ ಕುಟುಂಬದಲ್ಲಿ ಯಾರ ಬರ್ತ್‌ಡೇ ಬರಲಿದೆ ಎಂದು ಪ್ರೇಮ್ ಕ್ಯಾಲೆಂಡರ್ ನೋಡುತ್ತಾ ಕೂತಿದ್ದಾರಂತೆ!



ಗ್ರಾಮ ಪಂಚಾಯತಿ ಕಾರ್ಯದರ್ಶಿ ನೇಮಕಾತಿ

ಗೈಡ್ ವಿಶೇಷಾಂಕ

ಮೇ 2009ರ ಹೊಸ ಸಂಚಿಕೆ

ಎಲ್ಲೆಡೆ ಲಭ್ಯ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44